Editor: NITYANANDASWAMI Publisher: U. BASAVARAJA RNI No. KARKAN/2006/17926

ಜನಶಕ್ತಿ ಕನ್ನಡ ವಾರ ಪತ್ರಿಕೆ

ದುಡಿಯುವ ಜನರ ಪ್ರಾಣಮಿತ್ರ

JANASHAKTHI KANNADA VARA PATRIKE

ಸಂಪುಟ 16 | ಸಂಚಿಕೆ 43 | ಅಕ್ಟೋಬರ್ 17–23, 2022 | ಪುಟ 16 | ರೂ.10/-

Volume: 16 Issue: 43 October 17-23, 2022 Pages: 16 Price: 10/-

https://janashakthi.wordpress.com e-mail : js_weekly@yahoo.com



ಓಲಾ, ಊಬರ್ ಆಟೋ ನಿಷೇಧವೆಂಬ ನಾಟಕ



ಹಿಂದಿ ಹೇರಿಕೆ ಬೇಡ

ರೈತ ವಿರೋಧಿ ಸರಕಾರ ಮನೆಗೆ ಕಳುಹಿಸಲು ಕರೆ

ಯುರೋಪಿನಲ್ಲಿ ಹಣದುಬ್ಬರದ ನಾಗಾಲೋಟ

ಮುಲಾಯಂ ಸಿಂಗ್ ಯಾದವ್–ಸಿಪಿಐ(ಎಂ) ಪೊಲಿಟ್‌ಬ್ಯುರೊ ಶ್ರದ್ಧಾಂಜಲಿ

ಸಮಾಜವಾದಿ ಪಕ್ಷದ ಹಿರಿಯ ನಾಯಕ, ಮೂರು ಬಾರಿ ಉತ್ತರ ಪ್ರದೇಶದ ಮುಖ್ಯಮಂತ್ರಿಯಾಗಿದ್ದ, ಮತ್ತು ಮಾಜಿ ಕೇಂದ್ರ ರಕ್ಷಣಾ ಸಚಿವರಾಗಿದ್ದ ಶ್ರೀ ಮುಲಾಯಂ ಸಿಂಗ್ ಯಾದವ್ ಅವರ ನಿಧನಕ್ಕೆ ಸಿಪಿಐ(ಎಂ) ಪೊಲಿಟ್ ಬ್ಯೂರೋ ತನ್ನ ತೀವ್ರ ದುಃಖವನ್ನು ವ್ಯಕ್ತಪಡಿಸಿದೆ.

ಶ್ರೀ ಮುಲಾಯಂ ಸಿಂಗ್ ಸಾಮಾಜಿಕ ನ್ಯಾಯದ ಹೋರಾಟದಲ್ಲಿ ಒಬ್ಬ ಪ್ರಮುಖ ವ್ಯಕ್ತಿಯಾಗಿ ಹೊರಹೊಮ್ಮಿದರು. ರಾಜಕೀಯ ನಾಯಕರಾಗಿ ಮತ್ತು ಮುಖ್ಯಮಂತ್ರಿಯಾಗಿ ಅವರು ಕಳೆದ ಮೂರು ದಶಕಗಳಲ್ಲಿ ಕೋಮುವಾದಿ ಶಕ್ತಿಗಳ ವಿರುದ್ಧ ಹೋರಾಡಲು ಮತ್ತು ಜಾತ್ಯತೀತತೆಯನ್ನು ರಕ್ಷಿಸಲು ದೊಡ್ಡ ಕೊಡುಗೆ ನೀಡಿದ್ದಾರೆ ಎಂದು ಪೊಲಿಟ್‌ಬ್ಯುರೊ ನೆನಪಿಸಿಕೊಂಡಿದೆ.

ಶ್ರೀ ಮುಲಾಯಂ ಸಿಂಗ್ ಅವರು ನಿರ್ಣಾಯಕ ಘಟ್ಟಗಳಲ್ಲಿ ಜಾತ್ಯತೀತ ಶಕ್ತಿಗಳ ವಿಶಾಲ ಮೈತ್ರಿಯನ್ನು ರೂಪಿಸುವಲ್ಲಿ ಸಿಪಿಐ(ಎಂ) ಮತ್ತು ಎಡಪಕ್ಷಗಳೊಂದಿಗೆ ನಿಕಟವಾಗಿ ಕೆಲಸ ಮಾಡಿದರು ಎಂದಿರುವ ಸಿಪಿಐ(ಎಂ) ಪೊಲಿಟ್‌ಬ್ಯುರೊ ಶ್ರೀ ಅಖಿಲೇಶ್ ಯಾದವ್ ಮತ್ತು ಅವರ ಕುಟುಂಬದ ಎಲ್ಲಾ ಸದಸ್ಯರು ಮತ್ತು ಅವರ ಸಮಾಜವಾದಿ ಪಕ್ಷದ ಸಹೋದ್ಯೋಗಿಗಳಿಗೆ ತನ್ನ ಹೃತ್ಪೂರ್ವಕ ಸಂತಾಪವನ್ನು ವ್ಯಕ್ತಪಡಿಸಿದೆ.



“ನಗರ ನಕ್ಸಲರ ಬಗ್ಗೆ ಎಚ್ಚರಿಸಲು ಬಂದಿದ್ದೇನೆ”
ದಿಲ್ಲಿಯಲ್ಲಿ ತನ್ನ ಪಕ್ಷದ ಸಂಸದರು ದ್ವೇಷದ ನಾಲಗೆ ಹರಿಬಿಟ್ಟಿರುವಾಗ ಮೌನ ವಹಿಸಿರುವ ಪ್ರಧಾನಿಗಳು ಗುಜರಾತಿನಲ್ಲಿ ‘ನಗರ ನಕ್ಸಲ’ರ ಮಾತಾಡುತ್ತಿದ್ದಾರೆ!
(ವ್ಯಂಗ್ಯಚಿತ್ರ ಕೃಪೆ: ಸತೀಶ ಆಚಾರ್ಯ)



ಮತ್ತೊಮ್ಮೆ ದಿಲ್ಲಿ ಬಿಜೆಪಿ ಸಂಸದನ ದ್ವೇಷ ಭಾಷಣ–ಸಿಪಿಐ(ಎಂ) ಖಂಡನೆ

ಪಶ್ಚಿಮ ದಿಲ್ಲಿಯ ಬಿಜೆಪಿ ಸಂಸದ ಪರ್ವೇಶ್ ವರ್ಮಾ ಅಕ್ಟೋಬರ್ 9 ರಂದು ವಿಎಚ್‌ಪಿ ಆಯೋಜಿಸಿದ್ದ ಸಭೆಯಲ್ಲಿ ಮುಸ್ಲಿಂ ಸಮುದಾಯದ ‘ಸಂಪೂರ್ಣ ಬಹಿಷ್ಕಾರ’ಕ್ಕೆ ಕರೆ ನೀಡಿದರು, ಮುಸ್ಲಿಮರಿಂದ ಏನನ್ನೂ ಖರೀದಿಸಬೇಡಿ ಮತ್ತು ಅವರಿಗೆ ವೇತನ ನೀಡಬೇಡಿ ಎಂದು ಅವರು ಸಭಿಕರನ್ನು ಬಹಿರಂಗವಾಗಿ ಎಚ್ಚರಿಸಿದರು ಎಂದು ವರದಿಯಾಗಿದೆ. ವಿಎಚ್‌ಪಿ ಜಂಟಿ ಕಾರ್ಯದರ್ಶಿ ಸುರೇಂದ್ರ ಜೈನ್ ‘ಒಂದು ಸಮುದಾಯವು’ ದೆಹಲಿಯನ್ನು ಮಿನಿ ಪಾಕಿಸ್ತಾನವನ್ನಾಗಿ ಮಾಡಲು ಪ್ರಯತ್ನಿಸುತ್ತಿದೆ ಎಂದು ಆರೋಪಿಸಿದರು ಎಂದೂ ಆ ವರದಿಗಳು ಹೇಳಿವೆ. ಈ ಹೇಳಿಕೆಗಳು ಕೋಮು ದ್ವೇಷವನ್ನು ಕೆರಳಿಸುವ, ಮುಸ್ಲಿಂ ಸಮುದಾಯದ ವಿರುದ್ಧ ದ್ವೇಷವನ್ನು ಪ್ರಚೋದಿಸುವ ಭೀಕರ ಪ್ರಯತ್ನವಾಗಿದೆ ಎಂದು ಇದನ್ನು ಸಿಪಿಐ(ಎಂ) ದೆಹಲಿ ರಾಜ್ಯ ಸಮಿತಿ ತೀವ್ರವಾಗಿ ಖಂಡಿಸಿದೆ.

ದೆಹಲಿಯಲ್ಲಿ ಕೋಮು ಸೌಹಾರ್ದವನ್ನು ಕದಡುವ ಉದ್ದೇಶದಿಂದ ಪರ್ವೇಶ್ ವರ್ಮಾ ಇಂತಹ ಕೊಳ್ಳಿಯಿಡುವ ಭಾಷಣಗಳಲ್ಲಿ ತೊಡಗಿರುವುದು ಇದೇ ಮೊದಲಲ್ಲ. 2020 ರಲ್ಲಿ ದೆಹಲಿ ವಿಧಾನಸಭಾ ಚುನಾವಣೆಯ ಮೊದಲು ಮತ್ತು ನಂತರ ಕಪಿಲ್ ಮಿಶ್ರಾರೊಂದಿಗೆ ಈತನ ಭಾಷಣವೂ ಈಶಾನ್ಯ ದೆಹಲಿಯಲ್ಲಿ 54 ಮುಗ್ಧ ಜೀವಗಳನ್ನು ಬಲಿ ತೆಗೆದುಕೊಂಡಿತು ಕೋಮು ಹಿಂಸಾಚಾರಕ್ಕೆ ಕಾರಣವಾಯಿತು, ಆದರೂ ನೇರವಾಗಿ ಕೇಂದ್ರ ಸರಕಾರದ ಅಧೀನದಲ್ಲಿರುವ ದೆಹಲಿ ಪೊಲೀಸರು ಅವರ ವಿರುದ್ಧ ಯಾವುದೇ ಕ್ರಮ ಕೈಗೊಳ್ಳಲು ನಿರಾಕರಿಸಿದರು ಎಂಬುದನ್ನು ಸಿಪಿಐ(ಎಂ) ನೆನಪಿಸಿದೆ.

ಉದ್ದೇಶಪೂರ್ವಕವಾಗಿ ಮುಸ್ಲಿಂ ಸಮುದಾಯದ ವಿರುದ್ಧ ದ್ವೇಷವನ್ನು ಪ್ರಚೋದಿಸಲು ಮತ್ತು ಕೋಮು ಶಾಂತಿಯನ್ನು ಕದಡಲು ಪ್ರಯತ್ನಿಸುತ್ತಿರುವ ಪರ್ವೇಶ್ ವರ್ಮಾ, ಸುರೇಂದ್ರ ಜೈನ್ ಮತ್ತು ಇತರರನ್ನು ತಕ್ಷಣವೇ ಬಂಧಿಸಬೇಕು ಮತ್ತು ಎಂದು ಸಿಪಿಐ(ಎಂ) ಒತ್ತಾಯಿಸಿದೆ.

“ಮಾದರಿ ನೀತಿ ಸಂಹಿತೆಗೆ ಪ್ರಸ್ತಾವಿತ ತಿದ್ದುಪಡಿ ಅನಗತ್ಯ–ಅನಪೇಕ್ಷಣೀಯ”

ಚುನಾವಣಾ ಆಯೋಗಕ್ಕೆ ಸಿಪಿಐ(ಎಂ) ಪ್ರಧಾನ ಕಾರ್ಯದರ್ಶಿ ಪತ್ರ

ಮಾದರಿ ನೀತಿ ಸಂಹಿತೆಗೆ ಪ್ರಸ್ತಾವಿತ ತಿದ್ದುಪಡಿ ಅನಗತ್ಯವೂ ಆಗಿದೆ, ಅನಪೇಕ್ಷಣೀಯವೂ ಆಗಿದೆ ಎಂದು ಸಿಪಿಐ(ಎಂ) ಪ್ರಧಾನ ಕಾರ್ಯದರ್ಶಿ ಸೀತಾರಾಂ ಯೆಚುರಿ ಮುಖ್ಯ ಚುನಾವಣಾ ಆಯುಕ್ತರಿಗೆ ಬರೆದಿರುವ ಪತ್ರದಲ್ಲಿ ತಿಳಿಸಿದ್ದಾರೆ. ಚುನಾವಣಾ ಆಶ್ವಾಸನೆಗಳ ವಿವರಗಳು ಮತ್ತು ಅವುಗಳ ಹಣಕಾಸು ಪರಿಣಾಮಗಳ ವಿವರಗಳನ್ನು ಬಹಿರಂಗಪಡಿಸಲು ಮಾದರಿ ನೀತಿ ಸಂಹಿತೆಯ ಪ್ರಸ್ತಾವಿತ ತಿದ್ದುಪಡಿ ಮತ್ತು ಪ್ರಪತ್ರವನ್ನು ಕಳಿಸಿರುವ ಭಾರತದ ಚುನಾವಣಾ ಆಯೋಗದ ಪತ್ರಕ್ಕೆ ಉತ್ತರವಾಗಿ ಅವರು ಅಕ್ಟೋಬರ್ 14 ರಂದು ಬರೆದಿರುವ ಪತ್ರದಲ್ಲಿ ಇದಕ್ಕೆ ನಾಲ್ಕು ಕಾರಣಗಳನ್ನು ಕೊಡುತ್ತ ಪ್ರಸ್ತಾವಿತ ತಿದ್ದುಪಡಿಯನ್ನು ಹಿಂಪಡೆಯುವಂತೆ ಆಗ್ರಹಿಸಿದ್ದಾರೆ.

ಸಿಪಿಐ(ಎಂ)ನ ಈ ಆಗ್ರಹಕ್ಕೆ ನೀಡಿರುವ ನಾಲ್ಕು ಕಾರಣಗಳು: ಇದು ಆಯೋಗವು ತನ್ನ ವ್ಯಾಪ್ತಿಗೆ ಬರದ ರಾಜಕೀಯ ಮತ್ತು ನೀತಿ ವಿಷಯಗಳಲ್ಲಿ ತೊಡಗುವಂತೆ ಮಾಡುತ್ತದೆ; ಇವು ರಾಜಕೀಯ ಮತ್ತು ನೀತಿಯ ಪ್ರಶ್ನೆಗಳು; ಇದು ಆಯೋಗವು ತೆಗೆದುಕೊಂಡ ಒಂದು ಸರಿಯಾದ ಮತ್ತು ಮಾನ್ಯ ನಿಲುವಿನ ವಿಷಯದಲ್ಲಿ ಆಯೋಗವು ಮನಸ್ಸು ಬದಲಿಸಿದಂತೆ ತೋರುತ್ತಿರುವ, ರಾಜಕೀಯ ಪಕ್ಷಗಳು ಮತ್ತು ಜನರಿಗೆ ಸಂಬಂಧಿಸಿದ ಕ್ಷೇತ್ರದಲ್ಲಿ ಹೆಚ್ಚು ಅತಿಕ್ರಮಿಸುವ ಪ್ರಸ್ತಾವ; ಮತ್ತು ಕೊನೆಯದಾಗಿ, ಈ ವಿಷಯವನ್ನು ಕುರಿತಂತೆ ಅರ್ಜಿಯ ವಿಚಾರಣೆಯನ್ನು ಮೂವರು ನ್ಯಾಯಾಧೀಶರ ಪೀಠಕ್ಕೆ ಒಪ್ಪಿಸಲು ದೇಶದ ಸುಪ್ರಿಂ ಕೋರ್ಟ್ ಈಗಾಗಲೇ ನಿರ್ಧರಿಸಿದೆ.

ಯೆಚುರಿಯವರ ಪತ್ರದ ಪೂರ್ಣ ಪಾಟವನ್ನು ಈ ಮುಂದೆ ಕೊಡಲಾಗಿದೆ:

ಆತ್ಮೀಯ ಶ್ರೀ ರಾಜೀವ್ ಕುಮಾರ್ ಜೀ,

ಚುನಾವಣಾ ಪ್ರಣಾಳಿಕೆಗಳಲ್ಲಿ ನೀಡಿದ ಆಶ್ವಾಸನೆಗಳ ಮೇಲೆ ಮಾದರಿ ನೀತಿ ಸಂಹಿತೆಗೆ ತಿದ್ದುಪಡಿ ಮಾಡುವ ಕುರಿತು ಆಯೋಗದ ಅಕ್ಟೋಬರ್ 4, 2022 ರ ಪತ್ರವನ್ನು ಉಲ್ಲೇಖಿಸಿ ಈ ಪತ್ರ.

ಭಾರತ ಕಮ್ಯುನಿಸ್ಟ್ ಪಕ್ಷ (ಮಾರ್ಕ್ಸ್‌ವಾದಿ) ಪ್ರಸ್ತಾವಿತ ತಿದ್ದುಪಡಿಯನ್ನು ಈ ಕೆಳಗಿನ ಕಾರಣಗಳಿಗಾಗಿ ಅನಗತ್ಯವಾಗಿದೆ ಮತ್ತು ಈ ವಿಷಯದಲ್ಲಿ ಮುಂದುವರಿಯಬಾರದು ಎಂಬ ಅಭಿಪ್ರಾಯ ಹೊಂದಿದೆ.

1) ಸಂವಿಧಾನದ 324 ನೇ ವಿಧಿಯು ಚುನಾವಣಾ ಆಯೋಗಕ್ಕೆ ಚುನಾವಣಾ ಉಸ್ತುವಾರಿ, ನಿರ್ದೇಶನ ಮತ್ತು ನಿಯಂತ್ರಣದ ಕೆಲಸವನ್ನು ವಿಧಿಸುತ್ತದೆ. ಅದು ಚುನಾವಣೆಯ ಸಮಯದಲ್ಲಿ ಜನರಿಗೆ ರಾಜಕೀಯ ಪಕ್ಷಗಳ ಕಲ್ಯಾಣ ಕ್ರಮಗಳ ನೀತಿ ಘೋಷಣೆಗಳು ಮತ್ತು ಆಶ್ವಾಸನೆಗಳನ್ನು ನಿಯಂತ್ರಿಸಲು ಅಥವಾ ಮೌಲ್ಯಮಾಪನ ಮಾಡಲು ಇದು ಚುನಾವಣಾ ಆಯೋಗಕ್ಕೆ ಅವಕಾಶ ಒದಗಿಸುವುದಿಲ್ಲ. ಮಾದರಿ ನೀತಿ ಸಂಹಿತೆಯ ಪ್ರಸ್ತಾವಿತ ತಿದ್ದುಪಡಿ ಮತ್ತು ಚುನಾವಣಾ ಆಶ್ವಾಸನೆಗಳ ವಿವರಗಳು ಮತ್ತು ಅವುಗಳ ಹಣಕಾಸು ಪರಿಣಾಮಗಳ ವಿವರಗಳನ್ನು ಬಹಿರಂಗಪಡಿಸಲು ಪ್ರಪತ್ರ ಆಯೋಗವು ತನ್ನ ವ್ಯಾಪ್ತಿಗೆ ಬರದ ರಾಜಕೀಯ ಮತ್ತು ನೀತಿ ವಿಷಯಗಳಲ್ಲಿ ತೊಡಗುವಂತೆ ಮಾಡುತ್ತದೆ.
2) ಆಶ್ವಾಸನೆಗಳ ಹಣಕಾಸು ಪರಿಣಾಮಗಳ ಪ್ರಮಾಣೀಕರಣ ಮತ್ತು ಆಶ್ವಾಸನೆಗಳನ್ನು ಪೂರೈಸಲು ಹೆಚ್ಚುವರಿ ಸಂಪನ್ಮೂಲ ಸಂಗ್ರಹಿಸುವ ಯೋಜನೆಯ ಹಣಕಾಸಿನ ಸಮರ್ಥನೀಯತೆಯಂತಹ ಕ್ಷೇತ್ರಗಳಿಗೆ ಪ್ರಪತ್ರ ಪ್ರವೇಶಿಸುತ್ತದೆ. ಇವು ರಾಜಕೀಯ ಮತ್ತು ನೀತಿಯ ಪ್ರಶ್ನೆಗಳು ಮತ್ತು "ಹಣಕಾಸಿನ ಸುಸ್ಥಿರತೆ" ಎಂಬುದರ ಕುರಿತು ವಿಭಿನ್ನ ದೃಷ್ಟಿಕೋನಗಳು ಇರಲು ಸಾಧ್ಯವಿದೆ. ಉದಾಹರಣೆಗೆ, ‘ವಿತ್ತೀಯ ಹೊಣೆಗಾರಿಕೆ ಮತ್ತು ಬಜೆಟ್ ನಿರ್ವಹಣಾ ಕಾಯಿದೆ’ಯಲ್ಲಿ ಜಿಡಿಪಿಯ ಶೇಕಡಾ 3 ಕ್ಕೆ ನಿಗದಿಪಡಿಸಲಾದ ವಿತ್ತೀಯ ಕೊರತೆಯ ಮಿತಿಯನ್ನು ನಮ್ಮ ಪಕ್ಷವು ವಿಮರ್ಶಿಸುತ್ತದೆ. ಪ್ರಸ್ತುತ ಚಾಲ್ತಿಯಲ್ಲಿರುವ ಹಣಕಾಸು ಸಂಪ್ರದಾಯಶರಣತೆಯ ವಿಚಾರಗಳಿಗೆ ಪರ್ಯಾಯಗಳಿವೆ.
3) ಸುಬ್ರಮಣ್ಯಂ ಬಾಲಾಜಿ ತೀರ್ಪಿನ ಮರುಪರಿಶೀಲನೆಗಾಗಿ ವಿಚಾರಣೆ ನಡೆಯುತ್ತಿರುವ ಪ್ರಕರಣದಲ್ಲಿ ಚುನಾವಣಾ ಆಯೋಗವು ಈ ವರ್ಷದ ಏಪ್ರಿಲ್‌ನಲ್ಲಿ ಸುಪ್ರೀಂ ಕೋರ್ಟ್‌ಗೆ ಅಫಿಡವಿಟ್ ಸಲ್ಲಿಸಿತ್ತು. ಆ ಅಫಿಡವಿಟ್‌ನಲ್ಲಿ ಆಯೋಗವು ಹೀಗೆ ಹೇಳಿತ್ತು: “ಚುನಾವಣೆಯ ಮೊದಲು ಅಥವಾ ನಂತರ ಯಾವುದೇ ಉಚಿತ ಕೊಡುಗೆಗಳನ್ನು ನೀಡುವುದು/ಹಂಚುವುದು ಸಂಬಂಧಪಟ್ಟ ಪಕ್ಷದ ನೀತಿ ನಿರ್ಧಾರವಾಗಿದೆ ಎಂದೂ ತಿಳಿಸಲಾಗಿದೆ. ಮತ್ತು ಅಂತಹ ನೀತಿಗಳು ಹಣಕಾಸಿನ ದೃಷ್ಟಿಯಿಂದ ಸಮರ್ಥನೀಯವಾಗಿದೆಯೇ ಅಥವಾ ರಾಜ್ಯದ ಆರ್ಥಿಕ ಆರೋಗ್ಯದ ಮೇಲೆ ಪ್ರತಿಕೂಲ ಪರಿಣಾಮ ಬೀರುತ್ತದೆಯೇ ಎಂಬುದು ರಾಜ್ಯದ ಮತದಾರರು ಪರಿಗಣಿಸಬೇಕಾದ ಮತ್ತು ನಿರ್ಧರಿಸಬೇಕಾದ ಪ್ರಶ್ನೆಯಾಗಿದೆ.”

ಗೆದ್ದ ಪಕ್ಷವು ಸರ್ಕಾರ ರಚಿಸುವಾಗ ತೆಗೆದುಕೊಳ್ಳಬಹುದಾದ ರಾಜ್ಯ ನೀತಿಗಳು ಮತ್ತು ನಿರ್ಧಾರಗಳನ್ನು ತಾನು ನಿಯಂತ್ರಿಸಲು ಸಾಧ್ಯವಿಲ್ಲ ಎಂದೂ ಚುನಾವಣಾ ಆಯೋಗವು ಸಲ್ಲಿಸಿದೆ. "ಕಾನೂನಿನಲ್ಲಿ ಇದಕ್ಕೆ ಅವಕಾಶ ಕೊಡುವ ನಿಬಂಧನೆಗಳಲ್ಲದೆ ಅಂತಹ ಒಂದು ಕ್ರಮವು ಅಧಿಕಾರಗಳ ಅತಿಕ್ರಮಣವಾಗಿದೆ" ಎಂದು ಅದು ಹೇಳಿದೆ.

ಇದು ಆಯೋಗವು ತೆಗೆದುಕೊಂಡ ಒಂದು ಸರಿಯಾದ ಮತ್ತು ಮಾನ್ಯ ನಿಲುವಾಗಿತ್ತು. ಆದ್ದರಿಂದ, ಆಯೋಗವು ಮನಸ್ಸು ಬದಲಿಸಿದಂತೆ ತೋರುತ್ತಿರುವುದು ಮತ್ತು ರಾಜಕೀಯ ಪಕ್ಷಗಳು ಮತ್ತು ಜನರಿಗೆ ಸಂಬಂಧಿಸಿದ ಕ್ಷೇತ್ರದಲ್ಲಿ ಹೆಚ್ಚು ಅತಿಕ್ರಮಿಸುವ ಪ್ರಸ್ತಾವ ಇಡುತ್ತಿರುವುದು ಆಶ್ಚರ್ಯಕರವಾಗಿದೆ.

4) ಸುಬ್ರಮಣ್ಯಂ ಬಾಲಾಜಿ ಪ್ರಕರಣದಲ್ಲಿ ನೀಡಲಾದ ತೀರ್ಪನ್ನು ಮರುಪರಿಶೀಲಿಸುವಂತೆ ಕೋರಿದ ಅರ್ಜಿಯ ವಿಚಾರಣೆ ನಡೆಸಿದ ಅಂದಿನ ಭಾರತದ ಮುಖ್ಯ ನ್ಯಾಯಮೂರ್ತಿ ಎನ್‌ವಿ ರಮಣ ನೇತೃತ್ವದ ಸುಪ್ರೀಂ ಕೋರ್ಟ್ ಪೀಠವು ಈ ವಿಷಯವನ್ನು ಭಾರತದ ಹೊಸ ಮುಖ್ಯ ನ್ಯಾಯಾಧೀಶರು ನಿರ್ಧರಿಸುವ ಮೂವರು ಸದಸ್ಯರ ಪೀಠವು ವಿಚಾರಣೆ ನಡೆಸಲಿ ಎಂದು ಆಗಸ್ಟ್ 26, 2022 ರಂದು ನಿರ್ಧರಿಸಿತು. ಹಾಗಾಗಿ, ಚುನಾವಣಾ ಆಶ್ವಾಸನೆಗಳ ವಿಷಯ ಮತ್ತು ‘ಉಚಿತ ಕೊಡುಗೆ’ಗಳು ಇತ್ಯಾದಿ ವಿಷಯಗಳು ಇನ್ನೂ ಸುಪ್ರೀಂ ಕೋರ್ಟ್‌ನ ಸಮ್ಮುಖ ಬಾಕಿ ಉಳಿದಿವೆ.

ಇಂತಹ ಸನ್ನಿವೇಶದಲ್ಲಿ ಮತ್ತು ಜನರ ಸಮಸ್ಯೆಗಳನ್ನು ಪರಿಹರಿಸುವ ಮತ್ತು ನೀತಿ ಮತ್ತು ಕಲ್ಯಾಣ ಕ್ರಮಗಳನ್ನು ಮುಂದಿಡುವ ರಾಜಕೀಯ ಪಕ್ಷಗಳ ಹಕ್ಕುಗಳನ್ನು ಉಲ್ಲಂಘಿಸುವ ಪ್ರಪತ್ರವನ್ನು ಪರಿಚಯಿಸುವ ಮೂಲಕ ಮಾದರಿ ನೀತಿ ಸಂಹಿತೆಗೆ ತಿದ್ದುಪಡಿ ಮಾಡುವ ಆಯೋಗದ ಉಪಕ್ರಮವು ಅನಪೇಕ್ಷಿತವಾಗಿದೆ.

ಆದ್ದರಿಂದ ಮಾದರಿ ನೀತಿ ಸಂಹಿತೆಗೆ ತಿದ್ದುಪಡಿ ತರುವ ಪ್ರಸ್ತಾವನೆಯನ್ನು ಆಯೋಗ ಹಿಂಪಡೆಯಬೇಕೆಂದು ಸಿಪಿಐ(ಎಂ) ಬಯಸುತ್ತದೆ.

ಸೀತಾರಾಂ ಯೆಚೂರಿ
ಪ್ರಧಾನ ಕಾರ್ಯದರ್ಶಿ, ಸಿಪಿಐ(ಎಂ)

ಸಂಪಾದಕೀಯ

ಹಿಂದಿ ಹೇರಿಕೆ ಪ್ರಾಬಲ್ಯದ ಯತ್ನ ಕೈ ಬಿಡಬೇಕು

ಅಧಿಕೃತ ಭಾಷೆಗೆ ಸಂಬಂಧಿಸಿದಂತೆ ಗೃಹ ಸಚಿವ ಅಮಿತ್ ಶಾ ರವರ ನೇತೃತ್ವದ ಸಂಸದೀಯ ಸಮಿತಿಯು ರಾಷ್ಟ್ರಪತಿಯವರಿಗೆ ನೀಡಿರುವ ವರದಿ ಮುಖ್ಯವಾಗಿ ಅದರಲ್ಲಿನ ಹಿಂದಿ ಭಾಷೆಗೆ ಅತಿ ಪ್ರಾಮುಖ್ಯತೆ ನೀಡಿದ ಶಿಫಾರಸುಗಳು ಭಾರತದಾದ್ಯಂತ ಪ್ರತಿರೋಧದ ಅಲೆಗಳನ್ನು ಸೃಷ್ಟಿಸಿದೆ. ಭಾರತೀಯ ಸಮಾಜದ ಸಾಮಾಜಿಕ, ಸಾಂಸ್ಕೃತಿಕ ಬಹುತ್ವ ಹಾಗೂ ಒಕ್ಕೂಟ ಸ್ವರೂಪದ ಸರಕಾರದ ಆಡಳಿತ ವ್ಯವಸ್ಥೆಯನ್ನು ಲಕ್ಷಿಸಿಯೇ ಸಂವಿಧಾನದ 8ನೆಯ ಪರಿಚ್ಛೇದದಲ್ಲಿ 22 ಭಾರತೀಯ ಭಾಷೆಗಳಿಗೆ ಸಮಾನವಾದ ಸ್ಥಾನವನ್ನು ನೀಡಲಾಗಿದೆ. ಆದರೆ ಸಂಸತ್ತಿನ ಸಮಿತಿಯ ಶಿಫಾರಸುಗಳಂತೆ ಹಿಂದಿಯನ್ನು ದೇಶದ ಆಡಳಿತ ಹಾಗೂ ಸಾಮಾಜಿಕ, ಶೈಕ್ಷಣಿಕ ಅಳವಡಿಕೆಸಿದಲ್ಲಿ ಅದು ಯಜಮಾನಿಕೆಯ ಪಟ್ಟವನ್ನು ಆವರಿಸುತ್ತದೆ ಎನ್ನುವ ಆತಂಕ ಸಹಜವೇ ಆಗಿದೆ. ದೇಶದ ಐ.ಐ.ಟಿ, ಐ.ಐ.ಎಸ್.ಸಿ, ಏಮ್ಸ್, ಡಿ.ಆರ್.ಡಿ.ಒ. ನಂತಹ ಉನ್ನತ ಶಿಕ್ಷಣ ಸಂಸ್ಥೆಗಳನ್ನೂ ಒಳಗೊಂಡು ಹಿಂದಿಯನ್ನು ಅಥವಾ ಸ್ಥಳೀಯ ಭಾಷೆಯನ್ನು ಬೋಧನೆಯ ಮಾಧ್ಯಮದ ಅಧಿಕೃತ ಭಾಷೆಯನ್ನಾಗಿ ಜಾರಿಗೆ ತರಬೇಕು ಎನ್ನುವುದೂ ಸೇರಿದಂತೆ ಹಿಂದಿ ಭಾಷೆಗೆ ಅತಿ ಪ್ರಾಧಾನ್ಯತೆ ಒದಗಿಸುವ ಒಟ್ಟು 112 ಅಂಶಗಳನ್ನು ಈ ವರದಿ ಒಳಗೊಂಡಿದೆ. ಹಿಂದಿಯನ್ನು ವಿಶ್ವ ಸಂಸ್ಥೆಯ ಅಧಿಕೃತ ಭಾಷೆಗಳ ಪಟ್ಟಿಯಲ್ಲಿ ಸೇರಿಸಬೇಕು ಎನ್ನುವಂತಹ ಅಂಶವೂ ಇದರಲ್ಲಿದೆ.

ಸಮಿತಿಯು ವರದಿ ಸಿದ್ದತೆಯ ಪ್ರಕ್ರಿಯೆಯಲ್ಲಿರುವಾಗಲೇ ಹಿಂದಿಯ ಪ್ರಾಬಲ್ಯ ಸಮರ್ಥಿಸುವಂತಹ, ಹಿಂದಿಯೇ ದೇಶವನ್ನು ಬೆಸೆಯುವ ಸಾಧನ ಎನ್ನುವಂತಹ ಮಾತುಗಳನ್ನು ಗೃಹ ಸಚಿವ ಅಮಿತ್ ಶಾ ಹರಿಯ ಬಿಟ್ಟಿದ್ದನ್ನು ನೋಡಿದರೆ ಈ ಸರಕಾರ ಸಂವಿಧಾನದತ್ತವಾದ ಪ್ರಜಾಸತ್ತಾತ್ಮಕ ಹಕ್ಕುಗಳನ್ನು, ಭಾರತದ ವೈವಿಧ್ಯತೆಯ ಭಾಷಾ ಬಾಂದವ್ಯ ಮತ್ತು ಸಮಾನ ಸ್ಥಾನಮಾನವನ್ನು ಹೀಗೆಳೆದು ಹಿಂದಿಯನ್ನೇ ಅಟ್ಟಕ್ಕೇರಿಸುವ ನಿರ್ಧಾರವನ್ನು ಬಹು ಹಿಂದೆಯೇ ಮಾಡಿದಂತಿದೆ. ಒಕ್ಕೂಟದ ವ್ಯವಸ್ಥೆಯಲ್ಲಿ ಹಿಂದಿಯೂ ಸಹ ಇತರೆ ಭಾಷೆಗಳಂತೆ ಒಂದು ಭಾಷೆಯಾಗಿದೆ. ಭಾರತದ ಸಂವಿಧಾನದಲ್ಲಿ, 8 ನೆಯ ಪರಿಚ್ಛೇದದಲ್ಲಿ ಒಟ್ಟು 22 ಭಾಷೆಗಳಿಗೆ ಅಧಿಕೃತ ಸ್ಥಾನಮಾನ ನೀಡಲಾಗಿದ್ದು ಯಾವುದೇ ಒಂದು ಭಾಷೆ ರಾಷ್ಟ್ರ ಭಾಷೆ ಅಲ್ಲವೆಂದೂ ತಿಳಿಸಿದೆ.

ಹಿಂದಿಯನ್ನು ಅಧಿಕೃತ ಹಾಗೂ ರಾಷ್ಟ್ರ ಭಾಷೆಯ ಸ್ಥಾನ ಒದಗಿಸಿ ಕೊಡಲು ಗೃಹ ಸಚಿವರು ಮತ್ತು ಸಮಿತಿಯು ಹೂಡಿರುವ ವಾದವೂ ವಿಚಿತ್ರವಾಗಿದೆ. ಇದು ಪರಕೀಯ ಭಾಷೆಯಾದ ಇಂಗ್ಲೀಷ್ ವಸಾಹತುಶಾಹಿಯಿಂದ ಬಿಡುಗಡೆಯಾಗುವ ಅವಕಾಶ ಎಂಬ ತರ್ಕವೂ ಅರ್ಥಹೀನ. ದೇಶದಲ್ಲಿ ಭಾಷಾ ನೀತಿ, ರಾಷ್ಟ್ರ ಭಾಷಾ ಸ್ಥಾನಮಾನಗಳಿಗೆ ಸಂಬಂಧಿಸಿದಂತೆ ವಿಸ್ತೃತ ಚರ್ಚೆಗಳು ನಡೆದು ತಳೆದ ನಿರ್ಧಾರಗಳನ್ನು ನಿರ್ಲಕ್ಷಿಸಲಾಗುತ್ತಿದೆ. ಸಂವಿಧಾನದ 343(1) ವಿಧಿ ಮತ್ತು ಅಧಿಕೃತ ಭಾಷೆಗಳ ಕಾಯ್ದೆ 1963 ಷರತ್ತು 3 ಯೂನಿಯನ್ ಅಧಿಕೃತ ಉದ್ದೇಶಗಳಿಗಾಗಿ ಮತ್ತು ಸಂಸತ್ತಿನಲ್ಲಿ ಬಳಕೆಗಾಗಿ ಹಿಂದಿ ಹಾಗೂ ಇಂಗ್ಲಿಷ್ ಭಾಷೆಯ ಮುಂದುವರಿಕೆಯನ್ನು ಉಲ್ಲೇಖಿಸುತ್ತದೆ. ಭಾರತೀಯ ಸಂಸತ್ತಿನಲ್ಲಿ ವ್ಯವಹಾರವನ್ನು ಹಿಂದಿ ಅಥವಾ ಇಂಗ್ಲಿಷ್ ನಲ್ಲಿ ಮಾತ್ರ ನಡೆಸಬಹುದು. ಸಂಸತ್ತಿನ ಪ್ರಕ್ರಿಯೆಗಳು ನ್ಯಾಯಾಂಗ ಕೇಂದ್ರ ಸರಕಾರ ಮತ್ತು ರಾಜ್ಯ ಸರ್ಕಾರದ ನಡುವಿನ ಸಂವಹನಗಳಿಗೆ ಅಧಿಕೃತ ಉದ್ದೇಶಗಳಲ್ಲಿ ಇಂಗ್ಲಿಷ್ ಅನ್ನು ಬಳಸಲು ಅನುಮತಿಸಲಾಗಿದೆ. ಭಾರತದೊಳಗಿನ ರಾಜ್ಯಗಳು ತಮ್ಮ ಸ್ವಂತ ಅಧಿಕೃತ ಭಾಷೆಗಳನ್ನು ಶಾಸನದ ಮೂಲಕ ನಿರ್ದಿಷ್ಟ ಪಡಿಸುವ ಸ್ವಾತಂತ್ರ್ಯ ಮತ್ತು ಅಧಿಕಾರವನ್ನು ಹೊಂದಿವೆ. ಇದೇ ಸಂದರ್ಭದಲ್ಲಿ ಹಿಂದಿಯನ್ನು ವ್ಯಾಪಕವಾಗಿ ಜಾರಿಗೆ ತರಲು ಕೇಂದ್ರ ಸರ್ಕಾರ ಅಧಿಕೃತವಾಗಿಯೇ ಹಲವಾರು ಕ್ರಮಗಳನ್ನು ಕೈಗೊಂಡಿರುವುದು ಕೂಡ ಗಮನಿಸಬೇಕು.

ಅಮಿತ್ ಶಾ ರವರ ನೇತೃತ್ವದ ಸಮಿತಿಯ ಶಿಫಾರಸಿನಂತೆ ಐ.ಐ.ಟಿ. ಮುಂತಾದ ಉನ್ನತ ಶಿಕ್ಷಣ ರಂಗದಲ್ಲಿ ಹಿಂದಿಯನ್ನು ಕಲಿಕೆಯ ಮಾಧ್ಯಮ ಭಾಷೆಯನ್ನಾಗಿ ಅಳವಡಿಸಿಕೊಂಡರೆ ಹಿಂದಯೇತರ ವಿದ್ಯಾರ್ಥಿಗಳ ಪಾಡೇನಾದೀತು? ಎಂದು ಸ್ವಲ್ಪವೇ ಊಹಿಸಿಕೊಂಡರೆ ಸಾಕು. ವಸಾಹತುಶಾಹಿಯಿಂದ ಬಿಡುಗಡೆ ಎನ್ನುವುದು ಸ್ಥಾನ ಬದಲಾವಣೆಯೇ? ಆದ್ದರಿಂದ ಭಾರತದ ಬಹುತ್ವ, ವೈವಿಧ್ಯತೆ ಹಾಗು ಒಕ್ಕೂಟದ ಸ್ವರೂಪವನ್ನು ಗಂಭೀರವಾಗಿ ಪರಿಗಣಿಸಬೇಕು.

ಈ ಭಾಷಾ ನೀತಿ ಹೊಸ ಶಿಕ್ಷಣ ನೀತಿಗೆ ಅನುಗುಣವಾಗಿದೆ ಎಂದೂ ಸಮರ್ಥಿಸಿಕೊಳ್ಳಲಾಗುತ್ತಿದೆ. ಬಹು ಸಾಂಸ್ಕೃತಿಕತೆಯ ಭಾರತವನ್ನು ಫ್ಯಾಶಿಸ್ಟ್ ಮಾದರಿಯ ಏಕಸ್ವರೂಪಿ ಹಿಂದುರಾಷ್ಟ್ರವನ್ನಾಗಿಸುವ ಧಾವಂತದಲ್ಲಿರುವ ಬಿಜೆಪಿ ಸಂಘಪರಿವಾರ ಹಿಂದಿ ಭಾಷಾ ಹೇರಿಕೆಯನ್ನು ಮಹತ್ವದ ಒಂದು ಕ್ರಮವಾಗಿ ಭಾವಿಸಿದೆ.' ಹಿಂದಿ, ಹಿಂದು, ಹಿಂದುತ್ವ' ಎನ್ನುವ ಅದರ ಸಿದ್ಧಾಂತ 'ವಸಾಹತು ವಿರೋಧಿ, ಸ್ವದೇಶಿ' ವಾದಗಳ ಕವಚವನ್ನು ಹೊದಿಯುತ್ತದೆ. ಅದರ ನಡೆ ದೇಶಿಯ ಭಾಷೆ, ಸಂಸ್ಕೃತಿಯನ್ನು ಆ ಮೂಲಕ ಬದುಕನ್ನು ನಾಶಗೊಳಿಸುವ ಹಾದಿಯಲ್ಲಿದೆ. ಭಾರತದ ಪ್ರತಿಯೊಂದು ಭಾಷೆಯೂ ತನ್ನದೇ ವೈಶಿಷ್ಟ್ಯ, ಅಸ್ಮಿತೆ, ಅಸ್ತಿತ್ವವನ್ನು, ರಾಷ್ಟ್ರೀಯತೆಯನ್ನು ಹೊಂದಿರುವಾಗ ಇಂತಹ ಹೇರಿಕೆ ದೇಶದ ಸಮಗ್ರತೆಗೆ ಅಪಾಯಕಾರಿಯಾಗಿದೆ. ಪ್ರಜಾಪ್ರಭುತ್ವ, ಒಕ್ಕೂಟದ ವ್ಯವಸ್ಥೆಗೆ ಭಂಗ ತರುವ ಶಿಫಾರಸುಗಳನ್ನು ರಾಷ್ಟ್ರಪತಿಗಳು ಹಾಗೂ ಕೇಂದ್ರ ಸರಕಾರ ತಿರಸ್ಕರಿಸಬೇಕು. ಈ ದೆಸೆಯಲ್ಲಿ ಕೇರಳ, ತಮಿಳುನಾಡು, ತೆಲಂಗಾಣ, ಪ.ಬಂಗಾಳದಂತಹ ಅನೇಕ ರಾಜ್ಯಗಳು ಎತ್ತಿರುವ ಬಲವಾದ ಆಕ್ಷೇಪವನ್ನು ಗಂಭೀರವಾಗಿ ಪರಿಗಣಿಸಬೇಕು.

ರಾಜ್ಯ ಕೃಷಿ ಕಾಯ್ದೆಗಳು, ವಿದ್ಯುತ್ ತಿದ್ದುಪಡಿ ಮಸೂದೆ ರದ್ದುಪಡಿಸಲು ಹಾಗೂ ಅತಿವೃಷ್ಟಿ ಸಂತ್ರಸ್ತ ರೈತರಿಗೆ ವೈಜ್ಞಾನಿಕ ಪರಿಹಾರ ಮತ್ತು ಎಲ್ಲಾ ರೈತರ ಸಾಲಮನ್ನಾಕ್ಕೆ

ಕೆ.ಪಿ.ಆರ್.ಎಸ್ ನ 17 ನೇ ರಾಜ್ಯ ಸಮ್ಮೇಳನದ ಆಗ್ರಹ

ವರ್ಷಗಳ ಕಾಲ ನಡೆದ ಐತಿಹಾಸಿಕ ದೆಹಲಿ ರೈತ ಹೋರಾಟದ ಒತ್ತಡಕ್ಕೆ ಮಣಿದು ಕೇಂದ್ರ ಸರ್ಕಾರ ತನ್ನ ಕರಾಳ ಕೃಷಿ ಕಾಯ್ದೆಗಳನ್ನು ರದ್ದುಪಡಿಸಿದ್ದರೂ ಅದೇ ಸ್ವರೂಪದ ಕೃಷಿ ಕಾಯ್ದೆಗಳನ್ನು ರಾಜ್ಯ ಬಿಜೆಪಿ ಸರ್ಕಾರ ಉಳಿಸಿಕೊಂಡಿದೆ. ಈ ರೈತ ವಿರೋಧಿ ರಾಜ್ಯ ಕೃಷಿ ಕಾಯ್ದೆಗಳಾದ ಕರ್ನಾಟಕ ರಾಜ್ಯ ಭೂ ಸುಧಾರಣಾ ತಿದ್ದುಪಡಿ ಕಾಯ್ದೆ 2020, ಕರ್ನಾಟಕ ರಾಜ್ಯ ಎಪಿಎಂಸಿ ತಿದ್ದುಪಡಿ ಕಾಯ್ದೆ 2020 ಅನ್ನು ರದ್ದುಪಡಿಸಬೇಕು, ಪಂಪ್ ಸೆಟ್ ಗಳಿಗೆ ಪ್ರೀ ಪೇಡ್ ಮೀಟರ್ ಅಳವಡಿಸುವ ವಿದ್ಯುತ್ ತಿದ್ದುಪಡಿ ಮಸೂದೆ 2022 ಅನ್ನು ಕೂಡಲೇ ಸಂಸತ್ತಿನಿಂದ ವಾಪಸ್ಸು ಪಡೆದು ರದ್ದುಪಡಿಸಬೇಕು, ಅತಿವೃಷ್ಟಿ ಸಂತ್ರಸ್ತ ರೈತರಿಗೆ ವೈಜ್ಞಾನಿಕ ಪರಿಹಾರ ನೀಡಬೇಕು. ನಿರಂತರ ಕಡಿಮೆ ದರದಲ್ಲಿ ತಮ್ಮ ಉತ್ಪನ್ನಗಳನ್ನು ಮಾರಾಟ ಮಾಡಿರುವ ಕಾರಣದಿಂದಾಗಿ ಹಾಗೂ ಪ್ರಾಕೃತಿಕ ವಿಕೋಪಗಳಿಗೆ ಮೇಲಿಂದ ಮೇಲೆ ಸಿಲುಕಿ ನರಳುತ್ತಿರುವ ರೈತ ಸಮುದಾಯಕ್ಕೆ ಒಂದು ಬಾರಿ ಪರಿಹಾರ ಕ್ರಮವಾಗಿ ಎಲ್ಲಾ ಗ್ರಾಮೀಣ ಜನತೆಯ ಖಾಸಗಿ, ಸಾಂಸ್ಥಿಕ, ಲೇವಾದೇವಿ, ಮೈಕ್ರೋ ಫೈನಾನ್ಸ್ ಸಾಲಗಳು ಸೇರಿದಂತೆ ಎಲ್ಲಾ ರೀತಿಯ ಸಾಲಗಳನ್ನು ಸಂಪೂರ್ಣ ಮನ್ನಾ ಮಾಡಬೇಕು ಎಂದು ಕರ್ನಾಟಕ ಪ್ರಾಂತ ರೈತ ಸಂಘ (KPRS) ದ 17 ನೇ ರಾಜ್ಯ ಸಮ್ಮೇಳನ ಕೇಂದ್ರ ಹಾಗೂ ರಾಜ್ಯ ಸರ್ಕಾರಗಳನ್ನು ಆಗ್ರಹಿಸಿದೆ.

14–16 ಆಕ್ಟೋಬರ್ 2022 ರವರೆಗೆ ಮೂರು ದಿನಗಳ ಕಾಲ ರಾಯಚೂರಿನ ಹರ್ಷಿತ ಗಾರ್ಡನ್ ನಲ್ಲಿ ಅತ್ಯಂತ ಯಶಸ್ವಿಯಾಗಿ ನಡೆದ ರಾಜ್ಯ ಸಮ್ಮೇಳನ ರೈತರ ಬದುಕು, ಕೃಷಿ ನೀತಿಗಳಿಗೆ ಸಂಬಂಧಿಸಿದ 25 ನಿರ್ಣಯಗಳನ್ನು ಅಂಗೀಕರಿಸಿದೆ.

ರಾಜ್ಯ ಸಮ್ಮೇಳನ ಅಂಗೀಕರಿಸಿದ ನಿರ್ಣಯಗಳು ಈ ಕೆಳಗಿನಂತಿವೆ.

1) ರಾಜ್ಯ ಕೃಷಿ ಕಾಯ್ದೆಗಳನ್ನು ರದ್ದುಪಡಿಸಲು ಆಗ್ರಹಿಸಿ ನಿರ್ಣಯ.
2) ಹೈನುಗಾರಿಕೆಗೆ ಮಾರಕವಾಗಿರುವ ಕರ್ನಾಟಕ ಜಾನುವಾರು ಸಂರಕ್ಷಣೆ ಹಾಗೂ ಹತ್ಯೆ ನಿಷೇಧ ಕಾಯ್ದೆ ರದ್ದುಪಡಿಸಲು ಆಗ್ರಹಿಸಿ ನಿರ್ಣಯ.
3) ವಿದ್ಯುತ್ ಮಸೂದೆ 2022 ಅನ್ನು ಸಂಸತ್ ನಿಂದ ವಾಪಸ್ಸು ಪಡೆದು ರದ್ದುಪಡಿಸಲು ಆಗ್ರಹಿಸಿ ನಿರ್ಣಯ.
4) ಕರ್ನಾಟಕ ರಾಜ್ಯ ಭೂ ಸ್ವಾಧೀನ ಕಾಯ್ದೆ 2019 ರದ್ದುಪಡಿಸಲು ಆಗ್ರಹಿಸಿ ನಿರ್ಣಯ.
5) ಬಗರ್ ಹುಕಂ ಹಾಗೂ ಅರಣ್ಯ ಭೂಮಿ ರೈತರ ಸಾಗುವಳಿ ಸಕ್ರಮಗೊಳಿಸಲು ಆಗ್ರಹಿಸಿ ನಿರ್ಣಯ.
6) ಅಖಿಲ ಭಾರತ ಕಾರ್ಮಿಕರ ಮಹಾ ಸಮ್ಮೇಳನ ಯಶಸ್ವಿಗೊಳಿಸಲು ರಾಜ್ಯದ ರೈತ ಸಮುದಾಯಕ್ಕೆ ರೈತ ಸಮ್ಮೇಳನದ ಕರೆ.
7) ಕನಿಷ್ಠ ಬೆಂಬಲ ಬೆಲೆ ಖಾತರಿ ಕಾನೂನು ಜಾರಿಗೆ ಆಗ್ರಹಿಸಿ ನಿರ್ಣಯ.
8) ಋಣ ಮುಕ್ತಿ ಕಾನೂನು ಜಾರಿಗೆ ಆಗ್ರಹಿಸಿ ನಿರ್ಣಯ.
9) ಉದ್ಯೋಗ ಖಾತರಿ ಯೋಜನೆ ಸಮರ್ಪಕ ಜಾರಿಗೆ ಹಾಗೂ ಕೂಲಿ ಮತ್ತು ಕೆಲಸದ ದಿನಗಳನ್ನು ಹೆಚ್ಚಿಸಲು ಆಗ್ರಹಿಸಿ ನಿರ್ಣಯ.
10) ಮನೆ–ನಿವೇಶನ ಒದಗಿಸಲು ಅಗತ್ಯ ಕಾನೂನು ಜಾರಿಗೆ ಆಗ್ರಹಿಸಿ ನಿರ್ಣಯ.
11) ಸರ್ಕಾರಿ ಜಿಲ್ಲಾಸ್ಪತ್ರೆ ಗಳನ್ನು ಖಾಸಗೀಕರಿಸುತ್ತಿರುವ ಜನ ವಿರೋಧಿ ಕ್ರಮಗಳನ್ನು ನಿಲ್ಲಿಸಲು ಆಗ್ರಹಿಸಿ ನಿರ್ಣಯ.
12) ಜಲ ಜೀವನ ಮಿಷನ್ ಹೆಸರಿನಲ್ಲಿ ಕುಡಿಯುವ ನೀರಿಗೆ ಮಿತಿ ಹೇರುವ ಹಾಗೂ ಖಾಸಗೀಕರಿಸುವ ಜನ ವಿರೋಧಿ ಕ್ರಮ ಖಂಡಿಸಿ ನಿರ್ಣಯ.
13) ಕೃಷ್ಣಾ, ತುಂಗಭದ್ರಾ ಸೇರಿದಂತೆ ಬಾಕಿ ಇರುವ ಎಲ್ಲಾ ನೀರಾವರಿ ಯೋಜನೆಗಳನ್ನು ಕಾಲಮಿತಿಯೊಳಗೆ ಮುಗಿಸಲು ಆಗ್ರಹಿಸಿ ಹಾಗೂ ರಾಜ್ಯದ ನೀರಿನ ಸಂಪತ್ತನ್ನು ಸದ್ಬಳಕೆ ಮಾಡಿಕೊಳ್ಳಲು ನೀರಾವರಿ ವಿಸ್ತರಿಸಲು ಆಗ್ರಹಿಸಿ ನಿರ್ಣಯ.
14) ಐಸಿಡಿಎಸ್, ಅಕ್ಷರ ದಾಸೋಹ ಯೋಜನೆಗಳ ಖಾಸಗೀಕರಣ ನಿಲ್ಲಿಸಲು ಆಗ್ರಹಿಸಿ ನಿರ್ಣಯ.
15) ನೂತನ ರಾಷ್ಟ್ರೀಯ ಶಿಕ್ಷಣ ನೀತಿ ಮತ್ತು 13,800 ಸರಕಾರಿ ಶಾಲೆಗಳ ರದ್ದತಿ ವಾಪಾಸು ಪಡೆಯಲು ಒತ್ತಾಯಿಸಿ ನಿರ್ಣಯ.
16) ಕರ್ನಾಟಕ ರಾಜ್ಯ ಧಾರ್ಮಿಕ ಸ್ವಾತಂತ್ರ್ಯ ಸಂರಕ್ಷಣ ಸುಗ್ರೀವಾಜ್ಞೆ ವಾಪಾಸು ಪಡೆಯಲು ನಿರ್ಣಯ.
17) ನೀರಿನ ಖಾಸಗೀಕರಣ ಮತ್ತು ಕರ್ನಾಟಕ ಜಲನೀತಿ ವಾಪಾಸಾತಿಗೆ ಆಗ್ರಹ.
18) ಬ್ಯಾಂಕ್ ಹಾಗೂ ವಿಮಾ ಮುಂತಾದ ಸಾರ್ವಜನಿಕ ರಂಗದ

ಪುಟ 5 ಕ್ಕೆ

ಕಾರ್ಮಿಕರ ಬದುಕಿಗೆ ಮಾರಕವಾಗುವ ಆರ್ಥಿಕ ನೀತಿಗಳನ್ನು ಸರಕಾರ ತಕ್ಷಣ ನಿಲ್ಲಿಸಲಿ

ವರದಿ: ವಾ.ಉಚ್ಚಿಲ್

ಹೆಜ್ಜೆ ಹೆಜ್ಜೆಗೂ ಕಾರ್ಮಿಕರ ಬದುಕಿಗೆ ಮಾರಕ ಹೊಡೆತ ನೀಡುವ ಕೇಂದ್ರ ಸರಕಾರ ತನ್ನ ಆರ್ಥಿಕ ನೀತಿಗಳನ್ನು ಕೂಡಲೇ ಬದಲಿಸಬೇಕು. ಇಲ್ಲದಿದ್ದರೆ ಸರಕಾರವನ್ನೇ ಬದಲಿಸಲು ಕಾರ್ಮಿಕ ವರ್ಗ ಸನ್ನದ್ಧವಾಗಬೇಕಾಗಿದೆ ಎಂದು ಸಿಐಟಿಯು ರಾಜ್ಯಾಧ್ಯಕ್ಷೆ ಎಸ್.ವರಲಕ್ಷ್ಮಿ ಕರೆ ನೀಡಿದ್ದಾರೆ.

ಮಂಗಳೂರಿನ ಬೋಳಾರದ ಕಾಂ.ಬಿ.ಮಾಧವ ವೇದಿಕೆ ಹಾಗೂ ಕಾಂ.ಗಿರಿಯಪ್ಪ ಉಳ್ಳಾಲ ಸಭಾಂಗಣದಲ್ಲಿ ಅಕ್ಟೋಬರ್ 10 ರಂದು ಜರುಗಿದ ಸಿಐಟಿಯು 17ನೇ ದ.ಕ.ಜಿಲ್ಲಾ ಸಮ್ಮೇಳನವನ್ನು ಉದ್ಘಾಟಿಸಿ ಅವರು ಮಾತನಾಡುತ್ತಿದ್ದರು.

ದೇಶದ ಕಾರ್ಮಿಕ ವರ್ಗವನ್ನು ಪ್ರತಿನಿಧಿಸುವ ಕೇಂದ್ರ ಕಾರ್ಮಿಕ ಸಂಘಟನೆಗಳನ್ನು ಕೈಬಿಟ್ಟು ಭಾರತೀಯ ಕಾರ್ಮಿಕ ಸಮ್ಮೇಳನವನ್ನು ನಡೆಸುವ



ಮೂಲಕ ನರೇಂದ್ರ ಮೋದಿ ಸರಕಾರದ ನಿಜವಾದ ಗುಣಲಕ್ಷಣಗಳು ಬಹಿರಂಗಗೊಂಡಿವೆ. ಮಾತೆತ್ತಿದರೆ ಅಭಿವೃದ್ಧಿ ಮಂತ್ರ ಜಪಿಸುವ ಕೇಂದ್ರ ಸರಕಾರಕ್ಕೆ ಕಾರ್ಮಿಕ ವರ್ಗವಿಲ್ಲದೆ ದೇಶದ ಅಭಿವೃದ್ಧಿ ಅಸಾಧ್ಯ ಎಂಬ ಸತ್ಯಾಂಶ ತಿಳಿಯಬೇಕಾಗಿದೆ ಎಂದು ಅವರು ಹೇಳಿದರು.

ಸಮಾಜದಲ್ಲಿ ಸಂಪತ್ತು ಸೃಷ್ಟಿಸುವ ಕಾರ್ಮಿಕ ವರ್ಗ ಮಾತ್ರವೇ ದೇಶದ ಆರ್ಥಿಕ ವ್ಯವಸ್ಥೆಯನ್ನು ಮುಂದಕ್ಕೊಯ್ಯುವಲ್ಲಿ ಪ್ರಧಾನ ಪಾತ್ರ ವಹಿಸುತ್ತಿದೆ. ಆದರೆ ದೇಶವನ್ನಾಳುವ ನರೇಂದ್ರ ಮೋದಿ ಸರಕಾರವು ಕಾರ್ಮಿಕ ವರ್ಗವನ್ನು ನಗಣ್ಯ ಮಾಡಿದೆ. ಇಡೀ ಆರ್ಥಿಕ ವ್ಯವಸ್ಥೆಯನ್ನು ದೇಶದ ಕಾರ್ಪರೇಟ್ ಕಂಪೆನಿಗಳಿಗೆ ಧಾರೆ ಎರೆದು ದೇಶದ ಸಾರ್ವಜನಿಕ ಸಂಸ್ಥೆಗಳನ್ನು ಮಾರಾಟ ಮಾಡುವ ಮೂಲಕ ಕಾರ್ಮಿಕ ವರ್ಗವನ್ನೇ ಇನ್ನಿಲ್ಲವಾಗಿಸಲು ವ್ಯವಸ್ಥಿತ ಹುನ್ನಾರ ನಡೆಸುತ್ತಿದೆ ಎಂದು ವರಲಕ್ಷ್ಮಿ ಆರೋಪಿಸಿದ್ದಾರೆ.

ಸಿಐಟಿಯು ದ.ಕ.ಜಿಲ್ಲಾಧ್ಯಕ್ಷ ಜೆ.ಬಾಲಕೃಷ್ಣ ಶೆಟ್ಟಿ ಧ್ವಜಾರೋಹಣ ಗೈದು ಮಾತನಾಡಿದರು. ರೈತ ಚಳುವಳಿಯ ನಾಯಕ ಯಾದವ ಶೆಟ್ಟಿ, ಸಿಐಟಿಯು ಉಪಾಧ್ಯಕ್ಷ ವಸಂತ ಆಚಾರಿ, ಪದ್ಮಾವತಿ ಶೆಟ್ಟಿ, ಕಾರ್ಮಿಕ ಚಳುವಳಿಯ ಹಿರಿಯ ನಾಯಕ ಯು.ಬಿ.ಲೋಕಯ್ಯ ಉಪಸ್ಥಿತರಿದ್ದರು. ಸಿಐಟಿಯು ದ.ಕ.ಜಿಲ್ಲಾ ಪ್ರಧಾನ ಕಾರ್ಯದರ್ಶಿ ಸುನಿಲ್ ಕುಮಾರ್ ಬಜಾಲ್ ಕಾರ್ಯಕ್ರಮ ನಿರೂಪಿಸಿದರು.

ಬಳಿಕ ಜರುಗಿದ ಪ್ರತಿನಿಧಿ ಅಧಿವೇಶನದಲ್ಲಿ ಜಿಲ್ಲೆಯ ಪ್ರಸಕ್ತ ಪರಿಸ್ಥಿತಿಯನ್ನು ಅವಲೋಕಿಸಿ ಮುಂಬರುವ ದಿನಗಳಲ್ಲಿ ಬಲಿಷ್ಠವಾದ ಕಾರ್ಮಿಕ ಚಳುವಳಿಯನ್ನು ಕಟ್ಟಲು ಸಮ್ಮೇಳನವು ಪಣ ತೊಟ್ಟಿತು.

ನಂತರ ನೂತನ ಸಿಐಟಿಯು ಜಿಲ್ಲಾ ಸಮಿತಿಯನ್ನು ಆಯ್ಕೆ ಮಾಡಿರುತ್ತದೆ. ಅಧ್ಯಕ್ಷರಾಗಿ ಜೆ.ಬಾಲಕೃಷ್ಣ ಶೆಟ್ಟಿ, ಪ್ರಧಾನ ಕಾರ್ಯದರ್ಶಿಯಾಗಿ ಸುನಿಲ್ ಕುಮಾರ್ ಬಜಾಲ್, ಕೋಶಾಧಿಕಾರಿಯಾಗಿ ಯೋಗೀಶ್ ಜಪ್ಪಿನಮೊಗರು ರವರನ್ನೊಳಗೊಂಡ 51 ಮಂದಿಯ ಜಿಲ್ಲಾ ಸಮಿತಿಯನ್ನು ಆಯ್ಕೆ ಮಾಡಿರುತ್ತದೆ.

ಮಂಗಳೂರಿನಲ್ಲಿ ಸಮಾನ ಮನಸ್ಕ ಸಂಘಟನೆಗಳಿಂದ ಪಾದಯಾತ್ರೆ:

ಸುರತ್ಕಲ್ ಅಕ್ರಮ ಟೋಲ್‌ಗೇಟನ್ನು ಅಕ್ಟೋಬರ್ 18 ರಂದು ತೆರವುಗೊಳಿಸಲು ನೇರ ಕಾರ್ಯಾಚರಣೆ ಮುತ್ತಿಗೆ ಕಾರ್ಯಕ್ರಮದ ಪ್ರಚಾರದ ಭಾಗವಾಗಿ ಸಮಾನ ಮನಸ್ಕ ಸಂಘಟನೆಗಳ ಸಹಭಾಗಿತ್ವದಲ್ಲಿ ಅಕ್ಟೋಬರ್ 10 ರಂದು ಮಂಗಳೂರಿನ ಜಿಲ್ಲಾಧಿಕಾರಿ ಕಚೇರಿ ಮುಂಭಾಗದಿಂದ ಲೇಡಿಗೋಶನ್ ಆಸ್ಪತ್ರೆವರೆಗೆ ಪಾದಯಾತ್ರೆ ನಡೆಯಿತು.

ಪಾದಯಾತ್ರೆಯಲ್ಲಿ ಜೆಡಿಎಸ್ ಮುಖಂಡ ಎಂ.ಜಿ.ಹೆಗ್ಡೆ, ಸಿಪಿಐ(ಎಂ) ಜಿಲ್ಲಾ ಕಾರ್ಯದರ್ಶಿ ಕೆ.ಯಾದವ ಶೆಟ್ಟಿ, ಸಿಪಿಐ ಜಿಲ್ಲಾ ಕಾರ್ಯದರ್ಶಿ ಬಿ.ಶೇಖರ್, ಮಾಜಿ ಉಪ ಮೇಯರ್ ಮುಹಮ್ಮದ್ ಕುಂಜತ್ತಬೈಲ್, ಸಿಪಿಎಂ ಮುಖಂಡ ಸುನಿಲ್ ಕುಮಾರ್ ಬಜಾಲ್, ವಕೀಲರ ಸಂಘದ ಯಶವಂತ ಮರೋಳಿ, ಸಿಪಿಐ ನಾಯಕರಾದ ವಿ. ಕುಕ್ಯಾನ್, ಸೀತಾರಾಮ್ ಬೇರಿಂಜೆ, ಕರುಣಾಕರ್, ಜೆಡಿಎಸ್ ಮುಖಂಡ ಸುನಿಲ್ ನೊರೊನ್ಹಾ, ಡಿವೈಎಫ್ಐ ಜಿಲ್ಲಾ ಮುಖಂಡರಾದ ಬಿ.ಕೆ.ಇಮ್ತಿಯಾಜ್, ನವೀನ್ ಕೊಂಚಾಡಿ, ಆಶಾ ಬೋಳೂರು, ಪ್ರಮೀಳಾ ದೇವಾಡಿಗ, ಭಾರತಿ ಬೋಳಾರ್, ಅಸುಂತಾ ಡಿಸೋಜ, ಪ್ರಮೀಳಾ ಶಕ್ತಿನಗರ, ಸಿಐಟಿಯು ಮುಖಂಡರಾದ ವಿಲ್ಲಿ ವಿಲ್ಸನ್, ಬಸ್ ನೌಕರರ ಸಂಘದ ಅಲ್ತಾಫ್ ದೇರಳಕಟ್ಟೆ ಮತ್ತಿತರರು ಭಾಗವಹಿಸಿದ್ದರು.

ಡಿವೈಎಫ್ಐ ಜಿಲ್ಲಾ ಕಾರ್ಯದರ್ಶಿ ಸಂತೋಷ್ ಬಜಾಲ್ ಕಾರ್ಯಕ್ರಮ ನಿರೂಪಿಸಿದರು.

ಮಂಗಳೂರು ಮಾತ್ರವಲ್ಲದೆ, ಉಡುಪಿ, ಕುಂದಾಪುರ, ಮೂಡಬಿದ್ರೆ, ಗುರುಪುರ, ಕೈಕಂಭ, ಉಳ್ಳಾಲದಲ್ಲೂ ಸಮಾನ ಮನಸ್ಕ ಸಂಘಟನೆಗಳು ಸಮಾವೇಶ ನಡೆಸಿ ಅಕ್ಟೋಬರ್ 18 ರಂದು ಹಮ್ಮಿಕೊಂಡಿರುವ ಸುರತ್ಕಲ್ ಟೋಲ್‌ಗೇಟ್ ತೆರವುಗೊಳಿಸುವ ಕಾರ್ಯಾಚರಣೆಗೆ ಬೆಂಬಲ ವ್ಯಕ್ತಪಡಿಸಿದೆ.

ಆಲೂರು ಹಾಡಿ ಮನೆಯಲ್ಲಿ ಕೊರಗ ಮಕ್ಕಳ ರಂಗ ಶಿಬಿರಕ್ಕೆ ಚಾಲನೆ

ಸಾಂಸ್ಕೃತಿಕ ಸಂಪತ್ತನ್ನು ಬಳುವಳಿಯಂತೆ ಪಡೆದ ಕೊರಗ ಸಮುದಾಯದ ಪರಿಸ್ಥಿತಿ ಹಾಗೂ ಪರಂಪರೆಯನ್ನು ಜಗತ್ತು ತಿಳಿಯಬೇಕಿದೆ. ಸಾಂಸ್ಕೃತಿಕ ಸಿರಿವಂತಿಕೆ ಸಹಿತ ವಿವಿಧ ವಿಚಾರಗಳಲ್ಲಿ ಕೊರಗರು ಈಗಲೂ ಮುಖ್ಯವಾಹಿನಿಯಲ್ಲೇ ಇದ್ದು, ಅವರಿದ್ದಲ್ಲಿಗೆ ನಾವು ಹೋಗಬೇಕಿದೆ. ಬೂಟಾಟಿಕೆಯ ಮಾತುಗಳ ಬದಲಾಗಿ ಅವರನ್ನು ಅರಿಯುವ ಹಾಗೂ ಪ್ರೀತಿಸುವ ಗುಣ ಬೆಳೆಸಿಕೊಳ್ಳಬೇಕು ಎಂದು ಸಮುದಾಯದ ಕುಂದಾಪುರದ ಅಧ್ಯಕ್ಷ ಉದಯ ಗಾಂವ್ಕರ್ ಹೇಳಿದ್ದಾರೆ.

ಕರ್ನಾಟಕ ಆದಿವಾಸಿ ಹಕ್ಕುಗಳ ಸಮನ್ವಯ ಸಮಿತಿ ಉಡುಪಿ ಜಿಲ್ಲಾ ಸಂಘಟನಾ ಸಮಿತಿ ಹಾಗೂ ಸಮುದಾಯ ಕುಂದಾಪುರದ ಆಶ್ರಯದದಲ್ಲಿ ಆಲೂರು ಹಾಡಿಮನೆಯಲ್ಲಿ ಅಕ್ಟೋಬರ್ 10 ರಿಂದ ಒಂದು ವಾರ ನಡೆಯಲಿರುವ ಕೊರಗ ಮಕ್ಕಳ ರಂಗ ತರಬೇತಿ ಶಿಬಿರ ಕಾಡ್ತ್ ಕಿಜ್ರ್ ಬಣ್ಣ್ ಹೆಜ್ (ಕಾಡಿನ ಮಕ್ಕಳ ಬಣ್ಣದ ಹೆಜ್ಜೆ) ದ ಉದ್ಘಾಟನಾ ಕಾರ್ಯಕ್ರಮದಲ್ಲಿ ಅವರು ದಿಕ್ಸೂಚಿ ಭಾಷಣ ಮಾಡಿದರು.

ಕರ್ನಾಟಕ ಆದಿವಾಸಿ ಹಕ್ಕುಗಳ ಸಮನ್ವಯ ಸಮಿತಿಯ ಜಿಲ್ಲಾ ಪ್ರಧಾನ ಕಾರ್ಯದರ್ಶಿ ಗಣೇಶ್ ಆಲೂರು ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿದ್ದರು. ಶಿಬಿರದ ನಿರ್ದೇಶಕ ವಾಸುದೇವ ಗಂಗೇರ, ಪಡುಕೋಣೆ ವ್ಯವಸಾಯ ಸೇವಾ ಸಹಕಾರಿ ಸಂಘದ ಅಧ್ಯಕ್ಷ ರಾಜೀವ ಪಡುಕೋಣೆ, ಸರಕಾರಿ ಶಾಲೆಯ ಮುಖ್ಯೋಪಾಧ್ಯಾಯ ಉದಯ ಕುಮಾರ್ ಉಪಸ್ಥಿತರಿದ್ದರು.

ಕರ್ನಾಟಕ ಆದಿವಾಸಿ ಹಕ್ಕುಗಳ ಸಮನ್ವಯ ಸಮಿತಿಯ ಉಡುಪಿ ಜಿಲ್ಲಾಧ್ಯಕ್ಷ ಶ್ರೀಧರ ನಾಡಾ ಕಾರ್ಯಕ್ರಮ ನಿರೂಪಿಸಿದರು. ಕುಂದಾಪುರ ಸಮುದಾಯ ಸಂಸ್ಥೆಯ ಸದಸ್ಯ ರಮೇಶ್ ಗುಲ್ವಾಡಿ ಸ್ವಾಗತಿಸಿದರು. ರವೀಂದ್ರ ಕೋಡಿ ವಂದಿಸಿದರು.

ಭೂಮಿಯ ಹಕ್ಕಿಗಾಗಿ ನಿರಂತರ ಹೋರಾಟ ನಡೆಸಲು ಕರೆ

ಮಂಗಳೂರಿನ ವಾಮಂಜೂರು ಮಂಗಳಜ್ಯೋತಿಯಲ್ಲಿ ಭೂಮಿ ಹಕ್ಕು ಸಮಾವೇಶವು 16 ಅಕ್ಟೋಬರ್ 2022 ರಂದು ಯಶಸ್ವಿಯಾಗಿ ಜರುಗಿತು. ಕರ್ನಾಟಕ ಆದಿವಾಸಿ ಹಕ್ಕುಗಳ ಸಮನ್ವಯ ಸಮಿತಿ ರಾಜ್ಯ ಸಹ ಸಂಚಾಲಕರಾದ ಡಾ.ಎಸ್.ವೈ. ಗುರುಶಾಂತ್‌ರವರು ಸಮಾವೇಶವನ್ನು ಉದ್ಘಾಟಿಸಿ ಮಾತನಾಡುತ್ತಾ, ದೇಶವು ಸ್ವಾತಂತ್ರ್ಯ ಹೋರಾಟದ 75ನೇ ಸಂವತ್ಸರದ ಸಮಯದಲ್ಲಿ ಆದಿವಾಸಿ ಸಮುದಾಯವು ಭೂಮಿಯ ಹಕ್ಕಿಗಾಗಿ ಹೋರಾಟ ನಡೆಸಬೇಕಾಗಿ ಬಂದಿರುವುದು ವಿಷಾದನೀಯ. ದೇಶದ ಉದ್ದಗಲಕ್ಕೂ ಆದಿವಾಸಿ ಸಮುದಾಯಗಳು ಬದುಕುವ ಹಕ್ಕಿಗಾಗಿ, ಭೂಮಿಯ ಹಕ್ಕಿಗಾಗಿ ನಿರಂತರ ಹೋರಾಟ ನಡೆಸುತ್ತಿದೆ ಎಂದು ಹೇಳಿದರು. ಕರಾವಳಿ ಕರ್ನಾಟಕದ ಆದಿವಾಸಿ ಕೊರಗ ಸಮುದಾಯದ 33 ಕುಟುಂಬಗಳ ಗುರುತಿಸಲಾದ ಮನೆನಿವೇಶನ ಪಡೆಯಲು ನಿರಂತರ ಹೋರಾಟ ನಡೆಸಬೇಕೆಂದು ಕರೆ ನೀಡಿದರು.

ಮುಖ್ಯ ಅತಿಥಿಯಾಗಿ ಮಾತನಾಡಿದ ಪ್ರಗತಿಪರ ಚಿಂತಕರೂ, ಆದಿವಾಸಿ ಹಕ್ಕುಗಳ ಸಮನ್ವಯ ಸಮಿತಿಯ ರಾಜ್ಯ ಸಹಸಂಚಾಲಕರಾದ ಡಾ. ಕೃಷ್ಣಪ್ಪ ಕೊಂಚಾಡಿಯವರು ಮಾತನಾಡುತ್ತಾ, ಮಹಮ್ಮದ್ ಪೀರ್ ವರದಿಯ ಸಮಗ್ರ ಅನುಷ್ಠಾನವಾಗಬೇಕಾಗಿದೆ. ಆ ಹಿನ್ನೆಲೆಯಲ್ಲಿ ಜಮೀನು, ಜಂಗಲ್, ಜಲ್ ಈ ಮೂರು ಧ್ಯೇಯ ವಾಕ್ಯಗಳ ಸಾಕ್ಷೀಕರಿಸಲು ಹೋರಾಟ ಅನಿವಾರ್ಯವೆಂದು ಹೇಳಿದರು.

ಇನ್ನೋರ್ವ ಮುಖ್ಯ ಅತಿಥಿಯಾದ ದ.ಕ ಜಿಲ್ಲಾ ಸಿಪಿಐಎಂ ಕಾರ್ಯದರ್ಶಿ ಕೆ. ಯಾದವ ಶೆಟ್ಟಿ, ಸಿಐಟಿಯು ಪ್ರಧಾನ ಕಾರ್ಯದರ್ಶಿ ಸುನೀಲ್ ಕುಮಾರ್ ಬಜಾಲ್‌ರವರು ಸಭೆಯನ್ನು ಉದ್ದೇಶಿಸಿ ಮಾತನಾಡಿದರು.

ಸಭೆಯು 28 ನವೆಂಬರ್ 2022 ರಂದು ಭೂಮಿಯ ಹಕ್ಕಿಗಾಗಿ ಜಿಲ್ಲಾಧಿಕಾರಿ ಕಚೇರಿಗೆ ಪಾದಯಾತ್ರೆ ನಡೆಸಲು ತೀರ್ಮಾನಿಸಿತು.

ವೇದಿಕೆಯಲ್ಲಿ ಸಾಹಿತಿ ಬಿ. ಎಂ ರೋಹಿಣಿ, ಕರ್ನಾಟಕ ಆದಿವಾಸಿ ಹಕ್ಕುಗಳ ಸಮನ್ವಯ ಸಮಿತಿ ಮಂಗಳೂರು ನಗರ ಕಾರ್ಯದರ್ಶಿ ಶಶಿಕಲಾ ನಂತೂರು, ಮಂಗಳಜ್ಯೋತಿ ಘಟಕದ ಅಧ್ಯಕ್ಷರಾದ ಕರಿಯ ಕೆ, ಪದಾಧಿಕಾರಿ ಮಂಜುಳ ವಾಮಂಜೂರು, ಮಂಗಳಜ್ಯೋತಿ ಘಟಕದ ಕಾನೂನು ಸಲಹೆಗಾರರಾದ ಮನೋಜ್ ವಾಮಂಜೂರು, ಯೋಗೀಶ್ ಜಪ್ಪಿನಮೊಗರು, ದಲಿತ ಹಕ್ಕುಗಳ ಸಮಿತಿಯ ಅಧ್ಯಕ್ಷರಾದ ರಾಧಕೃಷ್ಣ ಬಿ, ಕಾರ್ಯದರ್ಶಿ ಕೃಷ್ಣ ತಣ್ಣೀರುಬಾವ, ಹೇಮ ಪಚ್ಚನಾಡಿ, ಶೇಖರ್ ಮಂಗಳಜ್ಯೋತಿ, ಅಚ್ಯುತ ಕಾವೂರು, ದೊಂಬಯ್ಯ ಕಾವೂರು ಉಪಸ್ಥಿತರಿದ್ದರು.

ಸಮಾವೇಶಕ್ಕೆ ಶುಭಾಶಯ ಕೋರಿ ಮುನೀರ್ ಕಾಟಿಪಳ್ಳ, ದಿನೇಶ್ ಹೆಗ್ಡೆ ಉಳಿಪಾಡಿ, ಸಂತೋಷ್ ಬಜಾಲ್, ಬಿ.ಕೆ. ಇಮ್ತಿಯಾಜ್ ಮೊದಲಾದವರು ಮಾತನಾಡಿದರು.

ಸಮಾವೇಶದಲ್ಲಿ ಕಾರ್ಯಕ್ರಮದ ನಿರ್ವಹಣೆಯನ್ನು ಮಂಗಳಜ್ಯೋತಿ ಘಟಕದ ಸಹಸಂಚಾಲಕರಾದ ಮನೀತ್‌ಕುಮಾರ್ ಮಾಡಿದರು. ಮೊದಲಿಗೆ ಮಂಗಳಜ್ಯೋತಿ ಘಟಕದ ಸಹಸಂಚಾಲಕರಾದ ವಿಘ್ನೇಶ್ ಸ್ವಾಗತಿಸಿ, ಕೊನೆಯಲ್ಲಿ ವಂದಿಸಿದರು.









ರೈತ ವಿರೋಧಿ ಸರಕಾರವನ್ನು ಮನೆಗೆ ಕಳುಹಿಸಿ-ಹನನ್ ಮೊಲ್ಲಾ

'ರೈತರ ಸಮಸ್ಯೆಗೆ ಸ್ಪಂದಿಸದ ರೈತವಿರೋಧಿ ಸರ್ಕಾರವನ್ನು ಮುಂದುವರಿಯಲು ಅವಕಾಶ ನೀಡಬೇಡಿ' ಎಂದು ಅಖಿಲ ಭಾರತ ಕಿಸಾನ್ ಸಭಾ (ಎಐಕೆಎಸ್) ರಾಷ್ಟ್ರೀಯ ಪ್ರಧಾನ ಕಾರ್ಯದರ್ಶಿ ಹನನ್ ಮೊಲ್ಲಾ ಕರೆ ನೀಡಿದರು.

ಕರ್ನಾಟಕ ಪ್ರಾಂತ ರೈತ ಸಂಘದ 17ನೇ ರಾಜ್ಯ ಸಮ್ಮೇಳನದ ಪ್ರಯುಕ್ತ ಶುಕ್ರವಾರ ರಾಯಚೂರು ನಗರದಲ್ಲಿ ನಡೆದ ಬಹಿರಂಗ ಸಭೆಯಲ್ಲಿ ಮಾತನಾಡಿದ ಅವರು, 'ಕೃಷಿ ವೆಚ್ಚ ಹೆಚ್ಚಳವಾಗಿದ್ದು, ರೈತರು ಬೆಳೆದ ಬೆಳೆಗಳಿಗೆ ಯೋಗ್ಯ ಬೆಲೆ ದೊರೆಯುತ್ತಿಲ್ಲ' ಎಂದು ಆಕ್ರೋಶ ಹೊರಹಾಕಿದರು. 'ಸಂಕಷ್ಟಕ್ಕೆ ಸಿಲುಕಿರುವ ರೈತರು ಆತ್ಮಹತ್ಯೆ ಮಾರ್ಗ ಹಿಡಿದಿದ್ದಾರೆ. ಆದರೆ, ಕೇಂದ್ರ ಸರ್ಕಾರ ಉದಾಸೀನ ಮನೋಭಾವ ತೋರಿಸುತ್ತಿದೆ. ಪರಿಹಾರ ಕ್ರಮಗಳನ್ನು ಕೈಗೊಳ್ಳುತ್ತಿಲ್ಲ' ಎಂದು ಆರೋಪಿಸಿದರು.

'ದೇಶದಲ್ಲಿ ಈವರೆಗೆ ನಾಲ್ಕು ಲಕ್ಷಕ್ಕೂ ಹೆಚ್ಚು ರೈತರು ಆತ್ಮಹತ್ಯೆ ಮಾಡಿಕೊಂಡಿದ್ದಾರೆ. ಕೇಂದ್ರದ ಫಸಲ್ ಬಿಮಾ ಯೋಜನೆಯಿಂದ ಖಾಸಗಿ ವಿಮಾ ಕಂಪೆನಿಗಳಿಗೆ ಲಾಭವಾಗಿದೆ ಹೊರತು ರೈತರಿಗೆ ಅಲ್ಲ. ಕರಾಳ ಕಾಯ್ದೆಗಳ ಪುಟ 11 ಕ್ಕೆ

ಕೆ.ಪಿ.ಆರ್.ಎಸ್. ನ 17 ನೇ ರಾಜ್ಯ ಸಮ್ಮೇಳನ

ಪುಟ 3 ರಿಂದ

ಖಾಸಗೀಕರಣ ವಿರೋಧಿಸಿ ನಿರ್ಣಯ.

19) ಕೋಮುವಾದಿ ಶಕ್ತಿಗಳ ನಿಗ್ರಹಕ್ಕೆ ಆಗ್ರಹಿಸಿ ನಿರ್ಣಯ.

20) ರೈತ ಹಾಗೂ ಕೂಲಿಕಾರರು ಮತ್ತು ಕಸುಬುದಾರರಿಗೆ ಭವಿಷ್ಯದ ಕಲ್ಯಾಣ ನಿಧಿ ಯೋಜನೆ ಹಾಗೂ ತಲಾ 3,000 ರೂಗಳ ಪಿಂಚಣಿ ಒದಗಿಸಲು ಆಗ್ರಹ.

21) ಬೀಜ, ರಸಾಯನಿಕ ಗೊಬ್ಬರ ಹಾಗೂ ಕ್ರಿಮಿನಾಶಕಗಳ ಬೆಲೆಗಳ ನಿಯಂತ್ರಣಕ್ಕೆ ಮತ್ತು ಶೇ. 50 ಸಹಾಯ ಧನಕ್ಕೆ ಆಗ್ರಹಿಸಿ ನಿರ್ಣಯ.

22) ಸಾಗುವಳಿಯಲ್ಲಿ ತೊಡಗಿದ ಬಡರೈತರ ಹಾಗೂ ಕೂಲಿಕಾರ ಗೇಣಿದಾರರ ಸಂರಕ್ಷರಣೆಗೆ ಆಗ್ರಹ.

23) ಅತಿವೃಷ್ಟಿ, ಬರಗಾಲ ಸಂತ್ರಸ್ಥ ರೈತ –ಕೃಷಿಕೂಲಿಕಾರರಿಗೆ ವೈಜ್ಞಾನಿಕ ಪರಿಹಾರ ನೀಡಲು ಹಾಗೂ ಎಲ್ಲಾ ಗ್ರಾಮೀಣ ಜನತೆಯ ಎಲ್ಲಾ ರೀತಿಯ ಸಾಲಗಳನ್ನು ಮನ್ನಾ ಮಾಡಲು ಆಗ್ರಹ.

24) ಹಾಲು, ಕಬ್ಬು, ಕೋಳಿ, ತೊಗರಿ, ಲಿಂಬೆ, ತಂಬಾಕು ಸೇರಿದಂತೆ ಬೆಳೆವಾರು ಬೇಡಿಕೆಗಳಿಗೆ ಸಂಬಂಧಿಸಿದ ನಿರ್ಣಯ.

25) ರೇಷ್ಮೆ, ತೋಟಗಾರಿಕೆ ಇಲಾಖೆಯನ್ನು ಕೃಷಿ ಇಲಾಖೆ ಜೊತೆ ವಿಲೀನ ವಿರೋಧಿಸಿ ನಿರ್ಣಯ.

ರೈತ ವಿರೋಧಿ ಕೃಷಿ ಕಾಯ್ದೆಗಳು, ವಿದ್ಯುತ್ ತಿದ್ದುಪಡಿ ಮಸೂದೆ ಹಾಗೂ ಜಾಗತಿಕ ಬಂಡವಾಳ ಹೂಡಿಕೆದಾರರ ಸಭೆ ವಿರೋಧಿಸಿ ನವೆಂಬರ್ 2–2022 ರಂದು ರಾಜ್ಯದಾದ್ಯಂತ ಪ್ರತಿಭಟನೆ

ಅತಿವೃಷ್ಟಿಯಿಂದ ಇಡೀ ರಾಜ್ಯವೇ ಮುಳುಗಿ ರೈತರ ಬದುಕು ಪ್ರವಾಹದಲ್ಲಿ ಕೊಚ್ಚಿ ಹೋಗುತ್ತಿರುವಾಗ ಪರಿಹಾರ ಕಾರ್ಯಾಚರಣೆ ಹಾಗೂ ಸಂತ್ರಸ್ತರಿಗೆ ಪರಿಹಾರ ನೀಡಿಕೆಯಲ್ಲಿ ತೊಡಗಬೇಕಿದ್ದ ರಾಜ್ಯ ಸರ್ಕಾರ ವಿದೇಶಿ ಹಾಗೂ ದೇಶಿಯ ಬಂಡವಾಳದಾರರ ದುರ್ಲಾಭಕ್ಕಾಗಿ ಜಾಗತಿಕ ಬಂಡವಾಳ ಹೂಡಿಕೆದಾರರ ಸಭೆ ಸಂಘಟಿಸುತ್ತಿರುವುದು ರೈತ ವಿರೋಧಿಯಾಗಿದೆ.

ಕೃಷಿ, ತೋಟಗಾರಿಕೆ ಬೆಳೆಗಳನ್ನು ಬೆಳೆಯಲು ರೈತರು ಹಾಕಿರುವ ಬಂಡವಾಳಕ್ಕೆ ರಕ್ಷಣೆ ನೀಡದೇ ಜಾಗತಿಕ ಹಣಕಾಸು ಬಂಡವಾಳದಾರರನ್ನು ಒಲೈಸುತ್ತಿರುವುದು ಅತ್ಯಂತ ನಾಚಿಕೇಗೇಡು ಕ್ರಮವಾಗಿದೆ.

ಈಗಾಗಲೇ ಲ್ಯಾಂಡ್ ಬ್ಯಾಂಕ್, ಕೆಎಐಡಿಬಿ ಭೂ ಸ್ವಾಧೀನ ಮುಂತಾದ ಕ್ರಮಗಳ ಮೂಲಕ ಲಕ್ಷಾಂತರ ಎಕರೆ ಕೃಷಿ ಭೂಮಿಯನ್ನು ಬಲವಂತವಾಗಿ ರೈತರಿಂದ ಕಿತ್ತುಕೊಳ್ಳಲಾಗಿದೆ. ಈ ಯಾವ ಭೂಮಿಯಲ್ಲೂ ಉದ್ಯೋಗ ಸೃಷ್ಟಿ ಮಾಡದೇ ಪಾಳು ಬಿದ್ದಿವೆ. ಇತ್ತ ಕೃಷಿ ಯೂ ಇಲ್ಲದೇ ಅತ್ತ ಕೈಗಾರಿಕೆಯೂ ಇಲ್ಲದೇ ಕೇವಲ ಕಾರ್ಪೋರೇಟ್ ಕಂಪನಿಗಳ ಆಸ್ತಿ ಮೌಲ್ಯ ಹೆಚ್ಚಿಸಲು ಬಳಕೆ ಮಾಡಲಾಗಿದೆ. ಇದು ಒಂದು ಕಾರ್ಪೋರೇಟ್ ರಿಯಲ್ ಎಸ್ಟೇಟ್ ದಂಧೆಯಾಗಿದೆ.ಇಂತಹ ಪರಿಸ್ಥಿತಿಯಲ್ಲಿ ಮತ್ತಷ್ಟು ರೈತರ ಭೂಮಿ ಕಿತ್ತುಕೊಳ್ಳಲು ಜಾಗತಿಕ ಬಂಡವಾಳ ಹೂಡಿಕೆದಾರರ ಸಭೆಯ ನಾಟಕವಾಡಲಾಗುತ್ತಿದೆ ಎಂದು ಕರ್ನಾಟಕ ಪ್ರಾಂತ ರೈತ ಸಂಘ (KPRS) ರಾಜ್ಯ ಸಮಿತಿ ಅಪಾದಿಸುತ್ತದೆ.

ರೈತ ವಿರೋಧಿ ಕೃಷಿ ಕಾಯ್ದೆಗಳು, ವಿದ್ಯುತ್ ತಿದ್ದುಪಡಿ ಮಸೂದೆ ಹಾಗೂ ಜಾಗತಿಕ ಬಂಡವಾಳ ಹೂಡಿಕೆದಾರರ ಸಭೆ ವಿರೋಧಿಸಿ ನವೆಂಬರ್ 2–2022 ರಂದು ರಾಜ್ಯದಾದ್ಯಂತ ಎಲ್ಲಾ ತಾಲ್ಲೂಕು/ಜಿಲ್ಲಾ ಕೇಂದ್ರಗಳಲ್ಲಿ ಪ್ರತಿಭಟನೆಗೆ ಕರೆ ನೀಡಲಾಗಿದೆ ಎಂದು ಕರ್ನಾಟಕ ಪ್ರಾಂತ ರೈತ ಸಂಘ (KPRS) ರಾಜ್ಯ ಸಮಿತಿ ತಿಳಿಸುತ್ತದೆ.

ನೂತನ ರಾಜ್ಯ ಸಮಿತಿ ಅಸ್ತಿತ್ವಕ್ಕೆ

ಕರ್ನಾಟಕ ಪ್ರಾಂತ ರೈತ ಸಂಘ KPRS 17 ನೇ ರಾಜ್ಯ ಸಮ್ಮೇಳನದಲ್ಲಿ 43 ಸದಸ್ಯರ ನೂತನ ರಾಜ್ಯ ಸಮಿತಿಯನ್ನು ಆಯ್ಕೆ ಮಾಡಲಾಯಿತು.

ನೂತನವಾಗಿ ಆಯ್ಕೆಯಾದ 14 ಜನರ ಪದಾಧಿಕಾರಿಗಳು

ಅಧ್ಯಕ್ಷರು

1. ಜಿ.ಸಿ.ಬಯ್ಯಾರೆಡ್ಡಿ

ಉಪಾಧ್ಯಕ್ಷರು

2. ಯು.ಬಸವರಾಜು,
3. ಎನ್. ವೆಂಕಟಾಚಲಯ್ಯ,
4. ಬಿ.ಎಸ್.ಸೊಪ್ಪಿನ್,
5. ಶಾಂತಾರಾಂ ನಾಯಕ್,
6. ಆರ್.ಸೂರ್ಯನಾರಾಯಣ,
7. ಪಿ. ಮಂಜುನಾಥ ರೆಡ್ಡಿ.

ಪ್ರಧಾನ ಕಾರ್ಯದರ್ಶಿ

8. ಟಿ.ಯಶವಂತ

ಜಂಟಿ ಕಾರ್ಯದರ್ಶಿಗಳು

9. ಎಚ್.ಆರ್.ನವೀನ್ ಕುಮಾರ್,
10. ಜಿ.ನಾಗರಾಜ್,
11. ಶರಣಬಸಪ್ಪ ಮಮಶೆಟ್ಟಿ,
12. ಎಚ್.ಪಿ.ಲಕ್ಷ್ಮಿನಾರಾಯಣ,
13. ಡಾ.ಸಾಯಬಣ್ಣ ಗುಡುಬ,
14. ಎನ್.ಎಲ್.ಭರತ್‌ರಾಜ್

ಅಭಿನಂದನೆಗಳು: ಮೂರು ದಿನಗಳ ಕಾಲ ನಡೆದ ರಾಜ್ಯ ಸಮ್ಮೇಳನ ಎಲ್ಲಾ ರೀತಿಯಲ್ಲೂ ಯಶಸ್ವಿಯಾಗಿ ಸಂಘಟನೆಯಾಗಲು ಎಲ್ಲಾ ರೀತಿಯ ಸಹಾಯ–ಸಹಕಾರ ನೀಡಿದ ರಾಯಚೂರು ಜಿಲ್ಲೆಯ ನಾಗರಿಕರನ್ನು, ಸಮ್ಮೇಳನದ ಸ್ವಾಗತ ಸಮಿತಿ ಪದಾಧಿಕಾರಿಗಳನ್ನು, ಸ್ವಯಂಸೇವಕ ಸಂಗಾತಿಗಳನ್ನು ಕರ್ನಾಟಕ ಪ್ರಾಂತ ರೈತ ಸಂಘ (KPRS) ರಾಜ್ಯ ಸಮಿತಿ ಹಾರ್ಧಿಕವಾಗಿ ಅಭಿನಂಸಿದೆ ಹಾಗೂ ಇದೇ ರೀತಿ ರೈತ ಚಳವಳಿಗೆ ನಿರಂತರವಾಗಿ ಬೆಂಬಲ ಮುಂದುವರೆಸುವಂತೆ ವಿನಂತಿಸಿದೆ.



ಯು.ಬಸವರಾಜು, ಜಿ.ನಾಗರಾಜ್, ಶರಣಬಸಪ್ಪ ಮಮಶೆಟ್ಟಿ, ಎಚ್.ಪಿ.ಲಕ್ಷ್ಮಿನಾರಾಯಣ, ಎನ್.ಎಲ್.ಭರತ್ ರಾಜ್, ಜಿ.ಸಿ.ಬಯ್ಯಾರೆಡ್ಡಿ, ಟಿ.ಯಶವಂತ, ಎಚ್.ಆರ್.ನವೀನ್ ಕುಮಾರ್, ಡಾ.ಸಾಯಬಣ್ಣ ಗುಡುಬ, ಪಿ.ಮಂಜುನಾಥ ರೆಡ್ಡಿ, ಶಾಂತಾರಾಂ ನಾಯಕ್, ಪಿ.ಆರ್.ಸೂರ್ಯನಾರಾಯಣ, ಎನ್. ವೆಂಕಟಾಚಲಯ್ಯ, ಬಿ.ಎಸ್.ಸೊಪ್ಪಿನ್

ಜಾತಿ ಗೋಡೆಗಳ ದಾಟುತ್ತಾ

ರಾಜ್ಯದಲ್ಲಿ ಕಾನೂನು ಸುವ್ಯವಸ್ಥೆ ಹದಗೆಟ್ಟು ಬೀದಿ ಪುಂಡ, ಪೋಕರಿಗಳದೇ ಕಾನೂನು ನಡೆಯುತ್ತಿರುವುದು ಶೋಚನೀಯ. ಸರ್ಕಾರ ತನ್ನ ಹೊಣೆಗಾರಿಕೆಯಿಂದ ಜಾರಿಕೊಳ್ಳುವಂತಿಲ್ಲ. ಇಲ್ಲಿ ಬುದ್ಧಿಜೀವಿಗಳು, ಸಾಹಿತಿಗಳು, ಕಲಾವಿದರು ಸರ್ಕಾರದ ತಪ್ಪು ನಡೆಯನ್ನು ವಿಮರ್ಶಿಸಬೇಕಾಗುತ್ತದೆ. ಈಗ ನಾವು ಸೌಹಾರ್ದ ಕರ್ನಾಟಕಕ್ಕಾಗಿ ಧ್ವನಿ ಎತ್ತದೇ ಹೋದರೆ, ಮುಂಬರುವ ಜನಸಮುದಾಯ ನಮ್ಮನ್ನೆಂದೂ ಕ್ಷಮಿಸದು. ಅನ್ಯಾಯವನ್ನು ಸಹಿಸುವುದೂ ಸಹ ನಮ್ಮನ್ನು ಪಾಪದ ಪಾಲುದಾರರನ್ನಾಗಿ ಮಾಡುತ್ತದೆ.



ಡಾ.ಕೆ.ಷರೀಫಾ

ನಾನು ಚಿಕ್ಕವಳಿದ್ದಾಗ ಮನೆಯಲ್ಲಿ ಬಡತನವಿತ್ತು, ಆದರೆ ಹೃದಯ ಶ್ರೀಮಂತಿಕೆಗೆ ಯಾವುದೇ ಬಡತನವಿರಲಿಲ್ಲ. ಆಗ ನಮಗೆ ಜಾತಿ, ಧರ್ಮಗಳು ಅಡ್ಡ ಬರಲೇಯಿಲ್ಲ. ಎಷ್ಟೊಂದು ಸೌಹಾರ್ದ ಮತ್ತು ಶಾಂತಿಯ ದಿನಗಳಾಗಿದ್ದವು. ಅಲ್ಲಿ ಧಾರ್ಮಿಕತೆ ಇತ್ತು. ಆದರೆ ಧಾರ್ಮಿಕ ಮೂಲಭೂತವಾದಿತನ ಇರಲಿಲ್ಲ.

ನಮ್ಮ ನಾಡಿನ ಜನರು ಇಲ್ಲಿಯವರೆಗೆ ಸ್ನೇಹ, ಸೌಹಾರ್ದದಿಂದ ಬದುಕಿದ್ದಾರೆ. ಸರ್ವಧರ್ಮ ಸಹಿಷ್ಣುತೆ, ಮಾನವೀಯತೆ, ಸಹಜೀವಿಗಳ ಬಗ್ಗೆ ಅನುಕಂಪ ಹೊಂದಿದಾತನೇ ನಿಜದ ಮಾನವನಾಗಿದ್ದಾನೆ. ಯಾವ ಧರ್ಮವೂ ಪರಸ್ಪರ ದ್ವೇಷವನ್ನೆಂದಿಗೂ ಬೋಧಿಸುವುದಿಲ್ಲ. ಇದಕ್ಕಿಂತ ಸತ್ಯವು ಬೇರೊಂದಿಲ್ಲ. ಜನರ ಮನಸ್ಸುಗಳ ಮಧ್ಯೆ ದ್ವೇಷದ ವಿಷಬೀಜ ಬಿತ್ತುವ ಕೆಲಸ ಕರ್ನಾಟಕದಲ್ಲಿ ಇತ್ತೀಚೆಗೆ ಆರಂಭವಾಗಿದೆ. ನಮ್ಮದು ಬಹುತ್ವದ ನಾಡು, ಇಲ್ಲಿ ಬಹುಸಂಸ್ಕೃತಿ, ಬಹುಧರ್ಮಗಳು ಚಲಾವಣೆಯಲ್ಲಿವೆ. ಕರ್ನಾಟಕದ ಆರೂವರೆ ಕೋಟಿ ಕನ್ನಡಿಗರನ್ನು ಧರ್ಮದ, ಜಾತಿಯ ಆಧಾರದಲ್ಲಿ ಒಡೆಯುವ ವ್ಯಾಪಾರಿ ಕೋಮುವಾದಿ ಶಕ್ತಿಗಳ ಹುನ್ನಾರದ ವಿರುದ್ಧ ನಾವು ಇಂದು ಧ್ವನಿ ಎತ್ತದೇ ಹೋದರೆ ನಾವು ಕನ್ನಡಿಗರು ನಮ್ಮ ನೆಲದಲ್ಲಿಯೇ ನಾವು ಅನಾಥರಾಗುವ ಕಾಲ ದೂರವಿಲ್ಲ.

ಇಂದು ರಾಜ್ಯದಲ್ಲಿ ಕಾನೂನು ಸುವ್ಯವಸ್ಥೆ ಹದಗೆಟ್ಟು ಬೀದಿ ಪುಂಡ, ಪೋಕರಿಗಳದೇ ಕಾನೂನು ನಡೆಯುತ್ತಿರುವುದು ಶೋಚನೀಯ. ಸರ್ಕಾರ ತನ್ನ ಹೊಣೆಗಾರಿಕೆಯಿಂದ ಜಾರಿಕೊಳ್ಳುವಂತಿಲ್ಲ. ಇಲ್ಲಿ ಬುದ್ಧಿಜೀವಿಗಳು, ಸಾಹಿತಿಗಳು, ಕಲಾವಿದರು ಸರ್ಕಾರದ ತಪ್ಪು ನಡೆಯನ್ನು ವಿಮರ್ಶಿಸಬೇಕಾಗುತ್ತದೆ. ಈಗ ನಾವು ಸೌಹಾರ್ದ ಕರ್ನಾಟಕಕ್ಕಾಗಿ ಧ್ವನಿ ಎತ್ತದೇ ಹೋದರೆ, ಮುಂಬರುವ ಜನಸಮುದಾಯ ನಮ್ಮನ್ನೆಂದೂ ಕ್ಷಮಿಸದು. ಅನ್ಯಾಯವನ್ನು ಸಹಿಸುವುದೂ ಸಹ ನಮ್ಮನ್ನು ಪಾಪದ ಪಾಲುದಾರರನ್ನಾಗಿ ಮಾಡುತ್ತದೆ.

ನಾವಿಂದು ದ್ವೇಷದ ಮಾತುಗಳನ್ನು ಬಿಟ್ಟು ಮನಸ್ಸುಗಳನ್ನು ಬೆಸೆಯುವ ಸೌಹಾರ್ದದ ಕುರಿತು ಮಾತಾಡಬೇಕಾಗಿದೆ. ಜನಸಮುದಾಯದ ಒಗ್ಗಟ್ಟಿನ ಮತ್ತು ಸಹಬಾಳ್ವೆಯ ಅವಶ್ಯಕತೆ ಇವತ್ತಿನ ತುರ್ತು ಅಗತ್ಯವಾಗಿದೆ. ದಿನೇ ದಿನೇ ಹಿಂದು ಮುಸ್ಲಿಂ, ಹಿಂದು ಮುಸ್ಲಿಂ, ಎನ್ನುತ್ತ ಹೊಸ ಹೊಸ ಸಮಸ್ಯೆಗಳನ್ನು ಹುಟ್ಟು ಹಾಕುತ್ತಿದ್ದರೆ ದೇಶ ಕಟ್ಟುವುದು ಯಾವಾಗ? ಎಲ್ಲಾ ಧರ್ಮದವರಿರುವ ಶಾಂತಿಯ ತೋಟ ಕರ್ನಾಟಕವಾಗಿದೆ. ಅದು ಹೀಗಾಗುವುದರ ಮೂಲಕವೇ ಪ್ರಗತಿ ಕಾಣಬೇಕಾಗಿದೆ. ಧರ್ಮಕ್ಕೂ ಧಾರ್ಮಿಕ ಮೂಲಭೂತವಾದಕ್ಕೂ ವ್ಯತ್ಯಾಸವಿದೆ. ಈ ದೇಶವು ಬಹುಧರ್ಮಗಳ, ಬಹುಸಂಸ್ಕೃತಿಗಳ ಮತ್ತು ಬಹುಭಾಷಿಕರ ನಾಡಾಗಿದೆ. ಇದನ್ನು ನಾವು ಅಲ್ಲಗಳೆಯಲಾಗದು. ಕೂಡಿ ಬದುಕಿದ ಸಂಸ್ಕೃತಿಗೆ ಸಾವಿರಾರು ವರ್ಷಗಳ ಇತಿಹಾಸವಿದೆ. ಆದರೆ ಕೋಮುವಾದವು ಇತ್ತೀಚಿನ ಕೋಮುವಾದಿ ಪಕ್ಷದ ರಾಜಕೀಯ ಹುನ್ನಾರದ ಬೆಳವಣಿಗೆಯಾಗಿದೆ.

ನಾನು ಚಿಕ್ಕವಳಿದ್ದಾಗ ಮನೆಯಲ್ಲಿ ಬಡತನವಿತ್ತು, ಆದರೆ ಹೃದಯ ಶ್ರೀಮಂತಿಕೆಗೆ ಯಾವುದೇ ಬಡತನವಿರಲಿಲ್ಲ. ನಮ್ಮ ಪಕ್ಕದ ಮನೆಯ ಲಿಂಗಾಯತ ಕೋಮಿನ ಮಹಾದೇವಿ ನನ್ನ ಜೀವದ ಗೆಳತಿ. ನಮ್ಮ ಮನೆಯಲ್ಲಿ ಎಲ್ಲರೂ ಉರ್ದು ಮೀಡಿಯಂನಿಂದ ಕಲಿತರೆ, ಅಣ್ಣ ಮಾತ್ರ ಕನ್ನಡ ಮೀಡಿಯಂನಲ್ಲಿ ಓದುತ್ತಿದ್ದ. ಗೆಳತಿ ಮಹಾದೇವಿಯೂ ಕನ್ನಡ ಮೀಡಿಯಂನಲ್ಲಿ ಓದುತ್ತಿದ್ದುದರಿಂದ ನಾನೂ ಅವಳೊಂದಿಗೆ ಕನ್ನಡದಲ್ಲಿಯೇ ಓದುವೆನೆಂದು ಹಟ ಹಿಡಿದುದಕ್ಕೆ ನನಗೆ ಕನ್ನಡ ಮಾಧ್ಯಮದಲ್ಲಿಯೇ ಸೇರಿಸಿದರು. ಮನೆಯ ಮುಂದಿನ ನಲ್ಲಿಯಿಂದ ನಾನು, ಮಹಾದೇವಿ ನೀರು ಹಿಡಿಯುತ್ತಿದ್ದೆವು. ನಾನು ಅವಳ ಕೊಡ ಮುಟ್ಟಿದರೆ ಸಾಕು ಸಿಡುಕುವ ಅವಳು, "ನೀವು ಖಂಡ ತಿಂತಿರಿ ಮುಟ್ಟಬ್ಯಾಡ" ಎಂದು ತುಂಬಿದ ಕೊಡದ ನೀರು ಚರಂಡಿಗೆ ಸುರಿದು ಮತ್ತೇ ಕೊಡ ತುಂಬಿಕೊಳ್ಳುತ್ತಿದ್ದಳು. ಶಹಾಬಜಾರದ ನಾಕಾ ಸರ್ಕಾರಿ ಶಾಲೆಯಲ್ಲಿ ನಾವಿಬ್ಬರೂ ಓದುತ್ತಿದ್ದೆವು. ಊಟದ ಗಂಟೆ ಹೊಡೆದರೆ ಸಾಕು ಅವಳು ನನ್ನ ಊಟದ ಡಬ್ಬಿ ಖಾಲಿ ಮಾಡಿದರೆ, ನಾನು ಅವಳ ಊಟದ ಡಬ್ಬಿ ಖಾಲಿ ಮಾಡುತ್ತಿದ್ದೆ. ನಮ್ಮ ಗೆಳೆತನ ಹೇಗಿತ್ತೆಂದರೆ, ಅವಳು ಎರಡನೆಯ ತರಗತಿಯಾದರೆ, ನಾನು ಒಂದನೇ ತರಗತಿ. ಅವಳು ನನ್ನನ್ನು ಬಿಟ್ಟಿರಲಾರದೇ. ನನ್ನದೇ ಕ್ಲಾಸಿನಲ್ಲಿ ಬಂದು ಕುಳಿತುಕೊಳ್ಳುತ್ತಿದ್ದಳು. ಶಿಕ್ಷಕರು ಹೇಳಿ ಹೇಳಿ ಸಾಕಾಗಿ ಕೊನೆಗೆ ಅವಳನ್ನೇ ಎರಡನೇ ತರಗತಿಯಿಂದ ಒಂದನೇ ತರಗತಿಗೆ ಶಿಫ್ಟ್ ಮಾಡಿದರು. ಇದು ನಮ್ಮ ಗೆಳೆತನದ ಮಾದರಿಯಾಗಿತ್ತು.



ನನ್ನಮ್ಮ ಮತ್ತು ನನ್ನ ಗೆಳತಿ ಮಹಾದೇವಿಯ ಅಮ್ಮನೂ ಗೆಳತಿಯರಾಗಿದ್ದರು. ಅವರಿಬ್ಬರೂ ಮನೆಯ ಮುಂದಿನ ಕಟ್ಟೆಗೆ ಕೂತು ಬದುಕಿನ ಕಷ್ಟಸುಖಗಳನ್ನು ಹಂಚಿಕೊಳ್ಳುತ್ತಿದ್ದರು. ನಮ್ಮ ಮನೆಯ ಎದುರಿಗಿದ್ದ ಶ್ಯಾಣಮತ್ತಿ (ಶರಣಮ್ಮ) ಯಾವುದೇ ಹಬ್ಬ ಬಂದರೂ ತಾನು ಮಾಡಿದ ಸಿಹಿಯಾದ ಹೋಳಿಗೆ ತಟ್ಟೆ ತುಂಬ ಕಳಿಸುತ್ತಿದ್ದಳು. ರಂಜಾನ ಹಬ್ಬದ ಶ್ಯಾವಿಗೆ ಪಾಯಸ ಅಮ್ಮ ಅವರ ಮನೆಗೆ ಕಳಿಸುತ್ತಿದ್ದಳು. ಮೊಹರಂ ಹಬ್ಬಕ್ಕೆ ಆಶುರಖಾನೆಯಲ್ಲಿ ಅಲೈದೇವ್ರು ಕೂಡಿಸುತ್ತಿದ್ದರೆ, ಅಣ್ಣಪ್ಪ ಮಾಸ್ತರನ ಹೆಂಡತಿ ಬಸ್ಸಮ್ಮ ಅಲೈದೇವ್ರಿಗೆ ಸಕ್ಕರೆ ಓದಿಕೆ ಮಾಡಿಸುತ್ತಿದ್ದಳು. ಊದಿನ ಕಡ್ಡಿ, ಲೋಬಾನ ಉರಿಸಿದ ಬೂದಿಯನ್ನು ಹಣೆಗೆ ಹಚ್ಚಿಕೊಳ್ಳುತ್ತಿದ್ದಳು. ಸಂಜೆ ಹೊಲದಿಂದ ಹಿಂತಿರುಗಿದ ಪುರುಷರೆಲ್ಲ ಸೇರಿ ಅಲೈದೇವರ ಹವಾಲಾದ ಸುತ್ತ ಕುಣಿಯುತ್ತ, ಹಸನ್ ಹುಸೇನರ ಧೂಲಾ ಹಾಡುತ್ತಿದ್ದರು. ಅಲ್ಲಿ ನಮಗೆ ಜಾತಿ ಎಂದಿಗೂ ಅಡ್ಡ ಬರುತ್ತಿರಲಿಲ್ಲ. ಗುಲಬರ್ಗಾದ ಶರಣಬಸವೇಶ್ವರ ಜಾತ್ರೆಗೆ ನಾನು ಚಿಕ್ಕವಳಿದ್ದಾಗ ಅಪ್ಪ ಹೆಗಲ ಮೇಲೆ ಕೂಡಿಸಿಕೊಂಡು ಹೋಗುತ್ತಿದ್ದರು. ಜಾತ್ರೆಯ ಜನಜಂಗುಳಿಯಲ್ಲಿ ನಾನು ಕಳೆದು ಹೋಗಬಾರದೆಂದು ಅಪ್ಪ ಹಾಗೆ ಮಾಡುತ್ತಿದ್ದರು. ಖಾರಿಕ, ಬಾಳಿ ಹಣ್ಣನ್ನು ನಿಧಾನಕ್ಕೆ ಬರುತ್ತಿರುವ ರಥಕ್ಕೆ ಎಸೆದು ಧನ್ಯರಾಗುತ್ತಿದ್ದೆವು. ತೇರಿಗೆ ಎಸೆದ ಹಣ್ಣುಗಳನ್ನು ಕ್ಯಾಚ್ ಹಿಡಿದು ತಿನ್ನುತ್ತಿದ್ದೆವು. ಆಗ ನಮಗದು ಹಿಂದು ದೇವರೆಂದು ಅನಿಸಲೇ ಇಲ್ಲ.



ಓಣಿಯಲ್ಲಿ ಗಂಡ ಹೆಂಡತಿ ಜಗಳವಾದರೆ ತಮ್ಮ ಮಕ್ಕಳನ್ನು ಕಳಿಸಿ ಅಮ್ಮನನ್ನು ಕರೆಸಿಕೊಂಡು ಜಗಳದ ನ್ಯಾಯ ಪಂಚಾಯ್ತಿ ಮಾಡಿ ಬರುತ್ತಿದ್ದಳು ಅಮ್ಮ. ಇಂತಹ ಪಂಚಾಯ್ತಿಗೆ ಹಿಂದು ಕುಟುಂಬಗಳೇ ಹೆಚ್ಚಾಗಿ ಕರೆಯುತ್ತಿದ್ದುದನ್ನು ನಾನು ಗಮನಿಸಿದ್ದೆ. ಓಣಿಯ ಹೆಂಗಸರ ಹೆರಿಗೆ ಸಮಯದಲ್ಲಿ ಸಹಕರಿಸುವುದರ ಮೂಲಕ, ಇಡೀ ಓಣಿಗೆ ನನ್ನಮ್ಮ "ಅಮ್ಮ"ನಾಗಿದ್ದಳು. ಮಕ್ಕಳಿಗೆ ಎಲ್ಲಿ ಹೋಗಿದ್ರಿ? ಅಂತ ಕೇಳಿದರೆ "ಅಮ್ಮಾನ ಮನೆಗೆ" ಎಂದು ಹೇಳುತ್ತಿದ್ದರು. ನಮ್ಮಮ್ಮ ನಮಗಷ್ಟೆ ಅಮ್ಮನಾಗಿರದೇ ಇಡೀ ಓಣಿಗೆ ಅಮ್ಮನಾಗಿದ್ದಳು.

ಅಪ್ಪನಿಗೆ ಆರೋಗ್ಯ ಇಲಾಖೆಯಲ್ಲಿ ಸರ್ಕಾರಿ ಕೆಲಸವಿತ್ತು. ಹಾರ್ಮೋನಿಯಂ ಬಾರಿಸುವುದು, ಹಾಡುವುದು ಅವರ ಹವ್ಯಾಸವಾಗಿತ್ತು. ಗೊಗ್ಗರು ಧ್ವನಿಯಲ್ಲಿ ಚುಟ್ಕಾ ಎಳೆಯುತ್ತ ಹಾಡುತ್ತಿದ್ದ ಅಪ್ಪನ ಜೀವದ ಗೆಳೆಯ ಬಸ್ಸಯ್ಯ ಸ್ವಾಮಿ. ಇಬ್ಬರೂ ಸೇರಿ ಗಂಟೆಗಟ್ಟಲೇ ಅನುಭಾವದ ಪದಗಳನ್ನು, ವಚನಗಳನ್ನು ಹಾಡುತ್ತಿದ್ದರು. ಇಬ್ಬರೂ ಸೇರಿ ಒಂದೇ ತಟ್ಟೆಯಲ್ಲಿ ಉಣ್ಣುತ್ತಿದ್ದರು. ಅಮ್ಮ ಬಿಸಿರೊಟ್ಟಿ, ಚಟ್ನಿ ಪಲ್ಯಗಳನ್ನು ಮಾಡಿ ಬಡಿಸುತ್ತಿದ್ದಳು. ಸ್ವಾಮಿಗೆ ತಾನು ಜಂಗಮನೆಂಬ ತನ್ನ ಹುಟ್ಟಿನ ಅಹಂಕಾರ ಎಂದೂ ಕಾಡಲಿಲ್ಲ. ನಮ್ಮ ಮನೆಗೆ ಹಿಂದು ಮುಸ್ಲೀಮರೆಲ್ಲ ಬರುತ್ತಿದ್ದರು. ನಮ್ಮ ಮನೆಯೊಂದು ಸೌಹಾರ್ದ ಕೇಂದ್ರವೇ ಆಗಿತ್ತು.

ಅಪ್ಪ ಆರೋಗ್ಯ ಇಲಾಖೆಯಲ್ಲಿ ಕೆಲಸ ಮಾಡುತ್ತಿದ್ದುದರಿಂದ ಕೆಲವು ಜ್ವರ, ಶೀತ, ಭೇದಿಯ ಗುಳಿಗೆಗಳನ್ನು ತಂದಿಡುತ್ತಿದ್ದರು. ಅಮ್ಮ ಮನೆಯಲ್ಲಿ ಮೂರು ಬಗೆಯ ಡಬ್ಬಿಗಳನ್ನಿಟ್ಟಿದ್ದಳು. ಅನಕ್ಷರಸ್ತೆಯಾದ ಅವಳಿಗೆ ಓದು ಬರಹ ಬರುತ್ತಿದ್ದಿಲ್ಲ. ಅಪ್ಪನಾದರೂ ಏಳನೆ ತರಗತಿಯವರೆಗೆ ಓದಿದ್ದರು. ಅದಕ್ಕೆ ಡಬ್ಬಗಳನ್ನು ಗುರುತು ಮಾಡಿ, ಜ್ವರ, ಶೀತ, ಭೇದಿಗೆ ಮೂರು ಬಗೆಯ ಮಾತ್ರೆಗಳನ್ನಿಟ್ಟು ಓಣಿಯಲ್ಲಿ ಯಾರಿಗೆ ಈ ಮೂರು ಕಾಯಿಲೆಯಾದರೂ ಅವರು ಆಸ್ಪತ್ರೆಗೆ ಹೋಗುತ್ತಿರಲಿಲ್ಲ. ಮೊದಲು ಅಮ್ಮನ ಬಳಿ ಬಂದು ಗುಳಿಗೆ ಪಡೆದು ಆರಾಮಾಗುತ್ತಿದ್ದರು. ಎರಡು ದಿನ ನೋಡಿ ಆಗಲೂ ಆರಾಮಾಗದಿದ್ದರೆ ಮಾತ್ರ ಆಸ್ಪತ್ರೆಗೆ ಹೋಗುತ್ತಿದ್ದರು.

ಆಗ ನಮಗೆ ಜಾತಿ, ಧರ್ಮಗಳು ಅಡ್ಡ ಬರಲೇಯಿಲ್ಲ. ಎಷ್ಟೊಂದು ಸೌಹಾರ್ದ ಮತ್ತು ಶಾಂತಿಯ ದಿನಗಳಾಗಿದ್ದವು. ಅಲ್ಲಿ ಧಾರ್ಮಿಕತೆ ಇತ್ತು. ಆದರೆ ಧಾರ್ಮಿಕ ಮೂಲಭೂತವಾದಿತನ ಇರಲಿಲ್ಲ. "ಮನುಜ ಕುಲಂ ತಾನೊಂದೇ ವಲಂ" ಎಂದು ಹೇಳಿದ ಪಂಪ. ಮನಷ್ಯರೆಲ್ಲ ಒಂದೇ ಜಾತಿ ಎಂದು ಹೇಳಿದ. ನಂತರ ಬಂದ ಬಸವಣ್ಣ "ದಯೆಯಿಲ್ಲದ ಧರ್ಮ ಯಾವುದಯ್ಯಾ" ಎಂದರು. ಕಾರ್ಲ್‌ಮಾರ್ಕ್ಸ್ "ಧರ್ಮವು ಒಂದು ಮಾದಕ ಅಫೀಮು" ಎಂದು ಕರೆದನು. ಇವನಾರವ ಇವನಾರವ ಎಂದೆನದೇ, ಇವ ನಮ್ಮವ ಇವ ನಮ್ಮವ ಎಂದೆಣಿಸಲು ಹೇಳಿದ ಅಣ್ಣ ಬಸವಣ್ಣ. ಧರ್ಮದ ಅಮಲು ನೆತ್ತಿಗೇರಿದಾಗ ಮನುಷ್ಯ ಧರ್ಮಾಂಧನಾಗುತ್ತಾನೆ. ಇಡೀ ಜನರ ಶಾಂತಿಯನ್ನು ಕದಡುವ ವಿಷದ ಬೀಜವಾಗುತ್ತಾನೆ. ಸಮಾಜಘಾತುಕ ಶಕ್ತಿಯಾಗಿ ಬೆಳೆಯುತ್ತಾನೆ. ಇವನು ಸಮಾಜಕ್ಕೆ ಕಂಟಕಪ್ರಾಯವಾಗುತ್ತಾನೆ. ಸಕಲರನ್ನು ಪ್ರೀತಿಸುವುದೇ ಧರ್ಮ. ಧರ್ಮವು ಮೂಲಭೂತವಾದವಾಗದಂತೆ ಮನುಜರನ್ನು ಕೂಡಿಸುವ, ಸಮಾನತೆ ಮತ್ತು ಸಹಿಷ್ಣುತೆಯ ಸಂಕೇತವಾಗಬೇಕಾದ ತುರ್ತಿದೆ.

ಒಂದು ಭಾಷೆ, ಒಂದು ಪಕ್ಷ, ಒಂದು ಜಾತಿ, ಒಂದು ಧರ್ಮ, ಒಂದು ಬಣ್ಣ, ಒಂದು ಧ್ವಜ, ಒಂದು ದೇವರು, ಹೀಗೆ ಹಲವಾರು ಒಂದುಗಳು ನಮ್ಮ ಬಹುತ್ವದ ನೆಲೆಗಳನ್ನು ಮತ್ತು ಸೌಹಾರ್ದದ ಕೊಂಡಿಗಳನ್ನು ಒಂದೊಂದಾಗಿ ಕಳಚುತ್ತಿರುವ ಕೋಮುವಾದಿ ನಡೆಗಳು ಅತ್ಯಂತ ಅಪಾಯಕಾರಿ ಮಟ್ಟ ತಲುಪುತ್ತಿವೆ. ಖ್ಯಾತ ಉದ್ಯಮಿಯೊಬ್ಬರಾದ ಬಯೋಕಾನ್ ಸಂಸ್ಥಾಪಕಿ ಕಿರಣ್ ಮುಜುಂದಾರರವರು ಕರ್ನಾಟಕದ ಭಯಂಕರ ಮೌನವನ್ನು ಮುರಿದು ಮಾತಾಡಿದ್ದಾರೆ. ರಾಜ್ಯದಲ್ಲಿ ನಡೆಯುತ್ತಿರುವ ಪ್ರಸ್ತುತ ಪರಿಸ್ಥಿತಿಯನ್ನು ನೋಡಿದ ಅವರು ಸರ್ಕಾರಕ್ಕೆ "ಧರ್ಮಾಧಾರಿತ ವಿಭಜನೆಯ ಮೂಲಕ ಕರ್ನಾಟಕ ಅಪಾಯದ ಕಡೆಗೆ ಸಾಗುತ್ತಿದೆ." ಎಂದು ಎಚ್ಚರಿಕೆ ನೀಡಿದ್ದಾರೆ. "ಒಂದು ವೇಳೆ ಐಟಿಬಿಟಿ ಕ್ಷೇತ್ರಗಳಲ್ಲಿ ಕೋಮುವಾದ

ಪುಟ 10 ಕ್ಕೆ

ಹಿಂದಿ ಹೇರಿಕೆ ಬೇಡವೇ ಬೇಡ

ಪ್ರಕಾಶ್ ಕಾರಟ್

ವಿವಿಧ ಮಾರ್ಗಗಳ ಮೂಲಕ ಹಿಂದಿಯನ್ನು ಅಧಿಕೃತ ಭಾಷೆಯನ್ನಾಗಿ ಹೇರಲು ಮೋದಿ ಸರ್ಕಾರ ಪ್ರಯತ್ನಿಸುತ್ತಿದೆ. ಕೇಂದ್ರ ಗೃಹ ಸಚಿವ ಅಮಿತ್ ಷಾ ನೇತೃತ್ವದ ಅಧಿಕೃತ ಭಾಷೆ ಕುರಿತ ಸಂಸದೀಯ ಸಮಿತಿಯ ವರದಿ ಇತ್ತೀಚಿನ ಉದಾಹರಣೆಯಾಗಿದೆ. ಸಮಿತಿಯ ವರದಿಯ 11ನೇ ಸಂಪುಟವನ್ನು ರಾಷ್ಟ್ರಪತಿಯವರಿಗೆ ಸಲ್ಲಿಸಲಾಗಿದೆ.

ವರದಿಯ ಶಿಫಾರಸುಗಳಲ್ಲಿ ಒಂದು ಹೀಗಿದೆ: 'ದೇಶದ ಎಲ್ಲ ತಾಂತ್ರಿಕ ಮತ್ತು ತಾಂತ್ರಿಕೇತರ ಶಿಕ್ಷಣ ಸಂಸ್ಥೆಗಳಲ್ಲಿ ಹಿಂದಿ ಭಾಷೆಯು ಬೋಧನೆ ಮತ್ತು ಇತರ ಚಟುವಟಿಕೆಗಳ ಮಾಧ್ಯಮವಾಗಿರಬೇಕು. ಹಾಗೂ ಇಂಗ್ಲಿಷ್ ಐಚ್ಛಿಕವಾಗಿರಬೇಕು'. ಇದು ಐಐಟಿಗಳು, ಕೇಂದ್ರೀಯ ವಿವಿಗಳು ಮತ್ತು ಕೇಂದ್ರೀಯ ವಿದ್ಯಾಲಯಗಳಂಥ ಕೇಂದ್ರೀಯ ಸಂಸ್ಥೆಗಳಿಗೆ ಅನ್ವಯವಾಗುತ್ತದೆ.


ಈ ಶಿಫಾರಸು ಅನುಷ್ಠಾನಗೊಂಡರೆ, ಹಿಂದಿಯೇತರ ಹಿನ್ನೆಲೆಯ ವಿದ್ಯಾರ್ಥಿಗಳು ಈ ಸಂಸ್ಥೆಗಳ ಪ್ರವೇಶ ಪರೀಕ್ಷೆಗಾಗಿ ಹಿಂದಿಯಲ್ಲಿ ಅರ್ಹತೆ ಪಡೆದುಕೊಳ್ಳಬೇಕು ಅಲ್ಲದೆ ಹಿಂದಿಯನ್ನು ಬೋಧನಾ ಮಾಧ್ಯಮವಾಗಿ ಅಳವಡಿಸಿಕೊಳ್ಳಬೇಕಾಗುತ್ತದೆ. ಇದರಿಂದ ಹಿಂದಿ ಮಾತೃ ಭಾಷೆಯಾಗಿರದ ವಿದ್ಯಾರ್ಥಿಗಳಿಗೆ ಭಾರಿ ತಾರತಮ್ಯ ಆಗಲಿದೆ.

ಈ ಪ್ರಸ್ತಾವನೆಗೆ ಕೆಲವು ಹಿಂದಿಯೇತರ ರಾಜ್ಯ ಸರ್ಕಾರಗಳ ಬಲವಾದ ಪ್ರತಿರೋಧ ವ್ಯಕ್ತವಾದಾಗ, ಹಿಂದಿ ರಾಜ್ಯಗಳಲ್ಲಿರುವ ಕೇಂದ್ರೀಯ ಶಿಕ್ಷಣ ಸಂಸ್ಥೆಗಳಲ್ಲಿ ಹಿಂದಿ ಕಡ್ಡಾಯ ಮಾಧ್ಯಮವಾಗಿರುತ್ತದೆ. ಇತರ ಹಿಂದಿಯೇತರ ರಾಜ್ಯಗಳಲ್ಲಿ ಆಯಾ ಪ್ರಾದೇಶಿಕ ಭಾಷೆಗಳು ಕಲಿಕಾ ಮಾಧ್ಯಮವಾಗಿರುತ್ತದೆ ಎಂದು ಸರ್ಕಾರ ಸ್ಪಷ್ಟನೆ ನೀಡಿದೆ.

ಆದರೆ ಇದು ಸಮಸ್ಯೆಯನ್ನು ಬಗೆಹರಿಸುವುದಿಲ್ಲ. ಹಿಂದಿ-ಮಾತನಾಡುವ ರಾಜ್ಯಗಳಲ್ಲಿರುವ ಕೇಂದ್ರೀಯ ವಿವಿಗಳು ಅಥವಾ ಐಐಟಿಗಳು ಹಿಂದಿ ಬೋಧನಾ ಮಾಧ್ಯಮಕ್ಕೆ ಸಜ್ಜಾಗಿರುವ ವಿದ್ಯಾರ್ಥಿಗಳಿಗಷ್ಟೇ ಪ್ರವೇಶ ನೀಡುತ್ತವೆ. ಹೀಗಾಗಿ ಅಖಿಲ-ಭಾರತ ಸ್ವರೂಪವಿರುವ ಈ ಕೇಂದ್ರೀಯ ಸಂಸ್ಥೆಗಳು ಈಗ ಹಿಂದಿ ಬಲ್ಲ ವಿದ್ಯಾರ್ಥಿಗಳಿಗೆ ಮಾತ್ರ ಮುಕ್ತವಾಗಿರುತ್ತವೆ. ಹಾಗಾಗಿ, ದೆಹಲಿ ಐಐಟಿ ಅಥವಾ ಬನಾರಸ್ ಹಿಂದೂ ವಿಶ್ವವಿದ್ಯಾಲಯದಂಥ ಕೇಂದ್ರ ಸರಕಾರದ ವಿವಿ ಹಿಂದಿಯೇತರ ವಿದ್ಯಾರ್ಥಿಗಳ ಕೈಗೆ ಎಟುಕದಂತಾಗುತ್ತವೆ. ಬೋಧಕ ವರ್ಗಕ್ಕೂ ಇದೇ ಅನ್ವಯವಾಗುತ್ತದೆ.

ಹಿಂದಿಯೇತರ ರಾಜ್ಯಗಳಲ್ಲಿರುವ ಕೇಂದ್ರೀಯ ಶಿಕ್ಷಣ ಸಂಸ್ಥೆಗಳು ರಾಜ್ಯ/ಪ್ರಾದೇಶಿಕ ಭಾಷೆಗಳನ್ನು ಶಿಕ್ಷಣ ಮಾಧ್ಯಮವಾಗಿ ಅಳವಡಿಸಿಕೊಂಡರೆ ಅದರಿಂದ ಆ ರಾಜ್ಯ ಅಥವಾ ಪ್ರದೇಶದ ವಿದ್ಯಾರ್ಥಿಗಳಿಗೆ ಮಾತ್ರವೇ ಪ್ರಯೋಜನವಾಗುತ್ತದೆ. ಹೀಗಾಗಿ ಈ ಸಂಸ್ಥೆಗಳ ಅಖಿಲ ಭಾರತ ಸ್ವರೂಪ ಶೂನ್ಯವಾಗುತ್ತದೆ.

ಸಂವಿಧಾನದ 8ನೇ ಪರಿಚ್ಛೇದದಲ್ಲಿ ರಾಷ್ಟ್ರೀಯ ಭಾಷೆಗಳೆಂದು ಪಟ್ಟಿ ಮಾಡಲಾಗಿರುವ ಭಾಷೆಗಳನ್ನು ಸಮಾನವಾಗಿ ನೋಡುವಂಥ ಒಂದು ಪ್ರಜಾಸತ್ತಾತ್ಮಕ ಭಾಷಾ ನೀತಿಯ ಅಗತ್ಯವಿದೆ. ಇತರ ವಿಚಾರಗಳಲ್ಲಿ ಕೂಡ ಅಧಿಕೃತ ಭಾಷಾ ಸಮಿತಿಯ ಶಿಫಾರಸುಗಳು ಕೂಡ ಈ ಸಮಾನತೆಯ ವಿರುದ್ಧವಾಗಿವೆ. ಉದಾಹರಣೆಗೆ, ಸರಕಾರದ ಜಾಹಿರಾತು ಬಜೆಟ್‌ನ ಶೇಕಡ 50ಕ್ಕಿಂತ ಹೆಚ್ಚಿನ ಹಣವನ್ನು ಹಿಂದಿ ಭಾಷಾ ಜಾಹಿರಾತುಗಳಿಗೆ ಒದಗಿಸುವಂತೆ ಸಮಿತಿ ಶಿಫಾರಸು ಮಾಡಿದೆ.



ಒಂದು ರಾಜ್ಯದ ಮುಖ್ಯ ಭಾಷೆಯು ಉನ್ನತ ಶಿಕ್ಷಣ ಮತ್ತು ಆಡಳಿತದ ಮಾಧ್ಯಮವಾಗಬೇಕು ಎಂಬ ಬೇಡಿಕೆ ಸರಿಯಾದ ಹೆಜ್ಜೆಯಾಗಿದೆ. ಇದು ರಾಜ್ಯ-ಮಟ್ಟದ ಸಂಸ್ಥೆಗಳಿಗೆ ಅನ್ವಯವಾಗಬೇಕು. ಆದ್ದರಿಂದ, ಉತ್ತರ ಪ್ರದೇಶದಲ್ಲಿ ಹಿಂದಿ, ಕರ್ನಾಟಕದಲ್ಲಿ ಕನ್ನಡ, ತಮಿಳುನಾಡಿನಲ್ಲಿ ತಮಿಳು ... ಈ ರೀತಿಯಗಿ ಅನ್ವಯವಾಗಬೇಕು. ಆದರೆ ಕೇಂದ್ರೀಯ ಶಿಕ್ಷಣ ಸಂಸ್ಥೆಗಳಲ್ಲಿ ಹಿಂದಿಗೆ ಪ್ರಾಧಾನ್ಯ ನೀಡುವುದು ಇತರ ರಾಷ್ಟ್ರೀಯ ಭಾಷೆಗಳ ವಿರುದ್ಧದ ತಾರತಮ್ಯವಾಗುತ್ತದೆ.

ಕೇಂದ್ರ ಗೃಹ ಸಚಿವ ಅಮಿತ್ ಷಾ ನಿರಂತರವಾಗಿ 'ಒಂದು ದೇಶ-ಒಂದು ಭಾಷೆ' ಯೋಜನೆಯನ್ನು ಪ್ರತಿಪಾದಿಸುತ್ತಿದ್ದಾರೆ. 2019ರಲ್ಲಿ ಹಿಂದಿ ದಿವಸದಂದು ತಮ್ಮ ಮೊದಲ ಭಾಷಣದಲ್ಲಿ ಅವರು ಹೀಗೆ ಹೇಳಿದ್ದರು: 'ಭಾರತ ವಿವಿಧ ಭಾಷೆಗಳ ದೇಶವಾಗಿದೆ. ಪ್ರತಿಯೊಂದು ಭಾಷೆಗೆ ಅದರದೇ ಮಹತ್ವವಿದೆ. ಆದರೆ ಜಗತ್ತಿನಲ್ಲಿ ದೇಶದ ಅಸ್ಮಿತೆ ಸ್ಥಾಪಿಸಲು ಇಡೀ ದೇಶಕ್ಕೆ ಒಂದು ಭಾಷೆಯಿರುವುದು ಅತ್ಯವಶ್ಯ. ಇಡೀ ದೇಶವನ್ನು ಒಂದೇ ದಾರದಲ್ಲಿ ಪೋಣಿಸುವ ಒಂದು ಭಾಷೆಯಿದೆಯೆಂದಾದಲ್ಲಿ ಅದು ಹೆಚ್ಚು ಜನರು ಮಾತನಾಡುವ ಹಿಂದಿ ಭಾಷೆ'.

ಇದು ಆರ್‌ಎಸ್‌ಎಸ್‌ನ 'ಒಂದು ರಾಷ್ಟ್ರ, ಒಂದು ಭಾಷೆ, ಒಂದು ಸಂಸ್ಕೃತಿ' ಘೋಷಣೆಗೆ ಅನುಗುಣವಾಗಿದೆ. ಭಾರತದಂಥ ಬಹುಭಾಷಾ, ಬಹುಸಂಸ್ಕೃತಿಯ ವೈವಿಧ್ಯಮಯ ದೇಶದಲ್ಲಿ ಹಿಂದಿಯನ್ನು ಹೇರುವ ಪ್ರಯತ್ನಗಳು ಅಸಹನೆ ಮತ್ತು ವಿಭಜನೆಗೆ ದಾರಿ ಮಾಡಿಕೊಡುತ್ತವೆ.

ಅನು: ವಿಶ್ವ

ಹಿಂದಿಯ ಏಕಪಕ್ಷೀಯ ಹೇರಿಕೆ ಅಪಾಯಕಾರಿ-ಅಖಿಲ ಭಾರತ ಕಿಸಾನ್ ಸಭಾ
"ಹಿಂದಿಯೇತರ ರೈತಾಪಿ ಕುಟುಂಬಗಳ ಯುವಜನರ ಸಾಮಾಜಿಕ ಚಲನಶೀಲತೆಗೆ ಹಾನಿಕಾರಕ"

ಮೋದಿ ಆಡಳಿತ ಭಾರತದ ಭಾಷಾ ಮತ್ತು ಸಾಂಸ್ಕೃತಿಕ ವೈವಿಧ್ಯತೆಯನ್ನು ಧ್ವಂಸ ಮಾಡಿ, ಆರ್‌ಎಸ್‌ಎಸ್‌ನ ಮುದ್ದಿನ ಅಜೆಂಡಾವಾದ "ಹಿಂದಿ, ಹಿಂದೂ, ಹಿಂದೂಸ್ತಾನ್" ಮತ್ತು "ಸಾಂಸ್ಕೃತಿಕ ರಾಷ್ಟ್ರೀಯತೆ"ಯನ್ನು ಜಾರಿಗೆ ತರಹೊರಟಿದೆ. ಇದು ದೇಶವಿರೋಧಿ ಮತ್ತು ಸಂವಿಧಾನ ವಿರೋಧಿ ನಡೆ ಎಂದು ಅಖಿಲ ಭಾರತ ಕಿಸಾನ್ ಸಭಾ (ಎಐಕೆಎಸ್) ಖಂಡಿಸಿದೆ. ಭಾರತದ ರಾಷ್ಟ್ರಪತಿಗಳಿಗೆ ಸಲ್ಲಿಸಿದ ತನ್ನ 11 ನೇ ವರದಿಯಲ್ಲಿ, ಕೇಂದ್ರ ಗೃಹ ಸಚಿವ ಅಮಿತ್ ಷಾ ನೇತೃತ್ವದ ಅಧಿಕೃತ ಭಾಷೆಯ ಸಂಸದೀಯ ಸಮಿತಿಯು ಎಲ್ಲಾ ಉನ್ನತ ತಾಂತ್ರಿಕ ಮತ್ತು ತಾಂತ್ರಿಕೇತರ ಸಂಸ್ಥೆಗಳಲ್ಲಿ ಬೋಧನಾ ಮಾಧ್ಯಮವು ಕಡ್ಡಾಯವಾಗಿ ಹಿಂದಿ ಆಗಿರಬೇಕು ಎಂದು ಶಿಫಾರಸು ಮಾಡಿದೆ ಎಂಬ ಸುದ್ದಿಗೆ ಪ್ರತಿಕ್ರಿಯಿಸುತ್ತ ಅದು ಹೇಳಿಕೆ ನೀಡಿದೆ.

ಮೋದಿ ಆಡಳಿತದ ಕಾರ್ಪೊರೇಟ್ ಪರ ನೀತಿಗಳು ಈಗಾಗಲೇ ಕತ್ತು ಹಿಸುಕಿರುವ ರೈತ ಕುಟುಂಬಗಳ ಮೇಲೆ ಈ ನಡೆ ಗಂಭೀರ ಪರಿಣಾಮ ಬೀರಲಿದೆ. ದೀರ್ಘಕಾಲದ ಕೃಷಿ ಬಿಕ್ಕಟ್ಟಿನ ಕಾರಣ, ಕೃಷಿ ಕುಟುಂಬಗಳ ಯುವಕರು ಸರ್ಕಾರದ ಅನುದಾನಿತ ಶಿಕ್ಷಣ ಮತ್ತು ಕೇಂದ್ರ ಸರ್ಕಾರಿ ಉದ್ಯೋಗಗಳನ್ನು ಸಾಮಾಜಿಕ ಚಲನಶೀಲತೆಗೆ ಪ್ರಮುಖ ಸಾಧನಗಳಾಗಿ ಪರಿಗಣಿಸುತ್ತಾರೆ. ಈ ಶಿಫಾರಸುಗಳನ್ನು ಅಂಗೀಕರಿಸಿದರೆ, ಯುವ ಪೀಳಿಗೆಯ, ಮುಖ್ಯವಾಗಿ ಹಿಂದಿಯೇತರ ಯುವಜನರ ಸಾಮಾಜಿಕ ಚಲನಶೀಲತೆಯ ಸಾಧ್ಯತೆಗಳು ತೀವ್ರವಾಗಿ ಹಾನಿಗೊಳಗಾಗುತ್ತವೆ ಎಂದು ಎಐಕೆಎಸ್ ಆತಂಕ ವ್ಯಕ್ತಪಡಿಸಿದೆ.

ಇಂಡಿಯನ್ ಇನ್‌ಸ್ಟಿಟ್ಯೂಟ್ ಆಫ್ ಮ್ಯಾನೇಜ್‌ಮೆಂಟ್ (ಐಐಎಂ)ಗಳು, ಇಂಡಿಯನ್ ಇನ್‌ಸ್ಟಿಟ್ಯೂಟ್ ಆಫ್ ಟೆಕ್ನಾಲಜಿ (ಐಐಟಿಗಳು) ಗಳು ಮತ್ತು ಆಲ್ ಇಂಡಿಯಾ ಇನ್‌ಸ್ಟಿಟ್ಯೂಟ್ ಆಫ್ ಮೆಡಿಕಲ್ ಸೈನ್ಸ್ (ಎಐಐಎಂಎಸ್)ಗಳು ತಾಂತ್ರಿಕ ಸಂಸ್ಥೆಗಳ ವರ್ಗಕ್ಕೆ ಸೇರುತ್ತವೆ ಮತ್ತು ತಾಂತ್ರಿಕೇತರ ಸಂಸ್ಥೆಗಳಲ್ಲಿ ಕೇಂದ್ರೀಯ ವಿಶ್ವವಿದ್ಯಾಲಯಗಳು, ಕೇಂದ್ರೀಯ ವಿದ್ಯಾಲಯಗಳು (ಕೆವಿಗಳು) ಮತ್ತು ನವೋದಯ ವಿದ್ಯಾಲಯಗಳು ಸೇರುತ್ತವೆ. ಈ ರೀತಿ ಎಲ್ಲಾ ಪ್ರಮುಖ ಕೇಂದ್ರೀಯ ಸಂಸ್ಥೆಗಳನ್ನು ಹಿಂದಿಯೇತರ ಭಾಷಾ ರಾಷ್ಟ್ರೀಯತೆಗಳು ಪ್ರವೇಶಿಸದಂತೆ ಮಾಡುವುದರ ಜೊತೆಗೆ, ನೇಮಕಾತಿ ಪರೀಕ್ಷೆಗಳಲ್ಲಿ ಕಡ್ಡಾಯ ಇಂಗ್ಲಿಷ್ ಭಾಷೆಯ ಪ್ರಶ್ನೆ ಪತ್ರಿಕೆಗಳನ್ನು ತೆಗೆದುಹಾಕಲು ಸಮಿತಿಯು ಶಿಫಾರಸು ಮಾಡಿದೆ.

ಈ ಶಿಫಾರಸುಗಳು ಸ್ವಾತಂತ್ರ್ಯ ಹೋರಾಟದ ಪರಂಪರೆಯನ್ನು ಮತ್ತು ವಿವಿಧತೆಯಲ್ಲಿ ಏಕತೆಯನ್ನು ಪೋಷಿಸುವ ಸಾಂವಿಧಾನಿಕ ಭರವಸೆಗಳನ್ನು ನಿರಾಕರಿಸುತ್ತಿವೆ ಎಂಬುದು ತನ್ನ ದೃಢವಾದ ಅಭಿಪ್ರಾಯ ಎಂದಿರುವ ಎಐಕೆಎಸ್ ಇತರ ಭಾಷೆಗಳನ್ನು ಹಿತಗಳನ್ನು ಬಲಿಗೊಟ್ಟು ಹಿಂದಿಗೆ ಒಲವು ತೋರುವುದು ರಾಷ್ಟ್ರೀಯ ಸಮಗ್ರತೆಯ ಮೇಲಿನ ನೇರ ಆಕ್ರಮಣವಾಗಿದೆ ಎನ್ನುತ್ತ, ಫ್ಯಾಸಿಸ್ಟ್ ತೆರನ ಆರ್‌ಎಸ್‌ಎಸ್‌ನಿಂದ ಪೋಷಿಸಲ್ಪಟ್ಟ ಅಮಿತ್ ಷಾ ಭಾರತೀಯರನ್ನು ಭಾಷಾವಾರು ರೀತಿಯಲ್ಲಿ ವಿಭಜಿಸುವ ಮತ್ತು ಭಾರತದ ವಿಘಟನೆಗೆ ಕಾರಣವಾಗುವ ಈ ಭಯಾನಕ ನಡೆಯನ್ನು ಮುನ್ನಡೆಸುತ್ತಿರುವುದು ಆಶ್ಚರ್ಯದ ಸಂಗತಿಯೇನಲ್ಲ ಎಂದು ಹೇಳಿದೆ.

ಸಂಸತ್ತಿನಲ್ಲಿ ಆರೆಸ್ಸೆಸ್ ಮತ್ತು ಅದರ ಕೈವಾಡದ ಫ್ಯಾಸಿಸ್ಟ್ ತೆರನ ಹುನ್ನಾರವನ್ನು ಸೋಲಿಸಲು ದೇಶದ ಎಲ್ಲಾ ಪ್ರಜಾಸತ್ತಾತ್ಮಕ ಶಕ್ತಿಗಳು ಕೈ ಜೋಡಿಸಬೇಕು ಮತ್ತು ಒಗ್ಗಟ್ಟಿನಿಂದ ಮುಂದೆ ಬರಬೇಕು ಎಂದು ಎಐಕೆಎಸ್ ಕರೆ ನೀಡಿದೆ. ಬ್ರಿಟಿಷ್ ಸಾಮ್ರಾಜ್ಯಶಾಹಿಯ ಪ್ರಾಬಲ್ಯವನ್ನು ಕಿತ್ತೆಸೆಯುವ ಸ್ವಾತಂತ್ರ್ಯ ಹೋರಾಟದ ಮೂಲಕ ಹೊಮ್ಮಿದ ನಮ್ಮ ಬಹುರಾಷ್ಟ್ರೀಯ ದೇಶದ ಏಕತೆ ಮತ್ತು ವೈವಿಧ್ಯತೆಯನ್ನು ರಕ್ಷಿಸಲು ಇದು ಮುಖ್ಯವಾಗಿದೆ ಎಂದು ಎಐಕೆಎಸ್ ಹೇಳಿದೆ.

ಹಿಂದಿ ಹೇರಿಕೆ-ನಿರ್ಲಕ್ಷ್ಯದ ನಡೆ, ಸಹಕಾರಿ ಒಕ್ಕೂಟ ತತ್ವದ ಅವಹೇಳನ-ಪಿಣರಾಯಿ ವಿಜಯನ್

ಕೇಂದ್ರ ಸರಕಾರದ ಈ ನಡೆ ಶಿಕ್ಷಣ ಮತ್ತು ಉದ್ಯೋಗದ ವಿಷಯದಲ್ಲಿ ಬಹು ಪಾಲು ಭಾರತೀಯರಿಗೆ ಅನಾನುಕೂಲ ಉಂಟು ಮಾಡುವಂತದ್ದು ಎಂದು ಕೇರಳ ಮುಖ್ಯಮಂತ್ರಿ ಮತ್ತು ಸಿಪಿಐ(ಎಂ) ಪೊಲಿಟ್‌ಬ್ಯುರೊ ಸದಸ್ಯರಾದ ಪಿಣರಾಯಿ ವಿಜಯನ್ ಕೂಡ ಖಂಡಿಸಿದ್ದಾರೆ. "ವಿವಿಧತೆಯಲ್ಲಿ ಏಕತೆ"ಯ ಭಾರತದ ನೆಚ್ಚಿನ ಆದರ್ಶದ ಮೇಲೆ ಮಾಡಿರುವ ಪ್ರಹಾರವಿದು ಎಂದಿರುವ ಅವರು ಈ ನಿರ್ಲಕ್ಷ್ಯದ ನಡೆ ಸಹಕಾರಿ ಒಕ್ಕೂಟ ತತ್ವದ ಅವಹೇಳನವಾಗಿದ್ದು ಇದನ್ನು ಒಗ್ಗಟ್ಟಿನಿಂದ ವಿರೋಧಿಸಬೇಕು ಎಂದಿದ್ದಾರೆ.

ಭಾರತದ ಅದ್ವಿತೀಯ ಮತ್ತು ಶ್ರೀಮಂತ ಭಾಷಾ ವೈವಿಧ್ಯತೆಯ ಮೇಲೆ ಆರೆಸ್ಸೆಸ್ ನ "ಹಿಂದಿ-ಹಿಂದು-ಹಿಂದುಸ್ತಾನ' ಕಣ್ಣೋಟವನ್ನು ಹೇರುವುದನ್ನು ಒಪ್ಪಲು ಸಾಧ್ಯವಿಲ್ಲ ಎಂದು ಸಿಪಿಐ(ಎಂ) ಪ್ರಧಾನ ಕಾರ್ಯದರ್ಶಿ ಸೀತಾರಾಂ ಯೆಚುರಿ ಹೇಳಿದ್ದಾರೆ. ಸಂವಿಧಾನದ 8ನೇ ಶೆಡ್ಯೂಲಿನಲ್ಲಿ ಪಟ್ಟಿ ಮಾಡಿರುವ ಎಲ್ಲ 22 ಅಧಿಕೃತ ಭಾಷೆಗಳನ್ನು ಸಮಾನವಾಗಿ ಕಾಣಬೇಕು ಮತ್ತು ಪ್ರೋತ್ಸಾಹಿಸಬೇಕು, ಭಾರತ ಅದರ ವೈವಿಧ್ಯತೆಯ ಒಂದು ಆಚರಣೆ ಎಂದು ಅವರು ಈ ಕುರಿತು ಟ್ವೀಟ್‌ನಲ್ಲಿ ಹೇಳಿದ್ದಾರೆ.



ಓಲಾ, ಉಬರ್ ಆಪ್ ಆಧಾರಿತ ಆಟೋ ಸೇವೆ ನಿಷೇಧಿಸಿದ ಸಾರಿಗೆ ಇಲಾಖೆ

ಹೈಕೋರ್ಟ್‌ ನಿಂದ ತಡೆಯಾಜ್ಞೆ ತರುವಲ್ಲಿ ಯಶಸ್ವಿಯಾದ ಕಂಪನಿಗಳು

ಸಿ. ಸಿದ್ಧಯ್ಯ

ಕಳೆದ ವಾರ ಮಾಧ್ಯಮಗಳಲ್ಲಿ ಮತ್ತು ಸಾಮಾಜಿಕ ಜಾಲ ತಾಣಗಳಲ್ಲಿ ಆಟೋ ಚಾಲಕರದ್ದೇ ಸುದ್ದಿ. 'ಕರ್ನಾಟಕ ರಾಜ್ಯ ಬೇಡಿಕೆ ಆಧಾರಿತ ಸಾರಿಗೆ ತಂತ್ರಜ್ಞಾನ ನಿಯಮ' 2016ರ ಪ್ರಕಾರ ಆಟೊ ಸೇವೆ ಒದಗಿಸಲು ಓಲಾ, ಉಬರ್ ಮತ್ತು ರ್‍ಯಾಪಿಡೊ ಕಂಪನಿಗಳಿಗೆ ಅವಕಾಶ ಇಲ್ಲ ಎಂಬ ಕಾರಣ ನೀಡಿ ಕರ್ನಾಟಕ ರಾಜ್ಯದ ಸಾರಿಗೆ ಇಲಾಖೆ ಈ ಕಂಪನಿಗಳ ಆ್ಯಪ್ ಆಧಾರಿತ ಆಟೋ ಸೇವೆ ನಿಷೇಧ ಮಾಡಿತು. ಸಾರಿಗೆ ಇಲಾಖೆ ನಿಗದಿಪಡಿಸಿದ ಪ್ರಯಾಣ ದರದ ಎರಡು ಮೂರು ಪಟ್ಟು ಹೆಚ್ಚಿನ ದರ ನಿಗದಿ ಮಾಡಿ ಪ್ರಯಾಣಿಕರನ್ನು ಸುಲಿಗೆ ಮಾಡುತ್ತಿದ್ದಾರೆ ಎಂಬುದು ಇವರ ಮೇಲಿನ ಮತ್ತೊಂದು ಆರೋಪ.

ಇದನ್ನೇ ದೃಶ್ಯ ಮಾಧ್ಯಮದವರು 'ಆಟೊ ಚಾಲಕರು ಪ್ರಯಾಣಿಕರನ್ನು ಸುಲಿಗೆ ಮಾಡುತ್ತಿದ್ದಾರೆ, ಆಟೋ ಚಾಲಕರು ಪ್ರಯಾಣಿಕರನ್ನು ದರೋಡೆ ಮಾಡುತ್ತಿದ್ದಾರೆ, ಆ್ಯಪ್ ಆಧಾರಿತ ಆಟೋ ಸೇವೆಯನ್ನು ನಿಷೇಧ ಮಾಡುವ ಮೂಲಕ ಸಾರಿಗೆ ಅಧಿಕಾರಿಗಳು ಇದಕ್ಕೆ ಕಡಿವಾಣ ಹಾಕಿದ್ದಾರೆ' ಎಂದೆಲ್ಲಾ ವರದಿ ಮಾಡತೊಡಗಿದವು.

ಓಲಾ, ಉಬರ್, ರ್‍ಯಾಪಿಡೊ ಆಟೋ ಸೇವೆಗೆ ನಿಷೇಧ ಹೇರಿದ ನಂತರವೂ ಈ ಕಂಪನಿಗಳು ತಮ್ಮ ಆಟೋ ಸೇವೆಯನ್ನು ಎಂದಿನಂತೆ ಮುಂದುವರಿಸಿದವು. ಆ್ಯಪ್ ಚಾಲನೆಯಲ್ಲಿದ್ದ ಕಾರಣ ಆಟೋ ಚಾಲಕರೂ ಆಫ್ ಆಧಾರಿತ ಸೇವೆ ಮಾಡತೊಡಗಿದರು. ಮಾಧ್ಯಮಗಳು ಇದರ ಕುರಿತು ನಿರಂತರವಾಗಿ ಸುದ್ದಿ ಮಾಡಿದವು. 'ನಿಷೇಧಕ್ಕೂ ಬೆಲೆ ಕೊಡದ ಆಟೋ ಚಾಲಕರಿಂದ ಪ್ರಯಾಣಿಕರ ಸುಲಿಗೆ ಮುಂದುವರಿದಿದೆ' ಎಂದೆಲ್ಲ ವರದಿ ಮಾಡಿದವು. ಸಾರಿಗೆ ಇಲಾಖೆಯ ನಿಷೇಧಕ್ಕೆ ಬೆಲೆ ಕೊಡದ ಕಂಪನಿಗಳ ವಿರುದ್ಧ ಕ್ರಮ ಕೈಗೊಳ್ಳಲು ಮುಂದಾಗದ ಅಧಿಕಾರಿಗಳು ಬಡ ಚಾಲಕರ ಮೇಲೆ ಕ್ರಮ ಕೈಗೊಳ್ಳಲು ಮುಂದಾದರು.

ಅಕ್ಟೋಬರ್ ಹತ್ತರಂದು ಬೆಂಗಳೂರಿನ ಹಲವು ಪ್ರದೇಶಗಳಲ್ಲಿ ಕಾರ್ಯಾಚರಣೆಗೆ ಇಳಿದ ಸಾರಿಗೆ ಮತ್ತು ಪೊಲೀಸ್ ಇಲಾಖೆಗಳ ಸಿಬ್ಬಂದಿಗಳು, ಆ್ಯಪ್ ಮೂಲಕ ಗೊತ್ತುಪಡಿಸಿದ ಪ್ರಯಾಣಿಕರನ್ನು ಕರೆದೊಯ್ಯುತ್ತಿದ್ದ ಚಾಲಕರಿಗೆ ಒಂದರಿಂದ ಐದು ಸಾವಿರ ರೂಪಾಯಿವರೆಗೆ ದಂಡ ವಿಧಿಸಿದರು. ಕೆಲವೆಡೆ ತಾವೇ ಪ್ರಯಾಣಿಕರಂತೆ ಆ್ಯಪ್ ಮೂಲಕ ಆಟೋ ಗೊತ್ತುಪಡಿಸಿ, ಆಟೋಗೆ ಹತ್ತಿದ ನಂತರ ವಶಕ್ಕೆ ಪಡೆದ ಆರೋಪಗಳೂ ಕೇಳಿಬಂದವು. ದಂಡ ಕಟ್ಟಲು ಆಗದವರಿಂದ ಆಟೋ ವಶಕ್ಕೆ ಪಡೆದರು. ಈ ಸುದ್ದಿ ಸಾಮಾಜಿಕ ಜಾಲತಾಣದ ಮೂಲಕ ಎಲ್ಲೆಡೆ ಹರಡಿತು. ಚಾಲಕರು ಸಿಟ್ಟಿಗೆದ್ದು ಕೆಲವು ಸ್ಥಳಗಳಲ್ಲಿ ಪ್ರತಿಭಟನೆಗೆ ಇಳಿದರು. ಅನಧಿಕೃತ ಆ್ಯಪ್ ಸೇವೆ ಒದಗಿಸುತ್ತಿರುವ ಕಂಪನಿಗಳ ವಿರುದ್ಧ ಕ್ರಮ ಕೈಗೊಳ್ಳದೆ ಬಡ ಆಟೋ ಚಾಲಕರ ಮೇಲೆ ಕ್ರಮ ಕೈಗೊಂಡು ಅಧಿಕ ಪ್ರಮಾಣದ ದಂಡ ವಿಧಿಸುವ ಸಾರಿಗೆ ಅಧಿಕಾರಿಗಳು ಮತ್ತು ಪೋಲೀಸರ ವಿರುದ್ಧ ಆಕ್ರೋಶ ವ್ಯಕ್ತಪಡಿಸಿದರು. "ಈ ಆ್ಯಪ್ ಗಳನ್ನು ತೆಗೆದು ಹಾಕಿ. ಈ ಕಂಪನಿಗಳನ್ನು ನಿಷೇಧ ಮಾಡಿ. ಈ ಕಂಪನಿಗಳು ಆಟೋ ಚಾಲಕರನ್ನು ಮತ್ತು ಪ್ರಯಾಣಿಕರನ್ನು ವಂಚಿಸುತ್ತಿವೆ" ಎಂಬ ಕೂಗು ಚಾಲಕರಿಂದ ಕೇಳಿಬಂತು.





ಇದು ವಿಕೋಪಕ್ಕೆ ತಿರುಗುವುದನ್ನು ಅರಿತ ಸಾರಿಗೆ ಅಧಿಕಾರಿಗಳು ಮರುದಿನ ಓಲಾ, ಉಬರ್ ಮತ್ತು ರ್‍ಯಾಪಿಡೊ ಕಂಪನಿಗಳ ಅಧಿಕಾರಿಗಳ ಜೊತೆ ಸಭೆ ನಡೆಸಿದರು. ಸಭೆಯ ನಂತರ ಸುದ್ದಿಗೋಷ್ಠಿ ನಡೆಸಿದ ಸಾರಿಗೆ ಆಯುಕ್ತ ಟಿಎಚ್‌ಎಂ ಕುಮಾರ್ 'ಆ್ಯಪ್ ಆಧಾರಿತ ಆಟೋ ಸೇವೆಯನ್ನು ನಾಳೆಯಿಂದ ಸ್ಥಗಿತಗೊಳಿಸಲಾಗಿದೆ. ಆಟೋ ಸೇವೆಯನ್ನು ಆ್ಯಪ್‌ನಿಂದ ತೆಗೆಯಲು ಈ ಕಂಪನಿಗಳಿಗೆ ಸೂಚನೆ ನೀಡಿದ್ದೇವೆ. ತೆಗೆಯದಿದ್ದರೆ ಸೈಬರ್ ಕ್ರೈಂ ಠಾಣೆಗೆ ದೂರು ನೀಡಿ ಈ ಆ್ಯಪ್‌ಗಳಲ್ಲಿ ಆಟೊರಿಕ್ಷಾ ಸೇವೆ ಸ್ಥಗಿತಗೊಳಿಸಲಾಗುವುದು' ಎಂದು ಹೇಳಿದರು.

'ಆಟೊ ಸೇವೆ ಅನಧಿಕೃತ ಆಗಿರುವುದರಿಂದ ಆಟೊ ಚಾಲಕರು ಮತ್ತು ಪ್ರಯಾಣಿಕರು ಆ್ಯಪ್‌ನಲ್ಲಿ ಈ ಸೇವೆ ಬಳಕೆ ಮಾಡಬಾರದು. ಬಳಕೆ ಮಾಡಿ ತೊಂದರೆ ಅನುಭವಿಸಿದರೆ ಅದಕ್ಕೆ ಇಲಾಖೆ ಜವಾಬ್ದಾರಿ ಆಗುವುದಿಲ್ಲ ಎಂಬ ಪ್ರಕಟಣೆಯನ್ನೂ ಹೊರಡಿಸಲಾಗುವುದು. ಅನಧಿಕೃತವಾಗಿ ಆ್ಯಪ್‌ಗಳಲ್ಲಿ ಆಟೊ ಸೇವೆ ಬಳಕೆ ಮಾಡಲು ಅವಕಾಶ ನೀಡಿದರೆ ಪ್ರತಿ ಆಟೊರಿಕ್ಷಾಕ್ಕೆ ತಲಾ ರೂ.5 ಸಾವಿರದಂತೆ ದಂಡ ವಿಧಿಸಲಾಗುವುದು. ಆದರೆ, ಚಾಲಕರಿಗೆ ದಂಡ ವಿಧಿಸುವುದಿಲ್ಲ, ಆ್ಯಪ್ ಮುನ್ನಡೆಸುವ ಅಗ್ರಿಗೇಟರ್ ಕಂಪನಿಗಳಿಗೆ ದಂಡ ಬೀಳಲಿದೆ' ಎಂದು ಹೇಳಿದರು.

ಅನಧಿಕೃತ ವ್ಯವಹಾರ ನಡೆಸುತ್ತಿರುವ ವಿದೇಶಿ ಬಂಡವಾಳ ಹೊಂದಿರುವ ಈ ಅಗ್ರಿಗೇಟರ್ ಕಂಪನಿಗಳ ವಿರುದ್ಧ ನಿರ್ದಾಕ್ಷಿಣ್ಯ ಕಾನೂನು ಕ್ರಮಕ್ಕೆ ಸಾರಿಗೆ ಇಲಾಖೆ ಹಿಂದೇಟು ಹಾಕಿರುವುದನ್ನು ನೋಡಿದರೆ ಇಲ್ಲಿ ಅಧಿಕಾರಿಗಳು ರಾಜಕೀಯ ಒತ್ತಡಕ್ಕೆ ಮಣಿದಿರುವುದು ಸ್ಪಷ್ಟವಾಗಿ ಕಾಣುತ್ತಿದೆ.

ಸಾರಿಗೆ ಇಲಾಖೆಯಲ್ಲಿ ಮಂಗಳವಾರ ಈ ಮೂರು ಕಂಪನಿಗಳ ಅಧಿಕಾರಿಗಳ ಜೊತೆ ನಡೆದ ಸಭೆಯಲ್ಲಿಯೂ ಕಂಪನಿಗಳ ಪ್ರತಿನಿಧಿಗಳಿಗೆ ಕಠಿಣ ಎಚ್ಚರಿಕೆ ನೀಡದೆ, ಆಟೊ ಸೇವೆ ಒದಗಿಸುವ ಸಂಬಂಧ ಕಂಪನಿಗಳು ಅರ್ಜಿ ನೀಡಿದರೆ ಸರ್ಕಾರಕ್ಕೆ ರವಾನೆ ಮಾಡಲಾಗುವುದು ಎಂದು ಆಯುಕ್ತರು ಹೇಳಿದ್ದಾರೆ ಎಂದು ತಿಳಿದುಬಂದಿದೆ. ಆಟೊರಿಕ್ಷಾಗಳಿಗೆ ಜಿಲ್ಲಾಡಳಿತ ನಿಗದಿ ಮಾಡಿರುವ ದರದ ಜತೆಗೆ ಜಿಎಸ್‌ಟಿ ಮೊತ್ತ ಸೇರಿಸಿ ಸೇವೆ ಮುಂದುವರಿಸಲು ಅವಕಾಶ ನೀಡುವ ಬಗ್ಗೆ ಚರ್ಚೆಯೂ ಅಲ್ಲಿ ನಡೆದವು ಎನ್ನಲಾಗಿದೆ.

ಈ ಬೆಳವಣಿಗಳು ಅಧಿಕಾರಿಗಳ ಮೇಲಿರುವ ರಾಜಕೀಯ ಒತ್ತಡದ ಅನುಮಾನ ಹುಟ್ಟಿಸಿದವು. ವಿದೇಶಿ ಬಂಡವಾಳ ಹೊಂದಿರುವ ಈ ಕಂಪನಿಗಳಿಗೆ ಅನುಕೂಲವಾಗುವಂತೆ ನಿಯಮಗಳನ್ನು ತಿದ್ದುಪಡಿ ಮಾಡಿ, ಇವುಗಳ ಇಂತಹ ಅನಧಿಕೃತ ವ್ಯವಹಾರಗಳನ್ನು 'ಅಧಿಕೃತ' ಮಾಡುವುದಂತೂ ಖಂಡಿತ ಎಂಬ ಅನುಮಾನ ಇದ್ದೇ ಇತ್ತು. ಆಟೋ ಸೇವೆ ನಿಷೇಧಿಸಿದ ಸಾರಿಗೆ ಇಲಾಖೆಯ ಕ್ರಮವನ್ನು ಪ್ರಶ್ನಿಸಿ ಕಂಪನಿಗಳು ಹೈಕೋರ್ಟ್ ಮೆಟ್ಟಿಲು ಹತ್ತಿ ತಡೆಯಾಜ್ಞೆ ತರುವಲ್ಲಿ ಯಶಸ್ವಿಯಾಗಿವೆ.

ಓಲಾ ಉಬರ್ ಆಟೋ ಸೇವೆ ಒದಗಿಸದಂತೆ ಆದೇಶ ಮಾಡಿದ್ದ ಸಾರಿಗೆ ಇಲಾಖೆಯ ಆದೇಶಕ್ಕೆ ಕರ್ನಾಟಕ ಹೈಕೋರ್ಟ್ ಮಧ್ಯಂತರ ತಡೆ ವಿಧಿಸಿದೆ. ಸರ್ಕಾರ ಯಾವುದೇ ಬಲವಂತದ ಕ್ರಮಕೈಗೊಳ್ಳುವಂತೆ ಇಲ್ಲ. ಓಲಾ, ಉಬರ್ ಕಂಪನಿಗಳು ಅನುಕೂಲಕರ ದರವನ್ನು ವಿಧಿಸಬೇಕು ಎಂದು ಆದೇಶಿಸಿರುವ ಕರ್ನಾಟಕ ಹೈಕೋರ್ಟ್– ಪರವಾನಿಗೆ ಕಾಲಾವಕಾಶ ವಿಸ್ತರಿಸುವಂತೆ ಆದೇಶ ನೀಡಿದೆ. 2021ರ ಸಾರಿಗೆ ಇಲಾಖೆ ನಿಗದಿ ಪಡಿಸಿದ ದರವನ್ನು ಪಾಲಿಸಬೇಕು. ಹೆಚ್ಚುವರಿ ಸರ್ವಿಸ್ ಚಾರ್ಜ್ ಬಗ್ಗೆ ನ್ಯಾಯಾಲಯಕ್ಕೆ ತಿಳಿಸಬೇಕು ಎಂದಿರುವ ನ್ಯಾಯಾಲಯ 10 ರಿಂದ 15 ದಿನದ ಒಳಗೆ ವರದಿ ಸಲ್ಲಿಸುವಂತೆ ಸೂಚನೆ ನೀಡಿದೆ. ಈ ಪ್ರಕರಣಕ್ಕೆ ಸಂಬಂಧಿಸಿದ ವಿಚಾರಣೆಯನ್ನು ನವೆಂಬರ್ 7ಕ್ಕೆ ಮುಂದೂಡಿಕೆ ಮಾಡಿದೆ.

ಆಟೋ ಸೇವೆಗೆ ಓಲಾ:

ಪ್ರಾರಂಭದಲ್ಲಿ ಟ್ಯಾಕ್ಸಿ ಸೇವೆ ಒದಗಿಸುತ್ತಿದ್ದ ಓಲಾ ಕಂಪನಿ 2015ರಲ್ಲಿ ಆಟೋ ಸೇವೆಗೂ ಮುಂದಾಯಿತು. ಆಟೋ ಚಾಲಕರನ್ನು ತನ್ನತ್ತ ಸೆಳೆಯುವ ಪ್ರಯತ್ನವಾಗಿ ಮೀಟರ್ ದರದ ಮೇಲೆ 10+10 ರೂಪಾಯಿ ಕೊಡಲು ಮುಂದಾಯ್ತು. ಆಟೋ ಸೇವೆ ಪಡೆಯುವ ಪ್ರಯಾಣಿಕರು ಮೀಟರ್ ದರಕ್ಕೆ 10 ರೂ. ಹೆಚ್ಚು ಕೊಡಬೇಕು. ಪ್ರತಿ ಟ್ರಿಪ್ ಗೆ ಚಾಲಕರಿಗೆ ಓಲಾ ಕಂಪನಿ 10 ರೂ. ಪ್ರೋತ್ಸಾಹಧನ ಕೊಡುತ್ತಿತ್ತು. ತನ್ನ ಕಂಪನಿ ಜೊತೆ ಕೈಜೋಡಿಸುವ ಆಟೋಚಾಲಕರಿಗೆ 10 ಸಾವಿರ ಬೆಲೆಬಾಳುವ ಮೊಬೈಲ್ ಉಚಿತವಾಗಿ ಕೊಟ್ಟಿತು. ಪ್ರಯಾಣಿಕರ ಸಂಪರ್ಕ ಮಾಡಿಕೊಟ್ಟಿದ್ದಕ್ಕೆ ಕಂಪನಿ ಚಾಲಕರಿಂದ ಯಾವುದೇ ಕಮೀಷನ್ ಪಡೆಯುತ್ತಿರಲಿಲ್ಲ. ಪ್ರಯಾಣಿಕರಿಂದಲೂ ಕಮೀಷನ್ ಪಡೆಯುತ್ತಿರಲಿಲ್ಲ.

ಲಾಭವಿಲ್ಲದೇ, ತನ್ನದೇ ಹಣಕೊಟ್ಟು ಈ ಕಂಪನಿ ಸೇವೆ ಮಾಡುವುದಾದರೂ ಏಕೆ ಎಂಬುದರ ಕುರಿತು ಆಟೋ ಚಾಲಕರು ಚಿಂತಿಸಲಿಲ್ಲ. ತಮಗೆ ಸುಲಭವಾಗಿ ಬಾಡಿಗೆ





ಸಿಗುತ್ತದೆ, ಜೊತೆಗೆ ಹತ್ತು ರೂ. ಹೆಚ್ಚಿಗೆ ಹಣ ಸಿಗುತ್ತದೆ, ಅಷ್ಟೇ ಸಾಕು ಎಂಬ ಮನಸ್ಥಿತಿ ಅವರದಾಗಿತ್ತು.

ಓಲಾ ಕಂಪನಿಯ ಉದ್ದೇಶವಿದ್ದದ್ದು ಆಟೋರಿಕ್ಷಾ ಪ್ರಯಾಣಿಕರನ್ನು ತನ್ನ ಟ್ಯಾಕ್ಸಿಗಳತ್ತ ಸೆಳೆಯುವುದಾಗಿತ್ತು. ನಂತರ ನಿಧಾನವಾಗಿ ಆಟೋ ಸೇವಾ ವಲಯದಲ್ಲೂ ತನ್ನ ವ್ಯವಹಾರ ವಿಸ್ತರಿಸುವ ಗುರಿ ಹೊಂದಿತ್ತು. ಅಂದಿನ ಆಟೋ ಪ್ರಯಾಣದರ ಕಿ.ಮೀ. 13ರೂ. ಇತ್ತು. ಜೊತೆಗೆ ಹೆಚ್ಚುವರಿಯಾಗಿ ಪ್ರಯಾಣಿಕರು 10 ರೂ. ಕೊಡಬೇಕು. ಮಿನಿ ಟ್ಯಾಕ್ಸಿಗೆ ಅಂದು ಕಿ.ಮೀ.ಗೆ 10 ರೂ. ಮಾತ್ರ ಇತ್ತು. ನಾಲ್ಕು ಕಿಮೀ ಗಿಂತ ಹೆಚ್ಚು ದೂರದ ಪ್ರಯಾಣಕ್ಕೆ ಆಟೋಗಿಂತ ಟ್ಯಾಕ್ಸಿ ಪ್ರಯಾಣದರ ಕಡಿಮೆ ಇತ್ತು. ಮತ್ತು ಹವಾನಿಯಂತ್ರಿತ ಟ್ಯಾಕ್ಸಿಯಲ್ಲಿ ದೂಳು, ಹೊಗೆ ಇಲ್ಲದೆ ಪ್ರಯಾಣ ಮಾಡಬಹುದು. ಆಫ್ ಮೂಲಕ ಆಟೋ ಗೊತ್ತುಪಡಿಸಲು ಮುಂದಾದಾಗ ಕಂಪನಿ ಈ ಮಾಹಿತಿಯನ್ನು ತಿಳಿಸುತ್ತದೆ. ಟ್ಯಾಕ್ಸಿ ಮತ್ತು ಆಟೋ ಪ್ರಯಾಣ ದರ ಎಷ್ಟೆಂಬ ಮಾಹಿತಿಯನ್ನೂ ಗ್ರಾಹಕರಿಗೆ ತಿಳಿಸುತ್ತದೆ. ಮತ್ತು ಟ್ಯಾಕ್ಸಿ ಗ್ರಾಹಕರಿಗೆ ತಾನು ನೀಡುವ ರಿಯಾಯಿತಿ ಬಗ್ಗೆ ಓಲಾ ತನ್ನ ಎಲ್ಲಾ ಗ್ರಾಹಕರಿಗೆ ಸಂದೇಶ ಕಳಿಸುವ ಮೂಲಕ ಗ್ರಾಹಕರನ್ನು ತನ್ನೆಡೆಗೆ ಸೆಳೆಯುವ ಪ್ರಯತ್ನ ಮಾಡುತ್ತಲೇ ಇರುತ್ತದೆ. ಕಂಪನಿಯ ತಂತ್ರ ಅರಿಯದ ಆಟೋಚಾಲಕರು ತಮಗರಿವಿಲ್ಲದೆ, ತಮ್ಮ ಒಂದಷ್ಟು ಗ್ರಾಹಕರನ್ನು ಟ್ಯಾಕ್ಸಿ ಗ್ರಾಹಕರನ್ನಾಗಿ ಪರಿವರ್ತಿಸಿದರು. ಓಲಾ ಕಂಪನಿ ಕೊಡುವ 10 ರೂಗೆ, ಅದು ಕೊಡುವ ಮೊಬೈಲ್ ಗೆ ತಮ್ಮ ದಿನನಿತ್ಯದ ಗ್ರಾಹಕರನ್ನೇ ಕಳೆದು ಕೊಂಡ ಉದಾಹರಣೆಗಳಿವೆ.

ಆಟೋ ಸೇವೆಗೆ ಯಾರ್‍ಪಿಡೋ ಪ್ರವೇಶ:

ಓಲಾ ನಂತರ ಉಬರ್ ಕಂಪನಿ ಆಟೋ ಸೇವೆಗೆ ಮುಂದಾಗುತ್ತದೆ. ಆಟೋ ಸೇವಾ ವಲಯದಲ್ಲಿ ಈ ಎರಡು ಕಂಪನಿಗಳ ನಡುವಷ್ಟೇ ಪೈಪೋಟಿ ಇರುತ್ತದೆ. ನಂತರ ಯಾರ್‍ಪಿಡೊ ಪ್ರವೇಶ ಮಾಡುತ್ತದೆ.

2015ರಲ್ಲಿ ಸ್ಥಾಪನೆಯಾದ ರ್‍ಯಾಪಿಡೋ ಕಂಪನಿ ಇಂದು ಎರಡೂವರೆ ಸಾವಿರ ಕೋಟಿ ರೂಪಾಯಿಗಳ ಬಂಡವಾಳ ಹೊಂದಿದೆ. ಇದು ಭಾರತದ ನೂರಕ್ಕೂ ಹೆಚ್ಚು ನಗರ, ಪಟ್ಟಣಗಳಲ್ಲಿ ಕಾರ್ಯಾಚರಣೆ ನಡೆಸುತ್ತಿದೆ. ಟಿವಿಎಸ್ ಮೋಟಾರ್ ಕಾರ್ಪೋರೇಷನ್, ನೆದರ್ ಲ್ಯಾಂಡ್ ದೇಶದ ಸೆಲ್ ವೆಂಚರ್ಸ್, ನೆಕ್ಸಸ್ ವೆಂಚರ್ಸ್, ಸ್ವಿಗ್ಗಿ, ಹೀರೋ ಮೋಟೊ ಕಾರ್ಲ್ ನ ಪವನ್ ಮುಂಜಾಲ್, ಗೂಗಲ್ ಇಂಡಿಯಾ ಮುಖ್ಯಸ್ಥ ರಾಜನ್ ಆನಂದನ್ ಈ ಕಂಪನಿಯ ಪ್ರಮುಖ ಹೂಡಿಕೆದಾರರು.

ರ್‍ಯಾಪಿಡೊ ಆಟೋ ಪ್ರಯಾಣಿಕರನ್ನು ಮತ್ತು ಚಾಲಕರನ್ನು ತನ್ನತ್ತ ಸೆಳೆಯುವ ಪ್ರಯತ್ನ ಮಾಡುತ್ತದೆ. ಇವುಗಳಲ್ಲಿ ಗ್ರಾಹಕರಿಗೆ ಮೊದಲ ಮೂರು ಪ್ರಯಾಣ ಉಚಿತ ಎಂಬುದು ಒಂದು. ಆಟೋ ಚಾಲಕರಿಗೆ ಕನಿಷ್ಠ ದರ 60 ರೂ ಕೊಡಲು ಮುಂದಾಗುತ್ತದೆ. ನಿಧಾನವಾಗಿ ತನ್ನ ಗ್ರಾಹಕರಿಂದಲೂ ಹೆಚ್ಚಿನ ದರ ವಸೂಲಿ ಮಾಡಲು ಮುಂದಾಗುತ್ತದೆ. ಟ್ಯಾಕ್ಸಿ ಪ್ರಯಾಣದರ ಏರಿಕೆ ಆಗುತ್ತಿದ್ದಂತೆ ಆಟೋ ಪ್ರಯಾಣದರವನ್ನೂ ಏರಿಕೆ ಮಾಡುತ್ತಾ ಹೋಗುತ್ತಾರೆ. ಹೆಚ್ಚಿನ ಆಟೋ ಚಾಲಕರು ಲಾಭ ಇದ್ದ ಕಡೆ ಸೇರಿಕೊಳ್ಳುತ್ತಾರೆ. ಯಾರ್‍ಪಿಡೊ ಕಂಪನಿಗೆ ಪೈಪೋಟಿ ನೀಡಲು ಓಲಾ ಮತ್ತು ಉಬರ್ ಮುಂದಾಗುತ್ತವೆ. ಈ ಪೈಪೋಟಿ ತೀವ್ರವಾಗಿ ಆಟೋ ಚಾಲಕರಿಗೆ ಆಕರ್ಷಕ ಕೊಡುಗೆ ಕೊಡಲು ಕಂಪನಿಗಳು ಮುಂದಾಗುತ್ತವೆ. ದಿನದ 24 ಗಂಟೆ ಅವಧಿಯಲ್ಲಿ ಕನಿಷ್ಠ 10 ಟ್ರಿಪ್ ಮಾಡಿದರೆ 300 ರೂ ಪ್ರೋತ್ಸಾಹಧನ, 15 ಟ್ರಿಪ್, 20 ಟ್ರಿಪ್ ಮಾಡಿದರೆ ಮತ್ತಷ್ಟು ಹೆಚ್ಚಿನ ಪ್ರೋತ್ಸಾಹಧನ ನೀಡಲು ಮುಂದಾಗುತ್ತವೆ.

ಇಷ್ಟೆಲ್ಲದರ ನಡುವೆ ಪ್ರಯಾಣ ದರವನ್ನು ವಿಪರೀತವಾಗಿ ಏರಿಕೆ ಮಾಡುತ್ತಾರೆ. ಸಾರಿಗೆ ಇಲಾಖೆ ಮೊದಲ ಎರಡು ಕಿಮೀ ದೂರಕ್ಕೆ 30 ರೂ ಕನಿಷ್ಠ ದರ, ನಂತರದ ಪ್ರತಿ ಕಿಮೀ ಗೆ 15 ರೂ ನಿಗದಿ ಮಾಡಿದೆ. ಇದೂ ಸಹ ಚಾಲಕರು ಕಳೆದ ವರ್ಷ ಹೋರಾಟ ಮಾಡಿ ಪಡೆದ ದರ. ಈ ಕಂಪನಿಗಳು ಈ ನಿಯಮ ಉಲ್ಲಂಘಿಸಿ



ಮನಬಂದಂತೆ ದರ ನಿಗದಿ ಮಾಡಿ ಪ್ರಯಾಣಿಕರನ್ನು ಸುಲಿಗೆ ಮಾಡತೊಡಗಿದವು. ನೂರು ರೂಪಾಯಿ ಕನಿಷ್ಠ ದರ ವಸೂಲಿ ಮಾಡಿದ ಆರೋಪಗಳೂ ಇವೆ. 2 ಕಿಮೀ ವರೆಗಿನ ಕನಿಷ್ಠ ದರದಲ್ಲಿ ಚಾಲಕರ ಪಾಲು 60 ರೂಪಾಯಿ. 'ದೂರದ ಪ್ರಯಾಣದಲ್ಲಿ ಪ್ರಯಾಣಿಕರಿಂದ ಹೆಚ್ಚಿನ ದರ ಪಡೆದು, ನಮಗೆ ಕಡಿಮೆ ಹಣ ಕೊಡುತ್ತಾರೆ, ನಾವೇ ಹೆಚ್ಚಿನ ಹಣ ವಸೂಲು ಮಾಡುತ್ತಿದ್ದೇವೆ ಎಂಬಂತೆ ಗ್ರಾಹಕರು ಮಾತನಾಡುತ್ತಾರೆ' ಎಂಬುದು ಚಾಲಕರ ಆರೋಪ. ಕಂಪನಿಯವರು ಚಾಲಕರಿಂದ ದಿನವೊಂದಕ್ಕೆ 20 ರೂಗಳಂತೆ ತಿಂಗಳಿಗೆ 600 ರೂ ಶುಲ್ಕ ಪಡೆಯುತ್ತಾರೆ. ಶೇಕಡಾ 7 ರಷ್ಟು ತೆರಿಗೆ ಬಿಟ್ಟರೆ ಈ ಹಣದ ಬಹುಪಾಲು ಕಂಪನಿಗಳ ಪಾಲಾಗುತ್ತಿದೆ. ಇದು ಸಾರ್ವಜನಿಕರ ಆಕ್ರೋಶಕ್ಕೆ ಕಾರಣವಾಗಿದೆ.

ಸರ್ಕಾರವೇ ಆಫ್ ಆಧಾರಿತ ಸೇವೆ ನಡೆಸಬೇಕು, ಈ ಕಂಪನಿಗಳ ಆಫ್ ಗಳನ್ನು ಮುಚ್ಚಬೇಕು ಎಂಬುದು ಚಾಲಕರ ಒತ್ತಾಯಿಸುತ್ತಿದ್ದಾರೆ. ಸಿಐಟಿಯು ಸಂಯೋಜಿತ ಆಟೋರಿಕ್ಷಾ ಚಾಲಕರ ಸಂಘದ ನಾಯಕರೂ ಇದನ್ನೇ ಹೇಳುತ್ತಿದ್ದಾರೆ. 'ಕೇರಳ ರಾಜ್ಯದಲ್ಲಿ ಅಲ್ಲಿನ ಸಾರಿಗೆ ಇಲಾಖೆಯೇ ಆಫ್ ಆಧಾರಿತ ಟ್ಯಾಕ್ಸಿ ಮತ್ತು ಆಟೋ ಸೇವೆ ಮಾಡುತ್ತಿದೆ' ಎನ್ನುತ್ತಾರೆ.

ಆದರೆ, ಕೇಂದ್ರ ಸರಕಾರದ ಜಾಗತೀಕರಣ ನೀತಿಗಳ ಭಾಗವಾಗಿ, ವಿದೇಶಿ ನೇರ ಬಂಡವಾಳ ಹೂಡಿಕೆಗೆ ಮುಕ್ತ ಅವಕಾಶ ಕೊಟ್ಟಿರುವ ಕೇಂದ್ರ ಸರ್ಕಾರದ ಆಹ್ವಾನದಂತೆ ಬಂಡವಾಳ ಹೂಡಿಕೆ ಮಾಡಿರುವ, ವಿದೇಶಿ ಬಂಡವಾಳ ಹೊಂದಿರುವ ಈ ಕಂಪನಿಗಳ ದರ ಪೈಪೋಟಿ, ವ್ಯಾಪಕ ಜಾಹಿರಾತು, ಚಾಲಕರು ಮತ್ತು ಗ್ರಾಹಕರನ್ನು ಸೆಳೆಯುವ ತಂತ್ರಗಳು, ಇದಕ್ಕಾಗಿ ಅವುಗಳು ವೆಚ್ಚ ಮಾಡುವ ಸಾವಿರಾರು ಕೋಟಿ ಬಂಡವಾಳ, ಮತ್ತು ಇವರ ರಕ್ಷಣೆಗೆ ನಿಂತಿರುವ ಆಡಳಿತದ, ಕ್ಷಣಿಕ ಅಮಿಷಗಳಿಗೆ ಬಲಿಯಾಗುವ ನಮ್ಮ ಜನರ ಮನಸ್ಥಿತಿ, ಇವೆಲ್ಲವನ್ನೂ ಎದುರಿಸಿ ಬೇರೆ ಯಾವುದೇ ಕಂಪನಿ ವ್ಯವಹರಿಸಲು ಸಾಧ್ಯವಿಲ್ಲ. ಈ ವಿದೇಶಿ ಮತ್ತು ಸ್ವದೇಶಿ ಬಹುರಾಷ್ಟ್ರೀಯ ಕಂಪನಿಗಳ ಶೋಷಣೆಯಿಂದ ಮುಕ್ತರಾಗಲು ನಮಗೆ ಇರುವ ದಾರಿ ಒಂದೇ. ಅದು ವಿದೇಶಿ ಮತ್ತು ಸ್ವದೇಶಿ ಬಂಡವಾಳದಾರರಿಗೆ ಮುಕ್ತ ಅವಕಾಶ ಕೊಟ್ಟಿರುವ ಭಾರತ ಸರ್ಕಾರದ ನೀತಿಗಳ ವಿರುದ್ಧ, ದೇಶಾದ್ಯಂತ ದೊಡ್ಡ ಮಟ್ಟದ ಹೋರಾಟ. ಇಂತಹ ಹೋರಾಟ ಸಾಧ್ಯವಿಲ್ಲ ಎಂದಾದರೆ, ಇಂತಹ ಶೋಷಣೆಗೂ ಕೊನೆ ಇರಲಾರದು.

ಓಲಾ ಭಾರತ ಮೂಲದ್ದು. ಆದರೆ ಬಹುಪಾಲು ಬಂಡವಾಳ ವಿದೇಶಿ ಹಣಕಾಸು ಕಂಪನಿಗಳದ್ದು

ವಿದೇಶಿ ಹಣಕಾಸು ಸಂಸ್ಥೆಗಳೇ ಸಾವಿರಾರು ಕೋಟಿ ರೂ ಬಂಡವಾಳ ಹೂಡಿರುವ ಮತ್ತು ಲಾಭದ ಗರಿಷ್ಠಪಾಲು ವಿದೇಶಿ ಬಂಡವಾಳಗಾರರ ಪಾಲಾಗುವ, ಬೊಂಬಾಯಿ ಮೂಲದ 'ಓಲಾ' ಸ್ವದೇಶಿ ಕಂಪೆನಿ. ಓಲಾ ತಾನು ಭಾರತೀಯ ಕಂಪನಿ ಎಂದೇ ಹೇಳಿಕೊಳ್ಳುತ್ತಿದೆ. ಓಲಾ ಮುಂಬಯಿ ಮೂಲದ ಇಬ್ಬರು ವ್ಯಕ್ತಿಗಳಿಂದ 2010 ರಲ್ಲಿ ಸ್ಥಾಪನೆಗೊಂಡು ಟ್ಯಾಕ್ಸಿ ಸೇವೆ ಆರಂಭಿಸಿತು. ನಂತರವೂ ಮೂರ್ನಾಲ್ಕು ವರ್ಷಗಳ ಕಾಲ ವಿದೇಶಿ ಬಂಡವಾಳವಿಲ್ಲದೆ ಇದು ಕಾರ್ಯನಿರ್ವಹಿಸಿತು. (ಬೆಂಗಳೂರಿನ ಆಟೋ ಚಾಲಕರು ಮುಷ್ಕರ ಮಾಡುವ ದಿನಗಳಲ್ಲಿ ಆಟೋ ದರದಲ್ಲಿ ಟ್ಯಾಕ್ಸಿ ಸೇವೆ ನೀಡುವುದಾಗಿ ಜಾಹಿರಾತು ನೀಡುವ ಮೂಲಕ, ಆಟೋ ಚಾಲಕರ ಹೋರಾಟ ಮುರಿಯಲು ಯತ್ನಿಸುತ್ತಿತ್ತು ಓಲಾ ಕಂಪನಿ). ಮಾಹಿತಿ ತಂತ್ರಜ್ಞಾನ ಬೆಳೆದಂತೆ ಟ್ಯಾಕ್ಸಿ ಸೇವಾ ವಲಯದಲ್ಲಿ App ಆಧಾರಿತ ಟ್ಯಾಕ್ಸಿಸೇವೆ ಪ್ರಾರಂಭವಾದಂತೆ, ಓಲಾ ಸಹಾ ಅದರ ಲಾಭಪಡೆದು ತನ್ನ ಉದ್ಯಮ ಬೆಳೆಸಲು ಮುಂದಾಯಿತು. ತಮ್ಮ ಉದ್ಯಮ ಬೆಳೆಯಬೇಕಾದರೆ ಆ ವಲಯದ ಹೆಚ್ಚೆಚ್ಚು ಗ್ರಾಹಕರನ್ನು ತನ್ನತ್ತ ಸೆಳೆಯಬೇಕಾಗುತ್ತದೆ. ಹೆಚ್ಚು ಟ್ಯಾಕ್ಸಿ ಬಳಕೆಯಾಗುವ ಕೆಲವು ಆಯ್ದ ನಗರಗಳಲ್ಲಿ ಟ್ಯಾಕ್ಸಿ ಸೇವೆ ಒದಗಿಸುತ್ತಿರುವ ಇತರೆ ಸಾವಿರಾರು ಸಣ್ಣಪುಟ್ಟ ಟ್ರಾವೆಲ್ಸ್ ಏಜೆನ್ಸಿಗಳ ಗ್ರಾಹಕರು ಮತ್ತು ಅಲ್ಲಿನ ಟ್ಯಾಕ್ಸಿಚಾಲಕರು/ಮಾಲೀಕರನ್ನು ತನ್ನತ್ತ ಸೆಳೆದುಕೊಳ್ಳಬೇಕಾಗುತ್ತದೆ. ಅದೇ ಸಮಯದಲ್ಲಿ ಅಮೇರಿಕ ಮೂಲದ 'ಉಬರ್' ನಂತಹ ವಿದೇಶಿ ಕಂಪನಿಗಳ ಪೈಪೋಟಿಯನ್ನೂ ಅದು ಎದುರಿಸಬೇಕಾಗುತ್ತದೆ. ಅದಕ್ಕೆ ಸಾಕಷ್ಟು ಬಂಡವಾಳದ ಅವಶ್ಯಕತೆ ಇರುತ್ತದೆ. ಓಲಾ ಕಂಪನಿ ಅದಕ್ಕಾಗಿ ಆರಿಸಿಕೊಂಡಿದ್ದು ಹೆಚ್ಚಾಗಿ ವಿದೇಶಿ ಬಂಡವಾಳಗಾರರನ್ನು.

ಓಲಾ ಕಂಪನಿಯ ಮಾಹಿತಿಯಂತೆ 19 ಹೂಡಿಕೆದಾರರು 7 ಹಂತಗಳಲ್ಲಿ (2016ರ ವರೆಗೆ) 1.18 ಬಿಲಿಯನ್ ಡಾಲರ್ (ಅಂದಿನ ರೂಪಾಯಿ ಮೌಲ್ಯದ ಪ್ರಕಾರ ಅಂದಾಜು 7 ಸಾವಿರ ಕೋಟಿ ರೂ.) ಹೂಡಿಕೆ ಮಾಡಿದ್ದಾರೆ. (ಮಾಹಿತಿಗೆ Ola Crunch Base ನೋಡಿ) (ಹೂಡಿಕೆದಾರ ಕಂಪನಿಗಳ ಮಾಹಿತಿಯಂತೆ ಇದರ ಮೊತ್ತ ಇನ್ನೂ ಅಧಿಕ) ಅಮೆರಿಕದ ABG Capital, Accel, Falcon Edge Capital, Matrix Partners, ಜಪಾನಿನ Soft Bank, ರಷ್ಯಾದ DST Global, ಚೀನಾದ Didi Chuxing ಸೇರಿದಂತೆ ಹಲವು ವಿದೇಶಿ ಕಂಪನಿಗಳು ಓಲಾದಲ್ಲಿ ಬಂಡವಾಳ ಹೂಡಿಕೆ ಮಾಡಿವೆ.

ಈ ಸಾವಿರಾರು ಕೋಟಿ ರೂ ಹಣವನ್ನು, ಟ್ಯಾಕ್ಸಿ ಚಾಲಕ/ಮಾಲೀಕರಿಗೆ ಅಧಿಕ ಮೊತ್ತದ ಪ್ರೋತ್ಸಾಹಧನ ನೀಡಲು ಮತ್ತು ಗ್ರಾಹಕರಿಗೆ 'ಉಚಿತ ಹಣ', 'ಉಚಿತ ಮೊದಲ ಪ್ರಯಾಣ', 'ರಿಯಾಯಿತಿ ದರದಲ್ಲಿ ಸೇವೆ' ಎಂಬ ಹಲವು ಅಮಿಷಗಳನ್ನು ಒಡ್ಡಲು ಬಳಸಿಕೊಳ್ಳಲಾಯ್ತು. ಆ ಮೂಲಕ ಸಣ್ಣಪುಟ್ಟ ಟ್ರಾವಲ್ಸ್ ಗಳ ಗ್ರಾಹಕರನ್ನು ಮತ್ತು ಟ್ಯಾಕ್ಸಿ ಚಾಲಕರು/ಮಾಲೀಕರನ್ನು ತನ್ನತ್ತ ಸೆಳೆದುಕೊಂಡು, ಆ ಟ್ರಾವಲ್ಸ್ ಗಳ ಬಾಗಿಲು ಮುಚ್ಚಿಸಿದ್ದಾಯ್ತು. ಈಗ ಭಾರತದ ಬಹುತೇಕ ನಗರ, ಪಟ್ಟಣಗಳ ಟ್ಯಾಕ್ಸಿ ಸೇವಾವಲಯ ಬಹುಪಾಲು ಈ ಕಂಪನಿಗಳ ಹಿಡಿತದಲ್ಲಿದೆ.



ಓಲಾ, ಉಬರ್ ಜೊತೆಗೆ ಮತ್ತೊಂದು ಸಂಸ್ಥೆ 'ಟ್ಯಾಕ್ಸಿ ಫಾರ್ ಶ್ಯೂರ್' ಆಪ್ ಆಧಾರಿತ ಟ್ಯಾಕ್ಸಿ ಸೇವೆ ಒದಗಿಸುತ್ತಿತ್ತು. ಈ ಮೂರು ಸಂಸ್ಥೆಗಳು ಗ್ರಾಹಕರನ್ನು ಸೆಳೆಯಲು ಇವುಗಳ ನಡುವೆ ಬಾರೀ ಪೈಪೋಟಿ ನಡೆಸಿದವು. ಅತೀ ಕಡಿಮೆ ದರದಲ್ಲಿ ಸೇವೆ ಒದಗಿಸುತ್ತೇವೆಂದು ವ್ಯಾಪಕ ಜಾಹಿರಾತು ನೀಡಿದವು. ಕಿಮೀ ಗೆ ಕೇವಲ 6, 7 ಅಥವಾ 8 ರೂ ದರದಲ್ಲಿ ಸೇವೆ ಸಲ್ಲಿಸಲೀ ಮುಂದಾದವು. ಥಮ್ಸಫ್ ಬಾಟಲಿ ಹಿಡಿದ ವ್ಯಕ್ತಿಯೊಬ್ಬ 'ಥಮ್ಸ್ ಅಫ್ ದರದಲ್ಲಿ ಕೇವಲ 40 ರೂಪಾಯಿಗೆ ಟ್ಯಾಕ್ಸಿ ಪ್ರಯಾಣ ಮಾಡಿ', 'ಮೊದಲ ಪ್ರಯಾಣ ಉಚಿತ', 'ನಿಮ್ಮ ಮೊಬೈಲ್ ನಲ್ಲಿ ಓಲಾ ಆಫ್ ಡೌನ್‌ಲೋಡ್ ಮಾಡಿಕೊಂಡರೆ 200 ರೂ ಓಲಾ ಮನಿ ಉಚಿತ'

ಪುಟ 10 ಕ್ಕೆ

ಓಲಾ, ಉಬರ್ ಆಫ್ ಆಧಾರಿತ ಆಟೋ ಸೇವೆ ನಿಷೇಧಿಸಿದ ಸಾರಿಗೆ ಇಲಾಖೆ

ಪುಟ 9 ರಿಂದ

ಮುಂತಾದ ವಿವಿಧ ರೀತಿಯ ಜಾಹಿರಾತು ಫಲಕಗಳನ್ನು ಎಲ್ಲಡೆ ಪ್ರದರ್ಶಿಸಿದರು. ದಿನಪತ್ರಿಕೆಗಳಲ್ಲಿ, ಎಫ್ ಎಮ್ ರೇಡಿಯೋ ಮೂಲಕ ಜಾಹಿರಾತು ಕೊಟ್ಟರು.

ಒಂದೆಡೆ ಗ್ರಾಹಕರನ್ನು ಸೆಳೆಯಲು ಇಂತಹ ಪ್ರಯತ್ನವಾದರೆ, ಟ್ಯಾಕ್ಸಿ ಚಾಲಕರು/ಮಾಲೀಕರನ್ನು ಸೆಳೆಯಲು ಚಾಲಕರಿಗೆ ಹಲವು ಬಗೆಯ ಆಮಿಷ ತೋರಿಸಿದರು. ಆರಂಭದಲ್ಲಿ ಗ್ರಾಹಕರನ್ನು ತಮ್ಮತ್ತ ಸೆಳೆಯಲು ಮತ್ತು ಟ್ಯಾಕ್ಸಿ ಸೇವಾ ವಲಯವನ್ನು ಸಂಪೂರ್ಣವಾಗಿ ತಮ್ಮ ಹಿಡಿತಕ್ಕೆ ಪಡೆಯುವ ಪ್ರಯತ್ನವಾಗಿ ನಿಗದಿಪಡಿಸುತ್ತಿದ್ದ ರಿಯಾಯಿತಿ ದರದಿಂದ ಟ್ಯಾಕ್ಸಿ ಚಾಲಕರಿಗೆ ನಷ್ಟವಾಗುತ್ತಿತ್ತು. ಯಾವ ಮಟ್ಟಕ್ಕೆ ನಷ್ಟ ಎಂದರೆ ಒಂದು ಕಿಮೀ ದೂರಕ್ಕೆ ಕಂಪನಿ ನಿಗದಿಪಡಿಸುತ್ತಿದ್ದ 6, 7 ಅಥವಾ 8 ರೂ ಪ್ರಯಾಣದರ ಆ ಸಮಯದಲ್ಲಿ ಬಳಕೆಯಾಗುವ ಇಂಧನ ಮತ್ತು ಕಾರಿನ ನಿರ್ವಹಣಾ ವೆಚ್ಚಕ್ಕೆ ಸಾಲುತ್ತಿರಲಿಲ್ಲ. ಈ ಆದಾಯದಲ್ಲೂ ಶೇ. 20 ರಿಂದ 25 ರಷ್ಟು ಹಣ ಕಮೀಷನ್ ರೂಪದಲ್ಲೂ, ಜೊತೆ ತೆರಿಗೆ ರೂಪದಲ್ಲಿಯೂ ಕಡಿತವಾಗುತ್ತಿತ್ತು. ಕಂಪನಿ ದಿನದ ಇಪ್ಪತ್ನಾಲ್ಕು ಗಂಟೆಗಳಲ್ಲಿ ತಾನು ನಿಗದಿಪಡಿಸುವ ಟ್ರಿಪ್ ಗಳನ್ನು ಮಾಡಿದರೆ ಮಾತ್ರ ಚಾಲಕರಿಗೆ ಪ್ರೋತ್ಸಾಹಧನ (ಇನ್ಸೆಂಟಿವ್) ನೀಡುವುದಾಗಿ ಷರತ್ತು ವಿಧಿಸಿದವು. ಇದು 8,10,13 ಅಥವಾ 15 ಟ್ರಿಪ್ ಮಾಡಲು ಚಾಲಕನನ್ನು ಪ್ರೇರಿಪಿಸಿತು. ಚಾಲಕ ತನ್ನ ನಷ್ಟ ತಪ್ಪಿಸಿಕೊಳ್ಳಲು ದಿನದ ಹೆಚ್ಚಿನ ಸಮಯ ದುಡಿಯಲೇ ಬೇಕಾದ ಅನಿವಾರ್ಯತೆಗೆ ಈ ಕಂಪನಿಗಳು ದೂಡಿದವು. ಯಾವುದೇ ಶ್ರಮಜೀವಿ ಆರೋಗ್ಯವಂತರಾಗಿರ ಬೇಕಾದರೆ, ದಿನದಲ್ಲಿ 8 ಗಂಟೆ ಮಾತ್ರ ದುಡಿಯಬೇಕು. ಆದರೆ ಟ್ಯಾಕ್ಸಿ ಚಾಲಕರು 12 ರಿಂದ 18 ಗಂಟೆ ದುಡಿಯಲೇ ಬೇಕಾದ ಅನಿವಾರ್ಯತೆಗೆ ದೂಡಲಾಯಿತು.

ಮತ್ತೊಂದು ಪ್ರಯತ್ನದಲ್ಲಿ ಟ್ಯಾಕ್ಸಿಗಳನ್ನು ಕಂಪನಿಯ ಜೊತೆ ಸೇರಿಸುವ ಮಧ್ಯವರ್ತಿಗಳಿಗೆ ಒಂದು ಟ್ಯಾಕ್ಸಿಗೆ ಐದು ಸಾವಿರ ಬೋನಸ್ ಕೊಟ್ಟರು. ಟ್ಯಾಕ್ಸಿ ಚಾಲಕರಿಗೆ ಉಚಿತವಾಗಿ ಆಂಡ್ರಾಯ್ಡ್ ಮೊಬೈಲ್ ಕೊಟ್ಟರು.

'ಟ್ಯಾಕ್ಸಿ ಫಾರ್ ಶ್ಯೂರ್' ಎಂಬ ಟ್ಯಾಕ್ಸಿ ಸೇವಾ ಸಂಸ್ಥೆ ಲಕ್ಷಾಂತರ ಗ್ರಾಹಕರನ್ನು ಮತ್ತು ಸಹಸ್ರಾರು ಟ್ಯಾಕ್ಸಿಗಳನ್ನು ಹೊಂದಿ, ಸಂಸ್ಥೆ ದೊಡ್ಡದಾಗಿ ಬೆಳೆದ ನಂತರ ಅಧಿಕ ಲಾಭಕ್ಕೆ ಓಲಾ ಕಂಪನಿಗೆ ಮಾರಾಟಗೊಂಡಿತು.

ಈ ಕಂಪನಿಗಳ ವ್ಯಾಪಾರಿ ತಂತ್ರ ಫಲಿಸುತ್ತದೆ. ಗ್ರಾಹಕರಿಲ್ಲದೆ, ಟ್ಯಾಕ್ಸಿಗಳಿಲ್ಲದೆ ಸಣ್ಣ ಪುಟ್ಟ ಟ್ರಾವೆಲ್ ಗಳು ಮುಚ್ಚಿಹೋದವು. ಟ್ಯಾಕ್ಸಿ ಚಾಲಕರು ತಮ್ಮ ಅದುವರೆಗಿನ ಗ್ರಾಹಕರನ್ನು ಕಳೆದುಕೊಂಡರು. ಗ್ರಾಹಕರು ತಮಗೆ ಸೇವೆ ನೀಡುತ್ತಿದ್ದ ಟ್ಯಾಕ್ಸಿ ಚಾಲಕರನ್ನು ಕಳೆದುಕೊಂಡರು. ಈ ಇಬ್ಬರಿಗೂ ಓಲಾ, ಉಬರ್ ಕಂಪನಿಗಳು ಅನಿವಾರ್ಯ ಎಂಬಂತಾಯ್ತು. ಆಗ ಶುರುವಾಯ್ತು ನೋಡಿ ಈ ಸಂಸ್ಥೆಗಳ ನಿಜವಾದ ಆಟ. ಗ್ರಾಹಕರಿಂದ ಅಧಿಕ ಪ್ರಮಾಣದರ ವಸೂಲಿ ಮಾಡಲು ಮುಂದಾಗುತ್ತಾರೆ. ಟ್ಯಾಕ್ಸಿ ಚಾಲಕರಿಗೆ ಕೊಡುತ್ತಿದ್ದ ಎಲ್ಲಾ ರೀತಿಯ ಪ್ರೋತ್ಸಾಹಧನ ಸ್ಥಗಿತ ಮಾಡುತ್ತಾರೆ. ಗ್ರಾಹಕರಿಂದ ಪಡೆಯುವ ಪ್ರಯಾಣದರದಲ್ಲಿ ಹೆಚ್ಚಿನ ಪಾಲನ್ನು ಈ ಸಂಸ್ಥೆಗಳೇ ಪಡೆಯುತ್ತವೆ. ಈ ಕಂಪನಿಗಳು ನಮ್ಮ ದೇಶದ ಕಾನೂನುಗಳಿಗೆ ಬೆಲೆ ಕೊಡುವುದಿಲ್ಲ. ಸಾರಿಗೆ ಇಲಾಖೆ ನಿಗದಿಪಡಿಸಿದ ಟ್ಯಾಕ್ಸಿ ಪ್ರಯಾಣದರದ ನಿಯಮಕ್ಕೆ ಈ ಸಂಸ್ಥೆಗಳು ಯಾವ ಬೆಲೆಯನ್ನೂ ಕೊಡುವುದಿಲ್ಲ.

ತಮಗೆ ಸಂಸ್ಥೆಗಳು ಮೋಸ ಮಾಡುತ್ತಿವೆ, ನಮಗೆ ನಷ್ಟವಾಗುತ್ತಿದೆ, ಜೀವನ ನಡೆಸಲು ಕಷ್ಟವಾಗುತ್ತಿದೆ, ಈ ಸಂಸ್ಥೆಗಳ ವಿರುದ್ಧ ಕಾನೂನು ಕ್ರಮ ಕೈಗೊಳ್ಳಬೇಕು, ಸಾರಿಗೆ ಇಲಾಖೆ ನಿಗದಿಪಡಿಸಿದ ಪ್ರಯಾಣ ದರ ನಮಗೆ ಬೇಕು, ಈ ಸಂಸ್ಥೆಗಳು ನಮ್ಮಿಂದ ಪಡೆಯುವ ಕಮೀಷನ್ ಗೆ ಕಡಿವಾಣ ಹಾಕಬೇಕು' ಎಂದೆಲ್ಲಾ ಬೇಡಿಕೆ ಇಟ್ಟು ದೆಹಲಿ, ಬೆಂಗಳೂರು ಸೇರಿದಂತೆ ಹಲವು ನಗರಗಳಲ್ಲಿ ಟ್ಯಾಕ್ಸಿ ಚಾಲಕರು ಹೋರಾಟ ಮಾಡುತ್ತಾರೆ. ಸರ್ಕಾರ ಮಾತ್ರ ಚಾಲಕರ ಹೋರಾಟಗಳಿಗೆ ಬೆಲೆ ಕೊಡಲಿಲ್ಲ. ಚಾಲಕರು ಮತ್ತು ಸಾರ್ವಜನಿಕರ ಒತ್ತಡ ಹೆಚ್ಚಾದ ಸಂದರ್ಭದಲ್ಲಿ ಸರ್ಕಾರ (ಕಾರ್ಯಾಂಗ) ಅವುಗಳ ವಿರುದ್ಧ ಕ್ರಮ ಕೈಗೊಳ್ಳುವ ನಾಟಕ ಆಡುತ್ತದೆ. ಕಂಪನಿಗಳು ನ್ಯಾಯಾಂಗದ ಮೊರೆ ಹೋಗಿ ತಮ್ಮ ಮೇಲೆ ಯಾವುದೇ ಕ್ರಮ ಕೈಗೊಳ್ಳದಂತೆ ಆದೇಶ ತರುತ್ತಾರೆ. ಶಾಸಕಾಂಗ ಮಾತ್ರ ಮೂಕ ಪ್ರೇಕ್ಷಕರಂತಿರುತ್ತದೆ.

ನಮ್ಮ ರಾಜ್ಯದಲ್ಲಿಯೂ ಈ ಸಂಸ್ಥೆಗಳು ರಾಜ್ಯ ಸರ್ಕಾರ ತಂದಿರುವ 'ಕರ್ನಾಟಕ ರಾಜ್ಯ ಬೇಡಿಕೆ ಆಧಾರಿತ ಸಂಚಾರ ತಂತ್ರಜ್ಞಾನ ಅಧಿನಿಯಮಗಳು–2016' ನ್ನು ಅನುಸರಿಸುವ ಬದಲಾಗಿ, ಈ ನಿಯಮ ರೂಪಿಸುವಲ್ಲಿ ರಾಜ್ಯ ಸರ್ಕಾರಕ್ಕಿರುವ ಅಧಿಕಾರವನ್ನು ಪ್ರಶ್ನಿಸಿ ಅದನ್ನು ನ್ಯಾಯಾಲಯಕ್ಕೆ ಒಯ್ದಿದ್ದಾರೆ. ಕೇಂದ್ರ ಸರ್ಕಾರವೇ ಈ ವಿದೇಶಿ ಕಂಪನಿಗಳನ್ನು ನಿಯಂತ್ರಿಸುವ ನಿಯಮ ರೂಪಿಸಲು ಮುಂದಾಗಬೇಕು. ಆದರೆ, ನಮ್ಮ ಪ್ರಧಾನಿ ದೇಶದಲ್ಲಿ ಬಂಡವಾಳ ಹೂಡುವಂತೆ ವಿದೇಶಿ ಬಂಡವಾಳಗಾರರನ್ನು ಆಕರ್ಷಿಸಲು ಜಗತ್ತನ್ನೇ ಸುತ್ತುತ್ತಿದ್ದಾರೆ, ಮತ್ತು ಹಲವು ವಲಯಗಳಲ್ಲಿ ಶೇ. 100 ರಷ್ಟು ವಿದೇಶಿ ನೇರ ಬಂಡವಾಳಕ್ಕೆ ಮುಕ್ತ ಅವಕಾಶ ಕೊಟ್ಟಿದ್ದಾರೆ. ಇಂತಹ ಸರ್ಕಾರದಿಂದ ಟ್ಯಾಕ್ಸಿ ವಲಯದಲ್ಲಿನ ವಿದೇಶಿ ಕಂಪನಿಗಳನ್ನು ನಿಯಂತ್ರಿಸುವ ನಿಯಮ ಜಾರಿಗೆ ತರುತ್ತಾರೆಂಬುದನ್ನು ನಿರೀಕ್ಷಿಸಲು ಸಾಧ್ಯವಿಲ್ಲ.

ಜಾತಿ ಗೋಡೆಗಳ ದಾಟುತ್ತಾ

ಪುಟ 6 ರಿಂದ

ಬೆಳೆದರೆ, ಅದು ನಮ್ಮ ಜಾಗತಿಕ ನಾಯಕತ್ವವನ್ನು ನಾಶ ಮಾಡಲಿದೆ. ತಕ್ಷಣ ಆರ್ಥಿಕ ಕ್ಷೇತ್ರದ ಧರ್ಮ ವಿಭಜನೆಯನ್ನು ತಡೆಯಿರಿ" ಎಂದೂ ಕೂಡ ಅವರು ಒತ್ತಾಯಿಸಿದ್ದಾರೆ.

ಈಗಾಗಲೇ ದೇಶದಲ್ಲಿ ಲಾಕ್ ಡೌನ್, ನೋಟು ನಿಷೇಧ, ಕರೋನಾ ಕಾರಣಗಳಿಂದಾಗಿ ಉದ್ಯೋಗ, ಉದ್ಯೋಗಿಗಳು ನೆಲಕಚ್ಚಿದ್ದಾರೆ. ಕರೋನಾ ದಾಳಿಯಿಂದ ತತ್ತರಿಸಿರುವ ಸಮಾಜ ಸ್ವಲ್ಪ ಸ್ವಲ್ಪವಾಗಿಯೇ ಮೇಲೇಳುತ್ತಿರುವ ಸಂದರ್ಭದಲ್ಲಿ ಒಂದೊಂದೇ ತಡೆಗಳನ್ನು ಒಡ್ಡುತ್ತಿರುವ ಈ ಕಾಲದಲ್ಲಿ ಗೋಹತ್ಯಾ ನಿಷೇಧ ಕಾಯ್ದೆ, ಮತಾಂತರ ಕಾಯ್ದೆ, ಲವ್ ಜಿಹಾದ್, ಹಿಜಾಬ್, ಹಲಾಲಕಟ್, ಜಟ್ಕಾಕಟ್, ಜಾತ್ರೆಗಳಲ್ಲಿ ಮುಸ್ಲೀಮರ ವ್ಯಾಪಾರ ನಿಷೇಧದಂತಹ ಕೃತ್ಯಗಳಿಂದ ಆರ್ಥಿಕ ಸ್ಥಿತಿ ಇನ್ನೂ ನೆಲಕಚ್ಚುವುದರಿಂದ ಇಂತಹ ಕ್ಷುಲ್ಲಕ ವಿಷಯಗಳನ್ನು ನಿಲ್ಲಿಸಬೇಕಿದೆ. ನೆಲಕಚ್ಚಿರುವ ಉದ್ಯಮಗಳು ನಿಧಾನವಾಗಿ ಮೇಲೇಳುತ್ತಿರುವ ಸಂದರ್ಭದಲ್ಲಿ ಸರ್ಕಾರದ ನೇತೃತ್ವದಲ್ಲಿಯೇ ಜನರು ಮತ್ತು ಸರ್ಕಾರದ ಮಧ್ಯೆ ಬಿರುಕು ಉಂಟಾಗುತ್ತಿದೆ ರಾಜ್ಯದ ಪ್ರಗತಿಯ ಸಂಕೇತವೇನೂ ಅಲ್ಲ. ಹಿಜಾಬ್‌ನ ಕಾರಣ, ಸಮವಸ್ತ್ರವನ್ನು ಮುಂದೆ ಮಾಡಿ ರಾಜ್ಯ ಸರ್ಕಾರದ ಶಾಲೆಗಳಲ್ಲಿ ಮುಸ್ಲಿಂ ಹೆಣ್ಣು ಮಕ್ಕಳ ಶಿಕ್ಷಣಕ್ಕೆ ನಿರ್ಬಂಧವೊಡ್ಡಿತು. ಶಾಲೆ, ಕಾಲೇಜುಗಳ ವಿದ್ಯಾರ್ಥಿಗಳನ್ನು ಬಳಸಿಕೊಂಡು ಈ ಪುಂಡರು ಸಮಾಜದಲ್ಲಿ ಅಶಾಂತಿಯನ್ನುಂಟು ಮಾಡಿತು. ಇದು ಮುಸ್ಲಿಂ ಹೆಣ್ಣುಮಕ್ಕಳ ಶಿಕ್ಷಣಕ್ಕೆ ಹಿನ್ನಡೆ ಮಾಡಿತು. ಮುಸ್ಲೀಮರು ಕಾನೂನನ್ನು ಮುರಿಯುತ್ತಿದ್ದಾರೆ. ಹೈಕೋರ್ಟ್ ಆದೇಶವನ್ನು ಉಲ್ಲಂಘಿಸುತ್ತಿದ್ದಾರೆ. ಎನ್ನುವ ಇವರಿಗೆ ಅವರಿಗೆ ಅದು ಅನ್ಯಾಯವೆನಿಸಿದರೆ ಸುಪ್ರೀಂ ಕೋರ್ಟಿಗೆ ಹೋಗಲು ಅವಕಾಶವಿದೆ. ಒಂದು ವೇಳೆ ಸುಪ್ರೀಂ ಕೋರ್ಟಿನ ಆದೇಶವಾದರೆ ಅದನ್ನು ಭಾರತದಲ್ಲಿರುವ ಪ್ರತಿಯೊಬ್ಬರೂ ಪಾಲಿಸಲೇಬೇಕಾಗುತ್ತದೆ. ಅಯ್ಯಪ್ಪಸ್ವಾಮಿ ದೇವಸ್ಥಾನ ಪ್ರವೇಶವನ್ನು ಮಹಿಳೆಯರಿಗೆ ತಡೆಯುವಂತಿಲ್ಲವೆಂದು ಸುಪ್ರೀಂ ಕೋರ್ಟ್ ಹೇಳಿದರೂ ಸಹ ಇದೇ ಸಂಘ ಪರಿವಾರದವರು ಅಲ್ಲಿ ಮಹಿಳೆಗೆ ಪ್ರವೇಶವನ್ನು ತಡೆದು ದೇಶದ ಅತ್ಯುನ್ನತ ಸುಪ್ರೀಂ ಕೋರ್ಟಿನ ಆದೇಶವನ್ನು ಉಲ್ಲಂಘನೆ ಮಾಡಿತು. ಹಾಗಾದಲ್ಲಿ ದೇಶದ ಕಾನೂನಿನ ಮುಂದೆ ಎಲ್ಲರೂ ಸಮಾನರಲ್ಲವೇ?

ಕಳೆದ ಕೆಲವು ತಿಂಗಳುಗಳಿಂದ ಕರ್ನಾಟಕ ತನ್ನ ಸಾಧನೆಗಳಿಂದ ಹೆಸರು ಮಾಡಲಿಲ್ಲ. ಬದಲಾಗಿ ಹಲವಾರು ಆತಂಕ, ಅಶಾಂತಿಯನ್ನು ಉಂಟು ಮಾಡಿ, ಅಂತರರಾಷ್ಟ್ರೀಯ ಮಟ್ಟದಲ್ಲಿ ಧಾರ್ಮಿಕ ವಿಭಜನೆಯ ಕಾರಣಕ್ಕೆ ಕುಖ್ಯಾತವಾಯಿತು. ಸಮವಸ್ತ್ರದ ಕಾರಣಕ್ಕೆ ರಾಜ್ಯದ ಸರ್ಕಾರಿ ಶಾಲೆಗಳಲ್ಲಿ ವಿದ್ಯಾರ್ಥಿನಿಯರಿಗೆ ಬಹಿಷ್ಕಾರ ಹಾಕುವ ಮೂಲಕ ಜಾಗತಿಕವಾಗಿ ಕರ್ನಾಟಕ ಕುಖ್ಯಾತವಾಯಿತು. ಸುಸಂಸ್ಕೃತ ನಡೆ ನುಡಿ, ಸಮೃದ್ಧಿಗಾಗಿ ಹೆಸರಾದ ಕರ್ನಾಟಕ ಇಂದು ಇಂತಹ ಪುಂಡ, ಪೋಕರಿಗಳ ಕೈಗೆ ಕಾರ್ಯಭಾರ ಕೊಟ್ಟು ಸರ್ಕಾರ ಕಣ್ಣು ಮುಚ್ಚಿಕೊಂಡಿರುವ ಮೌನವು ಮಹಾ ಅಪರಾಧವಾಗಿದೆ. ಇದು ಭಾರತದ ಕರ್ನಾಟಕವಾಗಿದೆಯೇ ಹೊರತು ಇರಾನ್, ಇರಾಕ್, ಅಫ್ಘಾನಿಸ್ಥಾನದ ಭಾಗವಲ್ಲ.

ಯಾವ ವಿಚಾರಣೆಯೂ ಇಲ್ಲದೇ ನೇರವಾಗಿ ಒಂದು ಕೋಮಿನವರನ್ನು ಅಪರಾಧದ ಹೊಣೆಗಾರರನ್ನಾಗಿ ಮಾಡುವುದು ಜವಾಬ್ದಾರಿ ಸ್ಥಾನದಲ್ಲಿರುವ ರಾಜ್ಯ ಮಂತ್ರಿಗಳ ಕೆಲಸವಾಗಬಾರದು. ರಾಜ್ಯದ ಜವಾಬ್ದಾರಿ ಹೊತ್ತ ರಾಜಕಾರಣಿಗಳೇ ತನ್ನ ರಾಜಕೀಯ ಲಾಭಕ್ಕಾಗಿ ಬೆಂಕಿ ಹಚ್ಚುವ ಕೆಲಸ ಮಾಡುವುದು ಮಹಾಪಾಪದ ಕೆಲಸ. ಅದು ಯಾವ ಧರ್ಮದ ರಾಜಕಾರಣಿಯಾದರೂ ಸಹ ಅವರು ಜನತೆಯ ಮುಂದೆ ಅಪರಾಧಿಗಳಾಗುತ್ತಾರೆ. ಗುರು ಗೋವಿಂದಭಟ್ಟರು ಮತ್ತು ಶಿಶುವಿನಾಳ ಷರೀಫರ ಸಂಬಂಧವನ್ನು ನಾವಿಲ್ಲಿ ನೆನೆಯಬೇಕಿದೆ. ಬದುಕಿನಲ್ಲಿ, ಅಧ್ಯಾತ್ಮದಲ್ಲಿ ಮತ್ತು ಸತ್ತ ನಂತರವೂ ಅವರ ಸಮಾಧಿಗಳು ಅಕ್ಕ ಪಕ್ಕದಲ್ಲಿವೆ. ಬಿಸ್ಮಿಲ್ಲಾ ಖಾನರ ಶಹನಾಯಿಯಿಲ್ಲದೆ ಕಾಶೀ ವಿಶ್ವನಾಥ ದೇವರ ಪೂಜೆಯೇ ನಡೆಯುತ್ತಿರಲಿಲ್ಲ. ಅಮೇರಿಕದಲ್ಲಿ ಅವರಿಗೆ ಎಲ್ಲ ಸವಲತ್ತುಗಳನ್ನು ನೀಡುತ್ತೇವೆ. ನೀವು ಇಲ್ಲಿಯೇ ಇರಿ. ಎಂದಾಗ "ನೀವು ಎಲ್ಲವನ್ನೂ ಕೊಡುತ್ತಿರಿ. ಆದರೆ ನನ್ನ ಕಾಶೀ ವಿಶ್ವನಾಥನನ್ನು ಇಲ್ಲಿಗೆ ತರಬಲ್ಲಿರಾ?" ಎಂದು ನಿರಾಕರಿಸುತ್ತಾರೆ. ಇಂತಹ ಸೌಹಾರ್ದದ ಸಮಾಜ ನಮ್ಮದು. ಅದನ್ನು ರಾಜಕೀಯ ಕಾರಣಕ್ಕಾಗಿ ಒಡೆಯುವುದು ತರವಲ್ಲ. ಒಬ್ಬ ರಾಜಕಾರಣಿ ತನ್ನ ರಾಜಧರ್ಮವನ್ನು ಪಾಲಿಸಬೇಕು. ತನ್ನ ಜನರನ್ನು ತಾಯಿಯಂತೆ ನಿಂತು ರಕ್ಷಿಸಬೇಕಾಗುತ್ತದೆ. ಭಾರತ ಸ್ವಾತಂತ್ರದ ನಂತರ ದೇಶ ಇಬ್ಭಾಗವಾದಾಗ ಮುಸ್ಲೀಮರ ಪರವಾಗಿ ನಿಂತುಕೊಂಡ ನೆಹರೂರವರು, ಗಾಂಧೀಜಿಯವರು, ಮುಸ್ಲೀಮರನ್ನು ಕೊಲ್ಲುವುದಕ್ಕೆ ಮೊದಲು ನಮ್ಮನ್ನು ಕೊಲ್ಲಿರಿ ಎಂದು ಮುಂದೆ ನಿಂತು ಭಾರತದಲ್ಲಿಯೇ ಉಳಿಯಲು ಇಚ್ಚಿಸಿದ ಮುಸಲ್ಮಾನರನ್ನು ರಕ್ಷಿಸಿದರು. ಇಂತಹ ನಾಯಕತ್ವದ ಅವಶ್ಯಕತೆ ನಮಗೆ ಬೇಕಿದೆ.

ಕೆಲ ದಿನಗಳ ಹಿಂದೆಯೇ ಜಾತ್ರೆಗಳಲ್ಲಿ ಮುಸಲ್ಮಾನರಿಗೆ ವ್ಯಾಪಾರವನ್ನು ನಿರ್ಬಂಧಿಸಿದ್ದರು. ಈಗ "ಹಲಾಲ್ ಕಟ್ ಮಾಂಸವನ್ನು ಮುಸಲ್ಮಾನರಿಂದ ಹಿಂದುಗಳು ಖರೀದಿಸಬಾರದು. ಹಿಂದೂಗಳ ಅಂಗಡಿಯಲ್ಲಿಯೇ ಮಾಂಸ ಖರೀದಿ, ವ್ಯಾಪಾರ ಮಾಡಬೇಕು" ಎಂದು ಈ ಬೀದಿ ಪುಂಡರು ಫರ್ಮಾನು ಹೊರಡಿಸಿದ್ದರು. ಹಾಗಾದರೆ ರಾಜ್ಯದಲ್ಲಿ ಸರ್ಕಾರಗಳು ಯಾಕೆ ಬೇಕು? ಹೀಗೆ ಒಂದರ ಹಿಂದೆ ಒಂದರಂತೆ ನಿಷೇಧಗಳು, ಫರ್ಮಾನುಗಳನ್ನು ಪುಂಡರು ಹೊರಡಿಸುತ್ತಾ ಒಂದು ಸಮುದಾಯದವನ್ನು ಪೀಡಿಸುವ ನಿರ್ಬಂಧಗಳು ಜಾರಿಯಾಗಿ, ಧರ್ಮಾಧಾರಿತ ನೆಲೆಯಲ್ಲಿ ಜನರನ್ನು ಒಡೆಯುತ್ತಾ ಹೋದರೆ, ನಮ್ಮ ಆರ್ಥಿಕತೆ ಬಸವಳಿದು ಹೋಗುತ್ತದೆ. ರಾಜ್ಯದ ಪ್ರಗತಿಗೆ ಹಿನ್ನೆಡೆಯಾಗುತ್ತದೆ.

ಕರ್ನಾಟಕದಲ್ಲಿ ಹಿಜಾಬ್ ಎಂದು ಕೂಗಾಡಿತು. ಸಾಮಾನ್ಯ ಜನ ಇದರ ರಾಜಕಾರಣವನ್ನು ಹೀಗಳೆಯಿತು. ಹಲಾಲ್ ಕಟ್ ಜಟ್ಕಾ ಕಟ್ ಎಂದು ಶುರು ಮಾಡಿತು. ಅದಕ್ಕೆ ಜನರೇ ಸರಿಯಾಗಿ ಉತ್ತರಿಸಿದ್ದಾರೆ. ಕರ್ನಾಟಕದ ಗೃಹ ಮಂತ್ರಿಯೇ ಸುಳ್ಳು ಸುದ್ದಿಗಳನ್ನು ಹರಿಬಿಟ್ಟು ಹಿಂದು ಮುಸ್ಲಿಂ ಮಾಡಿದ್ದಕ್ಕೆ ಜನ ಕ್ಯಾಕರಿಸಿ ಉಗಿದಿದ್ದಾರೆ. ದೇವಸ್ಥಾನಗಳ ಬಳಿ ಮುಸ್ಲೀಮರು ವ್ಯಾಪಾರ ಮಾಡದಂತೆ ಕೋಮುವಾದಿಗಳು ನಿರ್ಬಂಧಿಸಿದರು. ಆದರೆ ಬಡೇಸಾಬರ ಒಡೆದು ಹಾಕಿದ 5 ಕ್ವಿಂಟಾಲ್ ಕಲ್ಲಂಗಡಿಗೆ ಬದಲಾಗಿ ಜನರೇ ಮುಂದೆ ಬಂದು ಹಿಂದುಗಳೇ ಅವರ ಕೈ ಹಿಡಿದು ಹಣ ಸಹಾಯ ಮಾಡಿ ಬೆಂಬಲಿಸಿ ಬದುಕಿಗೆ ಆಸರೆಯಾದರು. ಹಿಂದು ಮುಸ್ಲಿಮರೆಲ್ಲರೂ ಸೇರಿ ಬೆನ್ನೆಲುಬಾದರು. ಕೋಮುವಾದಿ ಸಂಘಟನೆಗಳು ಮುಸ್ಲೀಮರ ಅಂಗಡಿಗಳಲ್ಲಿ ವ್ಯಾಪಾರ ಮಾಡಬೇಡಿ ಎಂದರು. ಆದರೆ ಜನರು ಈ ಬೂಟಾಟಿಕೆಯ ಮಾತುಗಳನ್ನು ಮೆಟ್ಟಿ ನಿಂತರು. ಇದೇ ನಮ್ಮ ಸೌಹಾರ್ದ ಸಂಸ್ಕೃತಿಯಾಗಿದೆ. ಅದಕ್ಕೇ ಕೂಡಿ ಬಾಳಿದ ಸಂಸ್ಕೃತಿಗೆ ಸಾವಿರಾರು ವರ್ಷಗಳ ಇತಿಹಾಸವಿದೆ. ಆದರೆ ಹಿಂದು ಮುಸ್ಲಿಂ ಸಂಸ್ಕೃತಿಗೆ ಕೇವಲ ಕೆಲವೇ ವರ್ಷಗಳ ಇತಿಹಾಸವಿದೆ.

ಸರ್ಕಾರದ ನೇತೃತ್ವದಲ್ಲಿಯೇ ಜನರಮಧ್ಯೆ ಬಿರುಕುಗಳು ತಲೆದೋರುತ್ತಾ ಹೋದರೆ ರಾಜ್ಯದಲ್ಲಿ ಅರಾಜಕತೆ ತಲೆದೋರುತ್ತದೆ. ಇಂತಹ ರಾಜ್ಯದ ಆರ್ಥಿಕತೆ ಕುಸಿಯುತ್ತದೆ. ರಾಜ್ಯ ಸರ್ಕಾರದ ಇಂತಹ ಅರಾಜಕ ನಡೆಗಳಿಂದಾಗಿ ರಾಜ್ಯದ ಅಭಿವೃದ್ಧಿ ಕುಂಠಿತವಾಗುತ್ತದೆ. ಬೀದಿ ಗೂಂಡಾಗಳದೇ ರಾಜ್ಯವಾದಾಗ ಜನರಲ್ಲಿ ಆತಂಕ, ಭಯ, ಅಭದ್ರತೆ ತಲೆದೊರುವುದು ಸಹಜ. ಜನರು ಅಭದ್ರತೆ, ಅತಂಕದಲ್ಲಿದ್ದರೆ ರಾಜ್ಯದ ಪ್ರಗತಿಯಾಗುವುದಿಲ್ಲ. ಆದ್ದರಿಂದ ಜನರಿಗೆ ನೆಮ್ಮದಿಯ ನೆಲೆಗಳನ್ನು ನೀಡುತ್ತಾ, ಉದ್ಯೋಗಗಳನ್ನು ಸೃಷ್ಟಿಸುತ್ತಾ, ಆರ್ಥಿಕವಾಗಿ ಸುಭದ್ರಗೊಳ್ಳುತ್ತಾ, ಸಮಾಜದಲ್ಲಿ ಸೌಹಾರ್ದತೆ ಕಾಪಾಡುವುದು ಇಂದಿನ ಅಗತ್ಯವಾಗಿದೆ. ಕೋಮುವಾದವು ಇತ್ತೀಚಿನ ಬೆಳವಣಿಗೆಯಾಗಿದೆ. ಆದರೆ ಕೂಡಿ ಬಾಳಿದ ಸೌಹಾರ್ದ ಸಂಸ್ಕೃತಿಗೆ ಸಾವಿರಾರು ವರ್ಷಗಳ ಇತಿಹಾಸವಿದೆ.

88 ವಿದ್ವಾಂಸರಿಂದ 12,000 ವರ್ಷಗಳ ಭಾರತೀಯ ನಾಗರಿಕತೆ ಮತ್ತು ಇತಿಹಾಸದ ವರದಿ





ಕಳೆದ 12,000 ವರ್ಷಗಳಲ್ಲಿ ಭಾರತದ ನಾಗರಿಕತೆ ಮತ್ತು ಇತಿಹಾಸದ ಕುರಿತು ವರದಿಯನ್ನು ಹೊರತರಲು 88 ರಾಷ್ಟ್ರೀಯ ಮತ್ತು ಅಂತರಾಷ್ಟ್ರೀಯ ವಿದ್ವಾಂಸರು ಒಟ್ಟುಗೂಡಿದ್ದಾರೆ. ಇದನ್ನು ಅಕ್ಟೋಬರ್ 9 ರಂದು ದಿಲ್ಲಿಯ ಇಂಡಿಯಾ ಇಂಟರ್‌ನ್ಯಾಶನಲ್ ಸೆಂಟರ್‌ನಲ್ಲಿ ಪ್ರಕಟಿಸಲಾಯಿತು. ಪ್ರಸಿದ್ಧ ಪ್ರಾಧ್ಯಾಪಕರು, ಸಾಂಸ್ಕೃತಿಕ ಕಾರ್ಯಕರ್ತರು ಮತ್ತು ಸಾಹಿತ್ಯ ವಿಮರ್ಶಕರಾಗಿರುವ ಗಣೇಶ್ ಎನ್ ದೇವಿ ನೇತೃತ್ವದ ಗುಂಪು ಈ ಕೆಲಸವನ್ನು ಕೈಗೆತ್ತಿಕೊಂಡಿದೆ.

ತಳಿಶಾಸ್ತ್ರ, ಪುರಾತತ್ವ ಶಾಸ್ತ್ರ, ಮಾನವಶಾಸ್ತ್ರ, ಭಾಷಾಶಾಸ್ತ್ರ ಮತ್ತು ತತ್ವಶಾಸ್ತ್ರ ಸೇರಿದಂತೆ ವ್ಯಾಪಕ ಶ್ರೇಣಿಯ ವಿಷಯಗಳ ಕುರಿತು 100 ವಿಭಾಗಗಳೊಂದಿಗೆ ಈ ವರದಿ ಬರಲಿದೆ. ಕೇಂದ್ರ ಸರಕಾರ 2020 ರಲ್ಲಿ ಪ್ರಾರಂಭಿಸಿದ ಇತಿಹಾಸ ಪುನರ್ಲೇಖನದ ಯೋಜನೆಗೆ ತದ್ವಿರುದ್ಧವಾಗಿ ಈ ವರದಿ ಇತಿಹಾಸದ ವೈಜ್ಞಾನಿಕ ದೃಷ್ಟಿಕೋನವನ್ನು ಪ್ರಸ್ತುತಪಡಿಸುವ ಗುರಿಯನ್ನು ಹೊಂದಿದೆ ಎಂದು ಸಂಘಟಕರು ಹೇಳಿದ್ದಾರೆ.

ಕೇಂದ್ರ ಸರ್ಕಾರವು "ಸುಮಾರು 12,000 ವರ್ಷಗಳ ಹಿಂದಿನ ಭಾರತೀಯ ಸಂಸ್ಕೃತಿಯ ಮೂಲ ಮತ್ತು ವಿಕಾಸವನ್ನು" ಅಧ್ಯಯನ ಮಾಡಲೆಂದು ಒಂದು ಸಮಿತಿಯನ್ನು ಸ್ಥಾಪಿಸಿತ್ತು. ಅದರಲ್ಲಿ ದಕ್ಷಿಣ ಭಾರತ ಮತ್ತು ಈಶಾನ್ಯ ಭಾರತದವರು, ಧಾರ್ಮಿಕ ಅಲ್ಪಸಂಖ್ಯಾತರು, ದಲಿತರು ಮತ್ತು ಮಹಿಳೆಯರು ಯಾರೂ ಇಲ್ಲ ಎಂದು ಸರ್ಕಾರದ ಆ ಸಮಿತಿಯು ಆಗ ತೀವ್ರ ಟೀಕೆಗೆ ಒಳಗಾಗಿತ್ತು.

ಇತ್ತೀಚಿನ ವರ್ಷಗಳಲ್ಲಿ ಭಾರತದ ಇತಿಹಾಸದ ಪುನರ್ಲೇಖನದ ಪ್ರಯತ್ನಗಳು ಹೆಚ್ಚುತ್ತಿವೆ. ಸರಕಾರ ದಲಿತರಿಗೆ, ಕ್ರೈಸ್ತರಿಗೆ, ಮುಸ್ಲಿಮರಿಗೆ ಮತ್ತು ಮಹಿಳೆಯರಿಗೆ ಸ್ಥಾನವೇ ಇಲ್ಲದ ರೀತಿಯಲ್ಲಿ ಇತಿಹಾಸವನ್ನು ಮರು ನಿರೂಪಿಸಲು ಒಂದು ಸಮಿತಿಯನ್ನು ನೇಮಿಸಿರುವಾಗ ಮುಂದಿನ ಭಾರತೀಯ ತಲೆಮಾರು ಭಿನ್ನವಾಗಿ ಯೋಚಿಸುತ್ತ ಬೆಳೆಯುತ್ತದೆ ಎಂದು ಖೇದ ವ್ಯಕ್ತಪಡಿಸಿದ ದೇವಿಯವರು ಈ ಸಾಮೂಹಿಕ ವರದಿ ಮೂಡಿ ಬರಲು ಕಾರಣ ಇತಿಹಾಸದ ವೈಜ್ಞಾನಿಕ ನೋಟ ಮತ್ತು ಇತ್ತೀಚಿನ ವರ್ಷಗಳಲ್ಲಿ ನಮ್ಮ ಮುಂದೆ ತೆರೆದುಕೊಳ್ಳುತ್ತಿರುವ ದಕ್ಷಿಣ ಏಷ್ಯಾದ ಇತಿಹಾಸವನ್ನು ವಿಕೃತಗೊಳಿಸಲು, ತಿರುಚಲು ಮಾಡುತ್ತಿರುವ ಸೈದ್ಧಾಂತಿಕ ಆವೇಶದ ಪ್ರಯತ್ನಗಳ ನಡುವಿನ ವಿವಾದ ಎಂದು ಮುಂದುವರೆದು ಹೇಳಿದರು.

ವಲಸೆಗಳು, ಸಾಮಾಜಿಕ ಮತ್ತು ರಾಜಕೀಯ ಸಂಘಟನೆಗಳ ಉದಯ, ಹೊರಹೊಮ್ಮುವಿಕೆ, ತತ್ವಶಾಸ್ತ್ರ ಮತ್ತು ಆಧ್ಯಾತ್ಮಿಕತೆಯ ಬೆಳವಣಿಗೆ, ಭಾಷೆಗಳು ಮತ್ತು ಅಭಿವ್ಯಕ್ತಿಯ ವೈವಿಧ್ಯತೆ, ಪ್ರಮುಖ ಸಾಮಾಜಿಕ ಚಳುವಳಿಗಳು, ಭಾರತೀಯ ವಿಚಾರಗಳು ಮತ್ತು ಸಂಸ್ಕೃತಿಯ ಮೇಲೆ ವಸಾಹತುಶಾಹಿಯ ಪ್ರಭಾವ, ದೀರ್ಘ ಸ್ವಾತಂತ್ರ್ಯ ಹೋರಾಟ ಮತ್ತು ಸ್ವಾತಂತ್ರ್ಯದ ನಂತರ ಭಾರತದ ನಿರ್ಮಾಣದ ಒಂದು ಸಮಗ್ರ ಚಿತ್ರಣವನ್ನು ಒದಗಿಸಲು ಇದನ್ನು ವಿನ್ಯಾಸಗೊಳಿಸಲಾಗಿದೆ ಎಂದು ಜಿ.ಎನ್. ದೇವಿ ಹೇಳಿದರು

"ಭಾರತದ 12,000 ವರ್ಷಗಳು: ಹೊಲೊಸಿನ್‌ನಿಂದೀಚೆಗೆ ಭಾರತದ ನಾಗರಿಕತೆ ಮತ್ತು ಇತಿಹಾಸದ ಮೇಲಿನ ವರದಿ" ಎಂಬ ಈ ವರದಿಯು ಭೂಮಿಯ ವಾತಾವರಣ ಮಾನವ ಜೀವಿಸಲು ಅನುಕೂಲಗೊಳ್ಳಲಾರಂಭಿಸಿದ ಹೊಲೊಸಿನ್ ಎಂದು ಭೂವೈಜ್ಞಾನಿಕರು ಹೆಸರಿಸಿರುವ ಭೂಶಕೆಯಿಂದ ಪ್ರಾರಂಭವಾಗಿ 2000 ದಲ್ಲಿ ಮೂರನೇ ಸಹಸ್ರಮಾನದ ಪ್ರಾರಂಭದ ವರೆಗಿನ ಸುಮಾರು 12 ಸಾವಿರ ವರ್ಷಗಳ ಒಂದು ಬಹು ದೀರ್ಘ ಅವಧಿಯನ್ನು ಆವರಿಸಿದೆ.

ಇದನ್ನು ಇಂಗ್ಲಿಷಿನಲ್ಲಿ ಮಾತ್ರವಲ್ಲ, ಕನ್ನಡ, ತಮಿಳು, ಹಿಂದಿ, ಮರಾಠಿ ಮತ್ತು ಬಂಗಾಲಿ ಭಾಷೆಗಳಲ್ಲೂ ತರಲಾಗುವುದು.

ಕಾರ್ಯಕ್ರಮದಲ್ಲಿ ಕವಿ ಮತ್ತು ಸಾಂಸ್ಕೃತಿಕ ವಿಮರ್ಶಕ ಅಶೋಕ್ ವಾಜಪೇಯಿ, ಇತಿಹಾಸಕಾರರಾದ ನಾರಾಯಣಿ ಗುಪ್ತಾ, ರಾಜಕೀಯ ವಿಜ್ಞಾನಿ ಝೋಯಾ ಹಸನ್, ಸಾಮಾಜಿಕ ಸಿದ್ಧಾಂತಿ ಮತ್ತು ವಿಮರ್ಶಕ ಆಶಿಸ್ ನಂದಿ, ಮತ್ತು ಸಿಪಿಐ(ಎಂ) ಪ್ರಧಾನ ಕಾರ್ಯದರ್ಶಿ ಸೀತಾರಾಮ್ ಯೆಚೂರಿ ಸೇರಿದಂತೆ ಹಲವಾರು ಗಣ್ಯರು ಉಪಸ್ಥಿತರಿದ್ದರು.

ಸರಕಾರ ಇತಿಹಾಸದ ಪುನರ್ಲೇಖನಕ್ಕೆ ರಚಿಸಿದ ಸಮಿತಿಯ ಬಗ್ಗೆ ಟಿಪ್ಪಣಿ ಮಾಡುತ್ತ ಅಶೋಕ ವಾಜಪೇಯಿ, ಅದು ಭಾರತದ ವೈವಿಧ್ಯಮಯ ಭಾಷೆಗಳು, ಸಂಸ್ಕೃತಿಗಳು ಮತ್ತು ಜನಗಳ ಮೇಲೆ ನಡೆಸಿರುವ ದಾಳಿ, ಭಾರತದ ಪ್ರಜಾಪ್ರಭುತ್ವ ಮೌಲ್ಯಗಳ ಮೇಲೆ ನಡೆಸಿರುವ ದಾಳಿ ಎಂದು ವರ್ಣಿಸುತ್ತ "ಸಮಸ್ಯೆಯೆಂದರೆ ಇದನ್ನು ರಾಷ್ಟ್ರವಾದದ ಹೆಸರಿನಲ್ಲಿ, ಭಾರತ್ ಮಾತಾಕೀ ಜೈ ಎಂದು ಜೈಕಾರ ಹಾಕದ್ದಕ್ಕಾಗಿ ಕೊಂದು ಹಾಕುವ ತೆರನ ರಾಷ್ಟ್ರೀಯವಾದದ ಹೆಸರಿನಲ್ಲಿ ಮಾಡಲಾಗುತ್ತಿದೆ" ಎಂದು ಹೇಳಿದರು.

ಝೋಯಾ ಹಸನ್ ರವರು, ಭಾರತದಂತಹ ಒಂದು ಅದ್ಭುತವಾದ ವೈವಿಧ್ಯಮಯ ಸಮಾಜದಲ್ಲಿ ಇಂತಹ ಬಹುಸಂಖ್ಯಾತವಾದೀ ಪ್ರಾಜೆಕ್ಟ್ ಸಮಸ್ಯಾತ್ಮಕವಾಗುತ್ತದೆ ಎಂದರು.

"ನಾವು ವಿಭಿನ್ನರು, ನಾವು ವಿವಿಧ ಇತಿಹಾಸಗಳು, ವಿವಿಧ ನಾಗರಿಕತೆಗಳ ಒಂದು ಸಂಯೋಜನೆ ಎಂಬ ವಾಸ್ತವವನ್ನು ಒಟ್ಟಿಗೆ ತರುವ ಈ ಕೆಲಸವು ಅಪಾರ ಮಹತ್ವವನ್ನು ಹೊಂದಿದೆ. ಭಾರತ, ನಾನು ಯಾವಾಗಲೂ ಕಂಡಂತೆ, ನಾಗರಿಕತೆಯ ಮುನ್ನಡೆಯ ಜೀವಂತ ಮೂಸೆ, ದೇಶಕ್ಕೆ ಬರುತ್ತಲೇ ಇದ್ದ, ಪರಸ್ಪರ ಪ್ರಭಾವ ಬೀರಿದ ಮತ್ತು ನಮ್ಮ ನಾಗರಿಕತೆಯನ್ನು ಮತ್ತಷ್ಟು ಬೆಳೆಸಿದವುಗಳ ಸಂಗಮ" ಎಂದು ಯೆಚೂರಿ ಹೇಳಿದರು.

ಒಂದು ಶತಮಾನದ ಹಿಂದೆ ರಾಷ್ಟ್ರೀಯ ಸ್ವಯಂಸೇವಕ ಸಂಘ (ಆರ್‌ಎಸ್‌ಎಸ್)ದ ಹುಟ್ಟಿನಿಂದ ಪ್ರಾರಂಭವಾದ "ಭಾರತ ಕುರಿತ ಕಣ್ಣೋಟದ ಸಮರ" ಇನ್ನೂ ಮುಂದುವರೆದಿದೆ. ಸ್ವಾತಂತ್ರ್ಯ ಹೋರಾಟದಲ್ಲಿ ಮೂರು ದೃಷ್ಟಿಕೋನಗಳು ಬೆಳೆದು ಬಂದವು. ಇದೀಗ ನಡೆಯುತ್ತಿರುವುದೆಂದರೆ ಈ ಕಣ್ಣೋಟಗಳ ಸಮರದ ಮುಂದುವರಿಕೆ. ಮುಖ್ಯವಾಹಿನಿಯ ಕಾಂಗ್ರೆಸ್ ಕಣ್ಣೋಟವೆಂದರೆ, ಭಾರತವು ಜಾತ್ಯತೀತ ಪ್ರಜಾಸತ್ತಾತ್ಮಕ ಗಣರಾಜ್ಯವಲ್ಲದೆ ಬೇರೇನೂ ಆಗಲಾರದು ಎಂಬುದು. ದೇಶವು ಆರ್ಥಿಕ ಸ್ವಾತಂತ್ರ್ಯದತ್ತ ಸಾಗಬೇಕು ಮತ್ತು ಸಮಾಜವಾದದತ್ತ ಚಲಿಸಬೇಕು ಎಂಬುದು ಎಡಪಕ್ಷಗಳು ತರ್ಕ. ಮತ್ತು ಮೂರನೆಯದ್ದು ಈ ಕಣ್ಣೋಟಗಳಿಗೆ ಸಂಪೂರ್ಣವಾಗಿ ವಿರುದ್ಧವಾದ, ಭಾರತದ ಚಾರಿತ್ರ್ಯವನ್ನು ಅದರ ಜನಗಳ ಧಾರ್ಮಿಕ ಸಂಯೋಜನೆಯ ಆಧಾರದ ಮೇಲೆ ನಿರೂಪಿಸಬೇಕು ಎಂದು ಹೇಳುವಂತದ್ದು. ಹಿಂದೂ ರಾಷ್ಟ್ರ ಮತ್ತು ಇಸ್ಲಾಮಿಕ್ ಪ್ರಭುತ್ವ ಎಂಬ ಕಲ್ಪನೆಯು ಮೂಡಿ ಬಂದ ರೀತಿಯಿದು. ಇದು ಎರಡು ರಾಷ್ಟ್ರದ ಸಿದ್ಧಾಂತದತ್ತ ಒಯ್ಯಿತು ಎಂದು ಅವರು ವಿವರಿಸಿದರು.

"ಹೀಗೆ ಈ ಕಣ್ಣೋಟಗಳ ಸಮರವೆಂದರೆ, ಒಂದು ಜಾತ್ಯತೀತ ಪ್ರಜಾಸತ್ತಾತ್ಮಕ ಗಣರಾಜ್ಯವನ್ನು ಉನ್ಮತ್ತ ಫ್ಯಾಸಿಸ್ಟ್ ತೆರನ ಹಿಂದೂ ರಾಷ್ಟ್ರವಾಗಿ ಪರಿವರ್ತಿಸುವುದಾಗಿದೆ. ನಾವೀಗ ತೊಡಗಿಸಿಕೊಂಡಿರುವ ಸಮರವು ವಾಸ್ತವವಾಗಿ ಈ ಸಮರದ ಮುಂದುವರಿಕೆಯಾಗಿದೆ" ಎಂದು ಯೆಚೂರಿ ಸೇರಿಸಿದರು.

ಭಾಷಾ ಸಂಶೋಧನೆ ಮತ್ತು ಪ್ರಕಾಶನ ಕೇಂದ್ರದ ಮುತುವರ್ಜಿಯಿಂದ ಆರಂಭವಾಗಿರುವ ಈ ವರದಿಯು ಮಾರ್ಚ್ 2023 ರಲ್ಲಿ ಹೊರಬರುವ ನಿರೀಕ್ಷೆಯಿದೆ.

ರೈತ ವಿರೋಧಿ ಸರಕಾರವನ್ನು ಮನೆಗೆ ಕಳುಹಿಸಿ

ಪುಟ 5 ರಿಂದ

ವಿರುದ್ಧ ದೆಹಲಿ ರೈತರು ಹೋರಾಟ ಆರಂಭಿಸಿದಾಗ, ಪ್ರಧಾನಮಂತ್ರಿ ನರೇಂದ್ರ ಮೋದಿ ಅವರು ರೈತ ಹೋರಾಟ ಹಕ್ಕಿಕ್ಕಲು ಶಕ್ತಿ ಪ್ರದರ್ಶನ ಮಾಡಿದರು. ರೈತ ಶಕ್ತಿಗೆ ಮಣಿಯಲೇ ಬೇಕಾಯಿತು. ಒಂದು ವರ್ಷ ನಡೆಸಿದ ಐತಿಹಾಸಿಕ ಹೋರಾಟಕ್ಕೆ ಮಣಿದು ಕೇಂದ್ರವು ಮೂರು ಕಾಯ್ದೆಗಳನ್ನು ವಾಪಸ್ ಪಡೆದಿದೆ ಎಂದರು.

ಎಐಕೆಎಸ್ ರಾಷ್ಟ್ರೀಯ ಜಂಟಿ ಕಾರ್ಯದರ್ಶಿ ಡಾ.ವಿಜುಕೃಷ್ಣನ್ ಮಾತನಾಡಿ, ದೇಶದಲ್ಲಿ ಇಂದಿಗೂ ರೈತರು ಸಂಕಷ್ಟ ಅನುಭವಿಸುವುದು ತಪ್ಪುತ್ತಿಲ್ಲ. ಸ್ವಾಮಿನಾಥನ್ ವರದಿ ಆಧರಿಸಿ ಕನಿಷ್ಠ ಬೆಂಬಲ ಬೆಲೆ (ಎಂಎಸ್‌ಪಿ)ಯನ್ನು ಕಾಯ್ದೆ ರೂಪದಲ್ಲಿ ಜಾರಿಗೊಳಿಸುತ್ತಿಲ್ಲ. ಆದರೆ ಕೇರಳ ಒಂದು ರಾಜ್ಯದಲ್ಲಿ ಮಾತ್ರ ಕೃಷಿ ಉತ್ಪನ್ನಗಳಿಗೆ ಯೋಗ್ಯದರ ನೀಡುವ ಕೆಲಸವನ್ನು ಅಲ್ಲಿನ ಸರ್ಕಾರ ಮಾಡುತ್ತಿದೆ ಎಂದು ಹೇಳಿದರು. ಆದರೆ ಕೇಂದ್ರ ಸರಕಾರ ಮತ್ತು ಕರ್ನಾಟಕ ಸರಕಾರ ರೈತರ ಜೊತೆ ಚೆಲ್ಲಾಟ ಆಡುತ್ತಿವೆ. ಅವರು ಸಂಕಷ್ಟಗಳಿಗೆ ಪರಿಹಾರ ನೀಡುತ್ತಿಲ್ಲ, ಹಾಗಾಗಿ, 'ಮುಂದಿನ ದಿನಗಳಲ್ಲಿ ಗ್ರಾಮದಿಂದ ಅಖಿಲ ಭಾರತ ಮಟ್ಟದವರೆಗೆ ರೈತ ರನ್ನು ಸಂಘಟಿಸಿ ಚಳವಳಿ ರೂಪಿ ಸಲಾಗುವುದು. ರೈತ ವಿರೋಧಿ ನೀತಿಗಳನ್ನು ರೂಪಿಸುವ ಸರಕಾರಗಳಿಗೆ ಬುದ್ಧಿ ಕಲಿಸಲಾಗುವುದು' ಎಂದರು.

ಕೆಪಿಆರ್‌ಎಸ್ ರಾಜ್ಯಾಧ್ಯಕ್ಷ ಜಿ.ಸಿ.ಬಯ್ಯಾರೆಡ್ಡಿ, ಪ್ರಧಾನ ಕಾರ್ಯದರ್ಶಿ ಯು. ಬಸವರಾಜ ಮಾತನಾಡಿ ಸಮ್ಮೇಳನದ ಮಹತ್ವವನ್ನು ವಿವರಿಸಿದರು. ಈ ಸಮ್ಮೇಳನವು ಮೂರು ದಿನಗಳ ಕಾಲ ನಡೆಯಲಿದ್ದು, ಕೃಷಿ ಕುರಿತಾದ ಚರ್ಚೆಗಳು ನಡೆಯಲಿವೆ. ಅಕ್ಟೋಬರ್ 16 ರಂದು ನೂತನ ಸಮಿತಿಯನ್ನು ರಚಿಸಲಾಗುವುದು ಎಂದು ತಿಳಿಸಿದರು.

ವೇದಿಕೆಯ ಮೇಲೆ ರೈತ ಮುಖಂಡರಾದ ವೀರನಗೌಡ, ನರಸಣ್ಣ ನಾಯಕ್, ಕೆ.ಜಿ.ವಿರೇಶ್, ಬಿ.ಎಸ್.ಸೊಪ್ಪಿನ್, ಶಾಂತರಾಮ ನಾಯಕ, ಶರಣಬಸಪ್ಪ, ಮಂಜುನಾಥರೆಡ್ಡಿ, ಲಕ್ಷ್ಮೀ ನಾರಾಯಣ, ನವೀನಕುಮಾರ್, ವೆಂಕಟಚಲಯ್ಯ, ಜಿ. ನಾಗರಾಜ, ದೇವೇಂದ್ರಗೌಡ, ಶಬ್ಬೀರ್, ಸೇರಿದಂತೆ ಮತ್ತಿತರರು ಇದ್ದರು.

ಬಹಿರಂಗ ಸಭೆಯಲ್ಲಿ ಅಖಿಲ ಭಾರತ ಕಿಸಾನ್ ಸಭಾದ ಪ್ರಧಾನ ಕಾರ್ಯದರ್ಶಿ ಹನನ್ ಮೊಲ್ಲ ರವರು ರಚಿಸಿರುವ "ಕಿಸಾನ್ ಸಭಾದ ಸಂಕ್ಷಿಪ್ತ ಚರಿತ್ರೆ" ಪುಸ್ತಕವನ್ನು ಬಿಡುಗಡೆ ಮಾಡಲಾಯಿತು.

ಚಿಲ್ಲರೆ ಹಣದುಬ್ಬರ 7.4%, ಸತತ 9 ನೇ ತಿಂಗಳಿಗೆ ಏರಿಕೆ ಆಹಾರವಸ್ತುಗಳಲ್ಲಿ ಬೆಲೆಯುಬ್ಬರ ಏರಿಕೆ ಇನ್ನೂ ಹೆಚ್ಚು: 8.60%

ಕಳೆದ ಎಂಟು ತಿಂಗಳಿಂದ ಸತತವಾಗಿ ಚಿಲ್ಲರೆ ಹಣದುಬ್ಬರವು ಒಂಬತ್ತನೇ ತಿಂಗಳಲ್ಲಿಯೂ, ಅಂದರೆ ಸೆಪ್ಟೆಂಬರ್ 2022ರಲ್ಲಿ 7.41%ಕ್ಕೇ ಏರಿದೆ. ಇದು ಐದು ತಿಂಗಳ ಗರ್ರಿಷ್ಠ ಮಟ್ಟವೂ ಹೌದು. ಆಗಸ್ಟ್‌ನಲ್ಲಿ 7% ಇದ್ದ ಆಹಾರ ಬೆಲೆಯುಬ್ಬರ 8.41% ಕ್ಕೇ ಏರಿದೆ. ಇದು ಕಳೆದ 22 ತಿಂಗಳುಗಳಲ್ಲೇ ಅತೀ ಹೆಚ್ಚು ಏರಿಕೆ ಎನ್ನಲಾಗಿದೆ. ಅದೇ ವೇಳೆಯಲ್ಲಿ ಕಾರ್ಖಾನೆ ಆಧಾರಿತ ಕೈಗಾರಿಕಾ ಉತ್ಪಾದನೆಯ ಸೂಚ್ಯಂಕ ಆಧಾರಿತ ಕಾರ್ಖಾನೆ ಉತ್ಪಾದನೆಯು 17 ತಿಂಗಳ ನಂತರ ಆಗಸ್ಟ್‌ನಲ್ಲಿ –0.8% ಕ್ಕೆ ಕುಸಿದಿದೆ. ಮುಖ್ಯವಾಗಿ ಉತ್ಪಾದನೆ ಮತ್ತು ಗಣಿಗಾರಿಕೆ ವಲಯಗಳಲ್ಲಿನ ಕುಸಿತದಿಂದಾಗಿ ಹೀಗಾಗಿದೆ ಎಂದು ಅಕ್ಟೋಬರ್ 12ರಂದು ರಾಷ್ಟ್ರೀಯ ಅಂಕಿಅಂಶ ಕಚೇರಿ(ಎನ್‌ಎಸ್‌ಒ) ಬಿಡುಗಡೆ ಮಾಡಿದ ಮಾಹಿತಿಯಿಂದ ತಿಳಿದು ಬಂದಿದೆ.

ಚಿಲ್ಲರೆ ಹಣದುಬ್ಬರವನ್ನು ಅಳೆಯುವ ಗ್ರಾಹಕ ಬೆಲೆ ಸೂಚ್ಯಂಕ (ಸಿಪಿಐ) ಏಪ್ರಿಲ್‌ನಿಂದ ಬೆಲೆ ಏರಿಕೆಯು ಸುಮಾರು ಎಂಟು ವರ್ಷಗಳ ಗರಿಷ್ಟ ಮಟ್ಟವಾದ 7.79% ಕ್ಕೆ ತಲುಪಿದೆ ಎಂದು 'ಇಂಡಿಯನ್ ಎಕ್ಸ್‌ಪ್ರೆಸ್' ವರದಿ ಮಾಡಿದೆ. ಗ್ರಾಹಕ ಆಹಾರ ಬೆಲೆ ಸೂಚ್ಯಂಕ (ಸಿಎಫ್‌ಪಿಐ), ಅಥವಾ ಆಹಾರದ ವಸ್ತುಗಳ ಬೆಲೆಯುಬ್ಬರವು ಆಗಸ್ಟ್‌ನಲ್ಲಿ 7.62% ರಿಂದ ಸೆಪ್ಟೆಂಬರ್‌ನಲ್ಲಿ 8.60% ಕ್ಕೆ ಏರಿತು.

ಗ್ರಾಮೀಣ ಪ್ರದೇಶಗಳು ಆಗಸ್ಟ್‌ನಲ್ಲಿ 9.6% ಮತ್ತು ಜುಲೈನಲ್ಲಿ 6.9% ಗೆ ಹೋಲಿಸಿದರೆ ಸೆಪ್ಟೆಂಬರ್‌ನಲ್ಲಿ ಸುಮಾರು 12% ಹಣದುಬ್ಬರವನ್ನು ಎದುರಿಸಿವೆ. ಧಾನ್ಯಗಳು 11.53% ರಷ್ಟು ದುಬಾರಿಯಾಗಿವೆ. ಗ್ರಾಮೀಣ ಪ್ರದೇಶಗಳಲ್ಲಿ ತರಕಾರಿಗಳ ಬೆಲೆಗಳು ಜುಲೈನಲ್ಲಿ 10.9% ರಿಂದ ಸೆಪ್ಟೆಂಬರ್‌ನಲ್ಲಿ 18.05% ಕ್ಕೆ ದ್ವಿಗುಣಗೊಂಡಿವೆ ಮತ್ತು ನಗರ ಗ್ರಾಹಕರು 20.05% ರಷ್ಟು ತೀವ್ರ ಏರಿಕೆಯನ್ನು ಎದುರಿಸುತ್ತಿದ್ದಾರೆ ಎಂದು 'ದಿ ಹಿಂದೂ' ವರದಿ ಮಾಡಿದೆ.

ಹಾಲು ಮತ್ತು ಉತ್ಪನ್ನಗಳ ಬೆಲೆಯುಬ್ಬರವು 7.13% ಏರಿಕೆಯಾದರೆ ಮಸಾಲೆಗಳು 16.88% ರಷ್ಟು ದುಬಾರಿಯಾಗಿವೆ. ಮೊಟ್ಟೆಯ ಬೆಲೆಗಳು–1.79% ಕುಸಿದವು, ಆದರೆ ಹಣ್ಣುಗಳು 5.68% ರಷ್ಟು ದುಬಾರಿಯಾಗಿವೆ.

ಡಿಸೆಂಬರ್ 2021 ರಿಂದ 8% ಕ್ಕಿಂತ ಹೆಚ್ಚು ಇರುವ ಬಟ್ಟೆ ಮತ್ತು ಪಾದರಕ್ಷೆಗಳ ಬೆಲೆಯುಬ್ಬರವು ಸೆಪ್ಟೆಂಬರ್‌ನಲ್ಲಿ 10.17% ಕ್ಕೆ ಏರಿತು, ಗ್ರಾಮೀಣ ಭಾರತವು 10.41%ರ ಹೆಚ್ಚಿನ ಹಣದುಬ್ಬರ ದರವನ್ನು ಎದುರಿಸುತ್ತಿದೆ ಮತ್ತು ಪಾದರಕ್ಷೆಗಳ ಬೆಲೆಗಳು 12.3% ರಷ್ಟು ಏರಿಕೆಯಾಗುತ್ತಿವೆ.

ಇಂಧನ ಮತ್ತು ವಿದ್ಯುತ್ ಬೆಲೆಯುಬ್ಬರವು ಸೆಪ್ಟೆಂಬರ್‌ನಲ್ಲಿ 10.4% ನಲ್ಲಿ ಸತತ ನಾಲ್ಕನೇ ತಿಂಗಳಿಗೆ 10% ಕ್ಕಿಂತ ಹೆಚ್ಚಿದ್ದರೆ, ತಯಾರಿಸಿದ ಸರಕುಗಳ ಬೆಲೆದುಬ್ಬರವು 7% ಕ್ಕಿಂತ ಹೆಚ್ಚುತ್ತಲೇ ಇತ್ತು.

ಇತ್ತೀಚಿನ ಈ ಹಣದುಬ್ಬರ/ಬೆಲೆಯೇರಿಕೆಗಳ ಅಂಕಿಅಂಶಗಳು ರಿಝರ್ವ್ ಬ್ಯಾಂಕಿನ ಸಮಸ್ಯೆಗಳನ್ನು ಸಂಕೀರ್ಣಗೊಳಿಸುತ್ತವೆ. ಸೆಪ್ಟೆಂಬರ್ 30 ರಂದು, ಆರ್‌ಬಿಐ ಅರ್ತವ್ಯವಸ್ಥೆಯಲ್ಲಿ ಬ್ಯಾಂಕ್ ಬಡ್ಡಿ ದರಗಳನ್ನು ಸೂಚಿಸುವ ರೆಪೊ ದರವನ್ನು ಅಂದರೆ ವಾಣಿಜ್ಯ ಬ್ಯಾಂಕುಗಳಿಗೆ ಸಾಲದ ಬಡ್ಡಿ ದರವನ್ನು 5.90% ಗೆ ಹೆಚ್ಚಿಸಿದೆ. ಹಣದುಬ್ಬರವನ್ನು ಹತೋಟಿಗೆ ತರಲೆಂದು ಅದು ಈ ಹಣಕಾಸು ವರ್ಷದಲ್ಲಿ ಪ್ರಮುಖ ಬಡ್ಡಿದರವನ್ನು ಸುವಾರು 2% ದಷ್ಟು ಏರಿಸಿದೆ.

ಇದಲ್ಲದೆ, ವಿಶ್ವಬ್ಯಾಂಕ್ ಮತ್ತು ಅಂತರಾಷ್ಟ್ರೀಯ ಹಣಕಾಸು ನಿಧಿ ಈಗಾಗಲೇ 2022–23ರಲ್ಲಿ ಭಾರತದ ಜಿಡಿಪಿ ಬೆಳವಣಿಗೆಯ ಮುನ್ಸೂಚನೆಯನ್ನು 8.2%ದಿಂದ 7.4%ಕ್ಕೆ, ಮತ್ತೆ ಕೆಲವೇ ದಿನಗಳಲ್ಲಿ 6.8%ಕ್ಕೆ ಇಳಿಸಿವೆ ಎಂಬುದನ್ನೂ ಗಮನಿಸಬೇಕು. ಕಾರ್ಖಾನೆಯ ಉತ್ಪಾದನೆಯ ಪ್ರಮಾಣ ಕುಸಿದಿದೆ; ಗ್ರಾಹಕ ವಸ್ತುಗಳಿಗೆ ಬೇಡಿಕೆಯೂ ಹಬ್ಬದ ಸೀಝನ್ನಿನ ಹೊರತಾಗಿಯೂ ಕುಸಿತ ತೋರಿಸುತ್ತಿದೆ. ಕೈಗಾರಿಕಾ ಚೇತರಿಕೆಯು ಇನ್ನೂ ದುರ್ಬಲವಾಗಿಯೇ ಇದೆ, ಅಲ್ಲದೆ ಕೆಲವೇ ಕ್ಷೇತ್ರಗಳಿಗೆ ಸೀಮಿತವಾಗಿದೆ ಎಂದು ಆರ್ಥಿಕ ತಜ್ಞರು ಹೇಳುತ್ತಿದ್ದಾರೆ.

ಈ ನಡುವೆ ಸರಕಾರೀ ಧಾನ್ಯ ದಾಸ್ತಾನು ಕಳೆದ 5 ವರ್ಷಗಳಲ್ಲೇ ಅತೀ ಕಡಿಮೆ ಮಟ್ಟಕ್ಕೆ ಇಳಿದಿದೆ ಎಂದು 'ಇಂಡಿಯನ್ ಎಕ್ಸ್‌ಪ್ರೆಸ್'(ಅ.13) ವರದಿ ಮಾಡಿದೆ.

"ನಿರುದ್ಯೋಗ, ಆರ್ಥಿಕ ಮಂದಗತಿಯ ಮೇಲೆ ಈ ಹಣದುಬ್ಬರದ ನಾಗಾಲೋಟ ಲಕ್ಷಾಂತರ ಜನಗಳನ್ನು ದಾರಿದ್ರ್ಯದತ್ತ ತಳ್ಳುತ್ತಿದೆ. 2020ರಲ್ಲಿ ಭಾರತದಲ್ಲಿ ಬಡವರ ಸಂಖ್ಯೆಯಲ್ಲಿ 5.6 ಕೋಟಿ ಹೆಚ್ಚಳವಾಗಿದೆ ಎಂದು ವಿಶ್ವಬ್ಯಾಂಕ್ ಅಂದಾಜು ಮಾಡಿದೆ. ಇದು ನಮ್ಮ ಅರ್ಥವ್ಯವಸ್ಥೆಯ ಮೋದಿ ವಿನಾಶ" ಎಂದು ಈ ಅಂಕಿ–ಅಂಶಗಳಿಗೆ ಪ್ರತಿಕ್ರಿಯಿಸುತ್ತ ಸಿಪಿಐ(ಎಂ) ಪ್ರಧಾನ ಕಾರ್ಯದರ್ಶಿ ಸೀತಾರಾಂ ಯೆಚುರಿ ಟ್ವೀಟ್ ಮಾಡಿದ್ದಾರೆ.

ಇದು ಅಮೃತ ಕಾಲ



"ನಿನಗೆ ಗೊತ್ತಿದೆಯೇ..ಇಲ್ಲಿ ಬೆಲೆಯೇರಿಕೆ ಮತ್ತು ನಿರುದ್ಯೋಗ ನಮಗಿಂತ(ಆಫ್ರಿಕಾದ ಚೀತಾಗಳಿಗಿಂತ) ವೇಗವಾಗಿ ಓಡುತ್ತವೆ"
ವ್ಯಂಗ್ಯಚಿತ್ರ: ಮಿಕಾ ಅಜೀಜ್, ಫೇಸ್‌ಬುಕ್

ಕೆನರಾ ಬ್ಯಾಂಕ್: 11 ವರ್ಷಗಳಲ್ಲಿ ದೊಡ ಸುಸ್ತಿದಾರರ 1.29 ಲಕ್ಷ ಕೋಟಿ ರೂ.ಗಳ ಸಾಲಮನ್ನಾ

ಕೆನರಾ ಬ್ಯಾಂಕ್, ಈಗ ಕರ್ನಾಟಕದ ಏಕೈಕ ಸಾರ್ವಜನಿಕ ವಲಯದ ಬ್ಯಾಂಕ್, ದೇಶದ ನಾಲ್ಕನೇ ಅತಿದೊಡ್ಡ ಸಾರ್ವಜನಿಕ ವಲಯದ ಬ್ಯಾಂಕ್ ರೂ.100 ಕೋಟಿ ಮತ್ತು ಅದಕ್ಕಿಂತ ಹೆಚ್ಚಿನ ಸಾಲವನ್ನು ಪಡೆದಿರುವ ದೊಡ್ಡ ಸುಸಿದಾರರ 'ಕೆಟ್ಟ' ಸಾಲಗಳನ್ನು ಮನ್ನಾ ಮಾಡುವುದನ್ನು ಮುಂದುವರೆಸಿದೆ. ಅದೇ ಸಮಯದಲ್ಲಿ, ಮಾಹಿತಿ ಹಕ್ಕು ಕಾಯ್ದೆ (ಆರ್‌ಟಿಐ) ಅಡಿಯಲ್ಲಿ ಈ ದೊಡ್ಡ ಸುಸ್ತಿದಾರರ ಹೆಸರುಗಳನ್ನು ಹಂಚಿಕೊಳ್ಳಲು ಬ್ಯಾಂಕ್ ನಿರಾಕರಿಸುತ್ತಿದೆ, ಮತ್ತು ಆರ್‌ಟಿಐ ಕಾಯ್ದೆಯ ಸೆಕ್ಷನ್ 8(1)(ಜೆ) ಅನ್ನು ತಪ್ಪಾಗಿ ಬಳಸುತ್ತಿದೆ.

ಇದು ಮಾಹಿತಿ ಹಕ್ಕು ಕಾಯ್ದೆಯ ಅಡಿಯಲ್ಲಿ ಪುಣೆ ಮೂಲದ ಆರ್‌ಟಿಐ ಕಾರ್ಯಕರ್ತ ವಿವೇಕ್ ವೆಳಂಕರ್ ಪಡೆದಿರುವ ಮಾಹಿತಿ(ಯೋಗೇಶ್ ಸಪ್ಕಳೆ, ಮನಿಲೈಫ್.ಇನ್,ಅ.10). 2011–12 ರಿಂದ 2021–22 ರವರೆಗಿನ ಕಳೆದ 11 ವರ್ಷಗಳ ಅವಧಿಯಲ್ಲಿ ಕೆನರಾ ಬ್ಯಾಂಕ್ ಒಟ್ಟು ರೂ.1,29,088 ಕೋಟಿ ಮೊತ್ತದ ಮಹಾಸುಸ್ತಿದಾರರ ಸಾಲಗಳನ್ನು ಮನ್ನಾ ಮಾಡಿದೆ ಎಂದು ಈ ಮಾಹಿತಿಗಳು ತೋರಿಸುತ್ತವೆ.

ವರ್ಷ	ಕೋಟಿ ರೂ.ಗಳಲ್ಲಿ
2011–12	3801.27
2012–13	4080.60
2013–14	3930.43
2014–15	1748.28
2015–16	3372.81
2016–17	5332.81
2017–18	9316.71
2018–19	19792.73
2019–20	23051.76
2020–21	31417.59
2021–22	32244.13

ಇವು ಸಾಲಮನ್ನಾ ಅಲ್ಲ, ಬದಲಿಗೆ ಇವನ್ನು ತಾಂತ್ರಿಕವಾಗಿ ಬ್ಯಾಂಕಿನ ಸಾಮಾನ್ಯ ಲೆಕ್ಕ ಪುಸ್ತಕಗಳಿಂದ ಹೊರಗಿಡಲಾಗುತ್ತದೆ, ಆದರೆ ಇವುಗಳ ವಸೂಲಿಯ ಪ್ರಯತ್ನ ಮುಂದುವರೆಯುತ್ತದೆ ಎಂದು ಸರ್ಕಾರ ಮತ್ತು ಬ್ಯಾಂಕ್‌ಗಳು ಹೇಳುತ್ತವೆ. ಆದರೆ ಇವು ಕೇವಲ ಸಬೂಬುಗಳು ಎಂಬುದನ್ನು ಅಂಕಿ–ಅಂಶಗಳೇ ಸಾಬೀತು ಮಾಡುತ್ತವೆ. ಇದಕ್ಕೆ ಮೊದಲು ವೇಳಂಕರ್ ಪಡೆದಿರುವ ಮಾಹಿತಿಯ ಪ್ರಕಾರ 2012–13ರಿಂದ 2019–20ರ ವರೆಗೆ ಕೆನರಾ ಬ್ಯಾಂಕ್ 47,310 ಕೋಟಿ ರೂ.ಗಳನ್ನು ಮನ್ನಾ ಮಾಡಿತ್ತು. ಮತ್ತು ಇದರಲ್ಲಿ ನಂತರ ವಸೂಲಿಯಾದದ್ದು ಕೇವಲ ರೂ.8901 ಕೋಟಿ, ಅಂದರೆ 19% ಮಾತ್ರ.

ಈ ದೊಡ್ಡ ಸುಸ್ತಿದಾರರು ಯಾರು, ಯಾರಿಂದ ಎಷ್ಟು ವಸೂಲಿ ಮಾಡಲಾಯಿತು ಎಂಬ ಬಗ್ಗೆ ಮಾಹಿತಿಯನ್ನು ಹಂಚಿಕೊಳ್ಳಲು ಬ್ಯಾಂಕ್ ನಿರಾಕರಿಸಿದೆ. ಅದಕ್ಕೆ ಕೊಟ್ಟಿರುವ ಕಾರಣ "ಅರ್ಜಿದಾರರು ಕೇಳಿದ ರೀತಿಯಲ್ಲಿ ಮಾಹಿತಿಗಳನ್ನು ಇಡಲಾಗುತ್ತಿಲ್ಲ"!

ಅಲ್ಲದೆ ವೈಯಕ್ತಿಕ ಗೌಪ್ಯತೆಯನ್ನು ಕಾಯ್ದುಕೊಳ್ಳಬೇಕಾದ ಷರತ್ತನ್ನು ಉಲ್ಲೇಖಿಸಲಾಗುತ್ತದೆ. ಆದರೆ "ಸಾಮಾನ್ಯ ಸಾಲಗಾರ ಸುಸ್ತಿ ಮಾಡಿದಾಗ, ಅದೇ ಬ್ಯಾಂಕ್‌ಗಳು ಅವನ ಹೆಸರು ಮತ್ತು ಎಲ್ಲಾ ವಿವರಗಳನ್ನು ಪತ್ರಿಕೆಗಳಲ್ಲಿ ಜಾಹೀರಾತುಗಳ ಮೂಲಕ ಪ್ರಕಟಿಸುತ್ತವೆ. ಸಾಮಾನ್ಯ ಸಾಲಗಾರರ ಹೆಸರನ್ನು ಪ್ರಕಟಿಸುವಾಗ ಈ 'ಗೌಪ್ಯತೆ'ಯ ಷರತ್ತು ಏಕೆ ಅನ್ವಯಿಸುವುದಿಲ್ಲ?" ಎಂದು ವೇಳಂಕರ್ ಕೇಳುತ್ತಾರೆ.


ಕೇಂದ್ರೀಯ ಮಾಹಿತಿ ಆಯೋಗದ (ಸಿಐಸಿ) 2020–21ರ ವಾರ್ಷಿಕ ವರದಿಯ ಪ್ರಕಾರ ಮಾಹಿತಿ ನಿರಾಕರಿಸಲು ಉಲ್ಲೇಖಿಸುವ ಆರ್‌ಟಿಐ ಕಾಯ್ದೆಯ ಸೆಕ್ಷನ್ 8 (1) ರ ಅಡಿಯಲ್ಲಿ 25,367 ಅರ್ಜಿಗಳನ್ನು (47.38%) ತಿರಸ್ಕರಿಸಲಾಗಿದೆ.

ಮಾಜಿ ಕೇಂದ್ರ ಮಾಹಿತಿ ಆಯುಕ್ತ (ಸಿಐಸಿ) ಮತ್ತು ಆರ್‌ಟಿಐ ಕಾರ್ಯಕರ್ತ ಶೈಲೇಶ್ ಗಾಂಧಿ ಅವರ ಪ್ರಕಾರ, ಈ ಷರತ್ತಿನ ತಪ್ಪಾದ ವ್ಯಾಖ್ಯಾನವು ನಿರಂತರವಾಗಿ ಮುಂದುವರಿಯುತ್ತಿದೆ.

ಪುಟ 14 ಕ್ಕೆ

ಮರುನಾಮಕರಣ

ಬೆಂಗಳೂರು–ಮೈಸೂರು ನಡುವೆ ಸಂಚರಿಸುವ 'ಟಿಪ್ಪು ಎಕ್ಸ್‌ಪ್ರೆಸ್' ಗೆ 'ಒಡೆಯರ್ ಎಕ್ಸ್‌ಪ್ರೆಸ್' ಎಂದು ಮರುನಾಮಕರಣ ಮಾಡಲಾಗಿದೆಯಂತೆ. ಅದನ್ನು ಪ್ರಾಯೋಜಿಸಿದವರಿಗೆ ಇನ್ನೊಬ್ಬ ವ್ಯಂಗ್ಯಚಿತ್ರಕಾರರ



ಕೃಪೆ: ಪಿ.ಮಹಮ್ಮದ್, ಫೇಸ್‌ಬುಕ್

ಪ್ರಶ್ನೆ–ಸಂಚರಿಸಲು ಆರಂಭಿಸಿದ ಕೆಲವೇ ಗಂಟೆಗಳಲ್ಲಿ ಹಸುಗಳು ಮತ್ತು ಎಮ್ಮೆಗಳಿಗೆ ಡಿಕ್ಕಿ ಹೊಡೆದ 'ವಂದೇಭಾರತ್' ರೈಲಿಗೆ 'ಟಿಪ್ಪು ಎಕ್ಸ್‌ಪ್ರೆಸ್' ಎಂದು ಮರುನಾಮಕರಣ ಮಾಡಿ ಎಂದು ಯಾವ ಸ್ವಾಮಿ ಅಥವ ಯೋಗಿಯೂ ಸಲಹೆ



ಕೃಪೆ: ಪೊನ್ನಪ್ಪ, ಫೆಡರಲ್.ಕಾಂ

ನೀಡಿಲ್ಲವೇ? ಅಷ್ಟೇ ಅಲ್ಲ, ಕಳೆದ 8 ವರ್ಷಗಳ ಅಚ್ಛೇ ದಿನ್‌ಗಳಲ್ಲಿ ಡಾಲರಿಗೆ ಎದುರಾಗಿ 45 ರಿಂದ 82ಕ್ಕೆ 'ಇಳಿದ' ರೂಪಾಯಿಗೆ ಮರುನಾಮಕರಣ ಮಾಡಬೇಕಾದ ಸಮಯವೀಗ ಬಂದಿದೆ ಎಂದೂ ಅವರು ಹೇಳುತ್ತಾರೆ.

ಲಾಭಗಳನ್ನು ಕಡಿತ ಮಾಡಿ, ಉದ್ಯೋಗಗಳನ್ನಲ್ಲ– ಬ್ರಿಟಿಷ್ ಕಾರ್ಮಿಕರ ಪ್ರತಿಭಟನೆ





ಯುರೋಪಿನಲ್ಲಿ ಹಣದುಬ್ಬರದ ನಾಗಾಲೋಟ

ಇದಕ್ಕೆ ಉಕ್ರೇನ್ ಯುದ್ಧದಿಂದಾಗಿ ಉಂಟಾದ ಇಂಧನ ಮತ್ತು ಆಹಾರ ಪದಾರ್ಥಗಳ ಕೊರತೆಯೇ ಕಾರಣ ಎನ್ನುವ ನಿರೂಪಣೆ ಸರಿಯಲ್ಲ. ಏಕೆಂದರೆ ಉಕ್ರೇನ್ ಯುದ್ಧಕ್ಕೆ ಮುಂಚಿತವಾಗಿಯೇ ಅದು ವೇಗವಾಗಿ ಏರುತ್ತಿತ್ತು. ಯುದ್ಧದ ಹಿನ್ನೆಲೆಯಲ್ಲಿ ಉಂಟಾದ ಕೊರತೆಗಳಾಗಲಿ, ರಷ್ಯಾದ ಮೇಲೆ ವಿಧಿಸಲಾದ ನಿರ್ಬಂಧಗಳಾಗಲಿ ಕಾರಣವಲ್ಲ, ಸರಕು–ಸಾಮಗ್ರಿಗಳ ಕೊರತೆಯ ನಿರೀಕ್ಷೆಯನ್ನು ಇಂಧನ ವ್ಯಾಪಾರಿಗಳು ತಮ್ಮ ಲಾಭದ ಅಂತರವನ್ನು ಯದ್ವಾ–ತದ್ವಾ ಹೆಚ್ಚಿಸಲು ಪರಿಸ್ಥಿತಿಯನ್ನು ಬಳಸಿಕೊಳ್ಳುತ್ತಿರುವುದು ಕಾರಣ. ಲಾಭಕ್ಕಾಗಿ ಹಪಹಪಿಸುವ ಅಮೇರಿಕನ್ ಮಿಲಿಟರಿ–ಕೈಗಾರಿಕಾ ಸಮೂಹದ ದುರಾಸೆ ಮತ್ತು "ನವ–ಸಂಪ್ರದಾಯಶರಣ" ಸಿದ್ಧಾಂತವು ಪ್ರೇರೇಪಿಸಿರುವ ಈ ಯುದ್ಧದಲ್ಲಿ ಯುರೋಪಿಯನ್ ಕಾರ್ಮಿಕರು ಬಲಿ ಪಶುಗಳಾಗುತ್ತಿದ್ದಾರೆ. ಇದರಿಂದಾಗಿ ಯೂರೋಪಿನ ಅನೇಕ ದೇಶಗಳಲ್ಲಿ ಕಾರ್ಮಿಕ ವರ್ಗವು ತನ್ನ ಪ್ರತಿರೋಧದ ಮಟ್ಟವನ್ನು ಎತ್ತರಿಸಿರುವುದರಲ್ಲಿ ಆಶ್ಚರ್ಯವೇನಿಲ್ಲ.

ಪ್ರೊ. ಪ್ರಭಾತ್ ಪಟ್ನಾಯಕ್
ಅನು: ಕೆ.ಎಂ. ನಾಗರಾಜ್

ಯುರೋ ವಲಯದ ವಾರ್ಷಿಕ ಹಣದುಬ್ಬರ ದರವು ಇದೇ ಮೊದಲ ಸಲ ಎರಡಂಕಿಯ ಮಟ್ಟವನ್ನು ದಾಟಿದೆ. 2022ರ ಅಗಸ್ಟ್‌ನಲ್ಲಿ ಶೇ. 9.1ರ ಮಟ್ಟದಲ್ಲಿದ್ದ ಹಣದುಬ್ಬರ ದರವು ಸೆಪ್ಟೆಂಬರ್‌ನಲ್ಲಿ ಶೇ. 10ಕ್ಕಿಂತಲೂ ಮೇಲಿದೆ. ಇಂಧನ ಮತ್ತು ಆಹಾರ ಬೆಲೆಗಳ ತೀವ್ರ ಏರಿಕೆಯಿಂದಾಗಿ ಹಣದುಬ್ಬರವು ನಾಗಾಲೋಟದಲ್ಲಿ ಏರುತ್ತಿದೆ. ಇಂಧನ ಬೆಲೆಗಳು ಶೇ.41ರಷ್ಟು ಮತ್ತು ಆಹಾರ ಪದಾರ್ಥಗಳ ಬೆಲೆಗಳು ಶೇ.13ರಷ್ಟು ಏರಿಕೆಯಾಗಿವೆ. ಇಂಧನ ಮತ್ತು ಆಹಾರ ಪದಾರ್ಥಗಳ ಬೆಲೆಗಳ ಏರಿಕೆ ಮಾತ್ರವೇ ಹಣದುಬ್ಬರವಾಗಲು ಕಾರಣವಲ್ಲ. ಇಂಧನ ಮತ್ತು ಆಹಾರ ಪದಾರ್ಥಗಳನ್ನು ಒಂದು ವೇಳೆ ಹಣದುಬ್ಬರದ ಲೆಕ್ಕಾಚಾರದಿಂದ ಹೊರಗಿಟ್ಟು ನೋಡಿದರೂ ಸಹ, ಉಳಿದ ಎಲ್ಲ ಸರಕುಗಳ ಹಣದುಬ್ಬರ ದರವು ಆಗಸ್ಟ್‌ನ ಶೇ. 5.5ರಿಂದ ಸೆಪ್ಟೆಂಬರ್‌ನಲ್ಲಿ ಶೇ. 6.1ಕ್ಕೆ ಏರಿದೆ. ಆಗಸ್ಟ್ ಮತ್ತು ಸೆಪ್ಟೆಂಬರ್ ನಡುವಿನ ಹಣದುಬ್ಬರ ದರದ ಮೂರನೇ ಎರಡರಷ್ಟು ಹೆಚ್ಚಳವು ಇಂಧನ ಮತ್ತು ಆಹಾರೇತರ ಸರಕುಗಳ ಕಾರಣದಿಂದಾಗಿತ್ತು. ಹಾಗಾಗಿ, ಉಕ್ರೇನ್ ಯುದ್ಧದಿಂದಾಗಿ ಉಂಟಾದ ಇಂಧನ ಮತ್ತು ಆಹಾರ ಪದಾರ್ಥಗಳ ಕೊರತೆಯೇ ಹಣದುಬ್ಬರದ ವೇಗೋತ್ಕರ್ಷಕ್ಕೆ ಕಾರಣ ಎನ್ನುವ ನಿರೂಪಣೆ ಸರಿಯಲ್ಲ.

ಇತರ ಎರಡು ಕಾರಣಗಳಿಂದಾಗಿಯೂ ಈ ನಿರೂಪಣೆ ಅಸತ್ಯವೇ. ಮೊದಲನೆಯದಾಗಿ, ಹಣದುಬ್ಬರವು ಉಕ್ರೇನ್ ಯುದ್ಧಕ್ಕೆ ಮುಂಚಿತವಾಗಿಯೇ ವೇಗವಾಗಿ ಏರುತ್ತಿತ್ತು. ಹಿಂದಿನ ವರ್ಷಕ್ಕೆ (2021ಕ್ಕೆ) ಹೋಲಿಸಿದರೆ, ವಾರ್ಷಿಕ ಹಣದುಬ್ಬರ ದರವು 2017ರಲ್ಲಿ 1.3%, 2018ರಲ್ಲಿ 1.5%, 2019ರಲ್ಲಿ 1.3% ಮತ್ತು 2020ರಲ್ಲಿ –0.3% ಇತ್ತು. ಉಕ್ರೇನ್ ಯುದ್ಧ ಪ್ರಾರಂಭವಾಗುವ ಮೊದಲೇ (ಅಂದರೆ, 2021ರಲ್ಲೇ) ಹಣದುಬ್ಬರವು 5%ಗೆ ಏರಿತ್ತು. ಎರಡನೆಯದಾಗಿ, ಉಕ್ರೇನ್ ಯುದ್ಧಕ್ಕೂ ಮೊದಲೇ ಇದ್ದ ಹಣದುಬ್ಬರದ ಈ ವೇಗೋತ್ಕರ್ಷವು, ಯಾವುದೇ ಸರಕುಗಳ ನೈಜ ಕೊರತೆಯ ಕಾರಣದಿಂದ ಆದದ್ದಲ್ಲ. ಕೋವಿಡ್–19 ಪರಿಣಾಮವಾಗಿ ನಿಶ್ಚಲಗೊಂಡ ಬಂಡವಾಳಶಾಹಿ ಅರ್ಥವ್ಯವಸ್ಥೆಯು ಜಾಗತಿಕವಾಗಿ ಯಥಾ ಸ್ಥಿತಿಗೆ ಮರಳುತ್ತಿದ್ದಂತೆಯೇ, ಈ ನಿಶ್ಚಲತೆಯ ಪರಿಣಾಮವಾಗಿ ಸಂಭವಿಸಬಹುದಾದ ಕೊರತೆಗಳ ನಿರೀಕ್ಷೆಯಲ್ಲಿ ಲಾಭದ–ಅಂತರ ಹೆಚ್ಚಿತು. ಹಾಗಾಗಿ, ಬೆಲೆಗಳೂ ಹೆಚ್ಚಿದವು. ಈಗ ಸಂಭವಿಸುತ್ತಿರುವ ಹಣದುಬ್ಬರದ ವೇಗವರ್ಧನೆಗೆ ಯುದ್ಧದಿಂದ ಉಂಟಾದ ಕೊರತೆಗಳಾಗಲಿ ಅಥವಾ ಯುದ್ಧದ ಹಿನ್ನೆಲೆಯಲ್ಲಿ ರಷ್ಯಾದ ಮೇಲೆ ವಿಧಿಸಲಾದ ನಿರ್ಬಂಧಗಳಾಗಲಿ ಕಾರಣವಲ್ಲ. ಸರಕು–ಸಾಮಗ್ರಿಗಳ ಕೊರತೆಯ ನಿರೀಕ್ಷೆಯಲ್ಲಿ ಲಾಭದ–ಅಂತರವನ್ನು ಹೆಚ್ಚಿಸಲಾದ ಪರಿಣಾಮವಾಗಿ ಬೆಲೆಗಳು ಹೆಚ್ಚುತ್ತಿವೆ. ಈ ಕಾರಣದಿಂದಾಗಿ ಹಣದುಬ್ಬರವು ವೇಗೋತ್ಕರ್ಷ ಪಡೆದಿದೆ.

ನಿಜ ಕಾರಣ

ಈ ಉದಾಹರಣೆಯು ಹಣದುಬ್ಬರದ ವೇಗೋತ್ಕರ್ಷದ ಕಾರಣವನ್ನು ಸ್ಪಷ್ಟಪಡಿಸುತ್ತದೆ: ವಿದ್ಯುತ್ತಿನ ಏರುತ್ತಿರುವ ಖರ್ಚುಗಳಿಂದಾಗಿ ಸ್ಲೋವಾಕಿಯಾದ ಅರ್ಥವ್ಯವಸ್ಥೆಯು "ಕುಸಿತದ" ಅಂಚಿನಲ್ಲಿದೆ ಎಂಬುದಾಗಿ ಆ ದೇಶದ ಪ್ರಧಾನ ಮಂತ್ರಿಯು ಜನರನ್ನು ಎಚ್ಚರಿಸಿದ್ದರು. ದೇಶದ ವಿದ್ಯುತ್ ಪೂರೈಕೆಯನ್ನು ರಾಷ್ಟ್ರೀಕರಣಗೊಳಿಸುವುದಾಗಿ ಅವರು ಬೆದರಿಕೆ ಹಾಕಿದ್ದರು ಎಂದು ಸೆಪ್ಟೆಂಬರ್ 28ರ ಫೈನಾನ್ಷಿಯಲ್ ಟೈಮ್ಸ್ ವರದಿ ಮಾಡಿದೆ. ಈ ಬೆದರಿಕೆ ಹಾಕಿದ ಕಾರಣವೆಂದರೆ, ಆ ದೇಶದ ಅತಿ ದೊಡ್ಡ ಇಂಧನ ಪೂರೈಕೆ ಸಂಸ್ಥೆಯು ತನ್ನ ಹೆಚ್ಚುವರಿ ವಿದ್ಯುತ್‌ಅನ್ನು ಇಂಧನ ವ್ಯಾಪಾರಿಗಳಿಗೆ ಮಾರಾಟ ಮಾಡುವುದಾಗಿ ಈ ವರ್ಷದ ಆರಂಭದಲ್ಲಿ ನಿರ್ಧರಿಸಿತ್ತು. ಈಗ, ಈ ವ್ಯಾಪಾರಿಗಳು ವಿದ್ಯುತ್‌ಅನ್ನು ಐದು ಪಟ್ಟು ಹೆಚ್ಚು ಬೆಲೆಗೆ ಮಾರಾಟ ಮಾಡಲು ಸ್ಲೋವಾಕಿಯಾದ ಸರ್ಕಾರದೊಂದಿಗೆ ಒಪ್ಪಂದ ಮಾಡಿಕೊಳ್ಳಲು ಮುಂದಾಗಿದ್ದಾರೆ. ವಿಷಯವೆಂದರೆ, ಈ ಅವಧಿಯಲ್ಲಿ ವಿದ್ಯುತ್ ಉತ್ಪಾದನೆಯ ವೆಚ್ಚ ಸುಮಾರು ಐದು ಪಟ್ಟು ಹೆಚ್ಚಾಗಿದೆ ಎಂದಲ್ಲ. ಸಂಗತಿ ಏನೆಂದರೆ, ಇಂಧನ ವ್ಯಾಪಾರಿಗಳು ತಮ್ಮ ಲಾಭದ ಅಂತರವನ್ನು ಯದ್ವಾ–ತದ್ವಾ ಹೆಚ್ಚಿಸುವ ಉದ್ದೇಶಕ್ಕಾಗಿ ಪರಿಸ್ಥಿತಿಯನ್ನು ಬಳಸಿಕೊಳ್ಳುತ್ತಿದ್ದಾರೆ.

ಚಳಿಗಾಲ ಸಮೀಪಿಸುತ್ತಿರುವಾಗ ಹಣದುಬ್ಬರದ ಈ ವೇಗೋತ್ಕರ್ಷವು ಮುಂದುವರಿಯಲಿದೆ. ಮುಂಬರುವ ತಿಂಗಳುಗಳಲ್ಲಿ ಯುರೋಪಿಯನ್ ಒಕ್ಕೂಟದಲ್ಲಿ ಹಣದುಬ್ಬರವು 20% ತನಕ ಏರಬಹುದು ಎಂದು ಕೆಲವರು ಭವಿಷ್ಯ ನುಡಿದಿದ್ದಾರೆ. ಕಾರಣವೆಂದರೆ, ಮೂರನೇ ವಿಶ್ವದ ಅನೇಕ ದೇಶಗಳ ಕರೆನ್ಸಿಗಳ ರೀತಿಯಲ್ಲಿ, ಯುರೋ ಕರೆನ್ಸಿಯೂ ಸಹ ಡಾಲರ್ ವಿರುದ್ಧ ಕುಸಿಯುತ್ತಿದೆ. ಇಂಧನದ ಅಂತಾರಾಷ್ಟ್ರೀಯ ಬೆಲೆಗಳನ್ನು ಡಾಲರ್ ಕರೆನ್ಸಿಯಲ್ಲಿ ನಿಗದಿಪಡಿಸಲಾಗಿರುವುದರಿಂದ ಯುರೋ ಕರೆನ್ಸಿಯ ಕುಸಿತದಿಂದಾಗಿ ಯುರೋಪಿನ ದೇಶಗಳಲ್ಲಿ ಇಂಧನದ ಬೆಲೆಗಳು ಮತ್ತಷ್ಟು ಏರುತ್ತವೆ. ರಷ್ಯಾದಿಂದ ಪಶ್ಚಿಮ ಯೂರೋಪಿಗೆ ಸರಬರಾಜಾಗುವ ಅನಿಲದ ನಾರ್ಡ್ ಸ್ಟ್ರೀಮ್ 1 ಕೊಳವೆಯನ್ನು ಸ್ಫೋಟಿಸಲಾಗಿದೆ. ಇದು ಅಮೆರಿಕಾದ ಕೈವಾಡವೇ ಎಂದು ಅನೇಕರು ನಂಬುತ್ತಾರೆ. ಅಮೆರಿಕ ಇದನ್ನು ಒಂದು "ಅದ್ಭುತ ಅವಕಾಶ"ವೆಂದು ಪರಿಗಣಿಸಿರುವುದು ಗಮನಾರ್ಹವಾಗಿದೆ. ಅನಿಲದ ಪೂರೈಕೆಯನ್ನು ಪುನರಾರಂಭಿಸುವ ಬಗ್ಗೆ ಉಭಯ ಪಕ್ಷಗಳು ಶೀಘ್ರದಲ್ಲೇ ಒಂದು ಒಪ್ಪಂದಕ್ಕೆ ಬಂದರೂ ಸಹ, ಅದರ ಅನುಷ್ಠಾನವು ನಿಧಾನವಾಗಬಹುದು. ಈ ಹಿನ್ನೆಲೆಯಲ್ಲಿ, ಯುರೋಪಿಯನ್ ಸೆಂಟ್ರಲ್ ಬ್ಯಾಂಕ್ ಅಕ್ಟೋಬರ್ 27 ರಂದು ನಡೆಯಲಿರುವ ತನ್ನ ಮುಂಬರುವ ಸಭೆಯಲ್ಲಿ ಹಣದುಬ್ಬರವನ್ನು ಎದುರಿಸುವ ಸಾಧನವಾಗಿ ಬಡ್ಡಿದರಗಳನ್ನು ಮತ್ತಷ್ಟು ಹೆಚ್ಚಿಸುವ ನಿರೀಕ್ಷೆಯು ಸಾಮಾನ್ಯವಾಗಿದೆ.

ಹಣದುಬ್ಬರ–ಬಡ್ಡಿ ದರ ಮತ್ತು ನಿರುದ್ಯೋಗ

ಆದರೆ, ಹಣದುಬ್ಬರವನ್ನು ಎದುರಿಸುವಲ್ಲಿ ಬಡ್ಡಿ ದರದ ಏರಿಕೆಯು ಹೇಗೆ ನೆರವಾಗುತ್ತದೆ ಎಂಬ ಪ್ರಶ್ನೆಯನ್ನು ಕೇಳಬೇಕಾಗುತ್ತದೆ. ಯುರೋಪಿಯನ್ ಸೆಂಟ್ರಲ್ ಬ್ಯಾಂಕಿನ ಅಧ್ಯಕ್ಷೆ ಕ್ರಿಸ್ಟೀನ್ ಲಗಾರ್ಡ್, ಹಣದುಬ್ಬರದ ನಿರೀಕ್ಷೆಗಳನ್ನು ಹುಸಿಗೊಳಿಸಲು ಬಡ್ಡಿ ದರ ಏರಿಕೆಯ ಕ್ರಮ ಅಗತ್ಯವೆಂದು ಹೇಳುತ್ತಾರೆ. ಇದು ನಿಜವೂ ಹೌದು. ಹಣದುಬ್ಬರವನ್ನು ಬಹುಮಟ್ಟಿಗೆ ನಿಗ್ರಹಿದಾಗ ಮಾತ್ರ ಹಣದುಬ್ಬರದ ನಿರೀಕ್ಷೆಗಳನ್ನು ಹುಸಿಗೊಳಿಸಬಹುದು ಎಂಬುದು ನಿಜವೇ. ಆದರೆ, ಇಲ್ಲಿರುವ ಪ್ರಶ್ನೆ ಎಂದರೆ, ವಾಸ್ತವವಾಗಿ ಇದು ಆಗುವುದಾದರೂ ಹೇಗೆ? ಈ ಪ್ರಶ್ನೆಗೆ ಸರಳ ಉತ್ತರವೆಂದರೆ: ನಿರುದ್ಯೋಗವನ್ನು ಸೃಷ್ಟಿಸುವ ಮೂಲಕ. ನಿರುದ್ಯೋಗವು ಶ್ರಮಶಕ್ತಿಯ ಮೇಲಿನ ಬೇಡಿಕೆಯನ್ನು ಇಳಿಸುತ್ತದೆ ಮತ್ತು ಶ್ರಮಶಕ್ತಿಯ ಇಳಿಕೆಗೆ ಕಾರಣವೂ ಆಗುತ್ತದೆ. ಹೇಗೆಂದರೆ, ಬಡ್ಡಿ ದರ ಏರಿಕೆಯು ಅರ್ಥವ್ಯವಸ್ಥೆಯಲ್ಲಿ ಹೂಡಿಕೆಯನ್ನು ತಗ್ಗಿಸುತ್ತದೆ ಮತ್ತು ಆ ಮೂಲಕವಾಗಿ ಶ್ರಮಶಕ್ತಿಯ ಮೇಲಿನ ಬೇಡಿಕೆಯನ್ನು ಇಳಿಸುತ್ತದೆ, ಮತ್ತು, ನಿರುದ್ಯೋಗವು ದುಡಿಯುವ ವರ್ಗದ ಕೈಯಲ್ಲಿನ ಕೊಳ್ಳುವ ಶಕ್ತಿಯನ್ನು ಕಡಿಮೆ ಮಾಡುವ ಮೂಲಕ ಶ್ರಮಶಕ್ತಿಯ ಮೇಲಿನ ಬೇಡಿಕೆಯ ಇಳಿಕೆಗೆ ಕಾರಣವಾಗುತ್ತದೆ. ಅದರಿಂದಾಗಿ, ಶ್ರಮಶಕ್ತಿಯೂ ಸೇರಿದಂತೆ ಎಲ್ಲಾ ರೀತಿಯ ಸರಕುಗಳು ಮತ್ತು ಸೇವೆಗಳಿಗೆ ಬೇಡಿಕೆ ಕಡಿಮೆಯಾಗುತ್ತದೆ. ಹೀಗೆ, ಶ್ರಮಶಕ್ತಿಯ ಮೇಲಿನ ಬೇಡಿಕೆಯ ಇಳಿಕೆಯು ನಿರುದ್ಯೋಗ ಹೆಚ್ಚಳದ ಇನ್ನೊಂದು ಮಗ್ಗುಲೇ ಆಗಿರುತ್ತದೆ. ಹಣದುಬ್ಬರದ ನಿರೀಕ್ಷೆಗಳನ್ನು ಈ ರೀತಿಯಲ್ಲಿ ಎದುರಿಸಲಾಗುತ್ತದೆ ಎಂಬುದನ್ನು ಕ್ರಿಸ್ಟೀನ್ ಲಗಾರ್ಡ್ ಒಪ್ಪಿಕೊಳ್ಳುತ್ತಾರೆ ಮತ್ತು ಈ ಕ್ರಮವು ಸಂಸ್ಥೆಗಳು ಹಣದುಬ್ಬರದ ನಿರೀಕ್ಷೆಯ ಮೇಲೆ ಲಾಭದ ಅಂತರವನ್ನು ಹೆಚ್ಚಿಸುವುದನ್ನು ತಡೆಯುತ್ತದೆ ಎಂದು ನಂಬುತ್ತಾರೆ.

ಹಣದುಬ್ಬರವನ್ನು ಕಡಿಮೆ ಮಾಡುವಲ್ಲಿ ನಿರುದ್ಯೋಗವು ಇನ್ನೂ ಒಂದು ರೀತಿಯ ಪರಿಣಾಮ ಬೀರುತ್ತದೆ. ನಿರುದ್ಯೋಗದ ಮೊದಲ ಪರಿಣಾಮವು, ವೇತನವು ಯಾವುದೇ ನಿರ್ದಿಷ್ಟ ಮಟ್ಟದಲ್ಲಿದ್ದರೂ ಸಹ ಕಾರ್ಮಿಕರ ಕೈಯಲ್ಲಿ ಕೊಳ್ಳುವ ಶಕ್ತಿಯನ್ನು ಕಡಿಮೆಮಾಡುವ ಮೂಲಕ ಕಾರ್ಯನಿರ್ವಹಿಸಿದರೆ, ಎರಡನೆಯದು ವೇತನದ ದರವನ್ನು ಇಳಿಸುವ ಮೂಲಕ ಕಾರ್ಮಿಕರ ಕೊಳ್ಳುವ ಶಕ್ತಿಯನ್ನು ಕಡಿಮೆ ಮಾಡುವ ಕಾರ್ಯನಿರ್ವಹಿಸುತ್ತದೆ. ಬೆಲೆಗಳು ಏರುತ್ತಿರುವ ಕಾಲದಲ್ಲಿ ಕಾರ್ಮಿಕರ ಚೌಕಾಶಿಯ ಶಕ್ತಿಯನ್ನು ದುರ್ಬಲಗೊಳಿಸಿರುವುದನ್ನು ಖಚಿತಪಡಿಸಿಕೊಂಡ ನಂತರ ಬೆಲೆಗಳು ಏರಿದ ಮಟ್ಟಕ್ಕೆ ಸರಿ–ಸಮನಾಗುವಷ್ಟು ಹಣ–ವೇತನವನ್ನು ಅವರಿಗೆ ಕೊಡುವುದಿಲ್ಲ.

ಈ ಎರಡೂ ಪರಿಣಾಮಗಳೂ ಒಟ್ಟಾಗಿ ಸೇರಿಕೊಳ್ಳುತ್ತವೆ ಮತ್ತು ಅದರ ನಿವ್ವಳ ಫಲಿತಾಂಶವೆಂದರೆ ಹಣದುಬ್ಬರದ ಒತ್ತಡಗಳನ್ನು ನಿರುದ್ಯೋಗದ ಹೆಚ್ಚಳದ ಮೂಲಕ ಎದುರಿಸಲಾಗುತ್ತದೆ ಮತ್ತು ಅದರಿಂದಾಗಿ ಕೊಳ್ಳುವ ಶಕ್ತಿಯು ಕಡಿತಗೊಳ್ಳುತ್ತದೆ. ಇದುವೇ ಹಣದುಬ್ಬರವನ್ನು ಎದುರಿಸುವ ಬಂಡವಾಳಶಾಹಿಯ ಮಾರ್ಗ. ಇದು ದುಡಿಯುವ ವರ್ಗವನ್ನು ಅನಿವಾರ್ಯವಾಗಿ ತೊಂದರೆಗಳಿಗೆ ಒಡ್ಡುತ್ತದೆ. ಹಣದುಬ್ಬರವನ್ನು ಎದುರಿಸುವ ಈ ವಿಧಾನದ ಬಗ್ಗೆ ಯಾವ ನಿಗೂಢತೆಯೂ ಇಲ್ಲ ಅಥವಾ ಅದು ಅನಿವಾರ್ಯವೂ ಅಲ್ಲ. ನಿಜ–ವೇತನದ ಕಡಿತವು ಹಣದುಬ್ಬರವನ್ನು ಹೇಗೆ ಎದುರಿಸುತ್ತದೆ ಎಂಬುದರ ಬಗ್ಗೆ ಪುಟ 14 ಕ್ಕೆ

ಹೆಣ್ಣು ಮಕ್ಕಳ ಶಿಕ್ಷಣದ ಹಕ್ಕು ಮತ್ತು ಮೂಲಭೂತ ಹಕ್ಕುನ್ನು ಹೊಂದಿರುತ್ತಾರೆ

ಆಯ್ಕೆಯ ಹಕ್ಕಿನ ಸ್ವಾತಂತ್ರ್ಯವನ್ನು ಎತ್ತಿ ಹಿಡಿದಂತಾಗಿದೆ

ಶಿರವಸ್ತ್ರ ವಿವಾದಕ್ಕೆ ಸಂಬಂಧಿಸಿದಂತೆ ಕರ್ನಾಟಕ ಹೈ ಕೋರ್ಟ್ ನೀಡಿದ್ದ ತೀರ್ಪಿನ ಮೇಲ್ಮನವಿಯ ವಿಚಾರಣೆ ನಡೆಸಿದ ಸುಪ್ರೀಂ ಕೋರ್ಟ್ ನ ದ್ವಿ ಸದಸ್ಯ ಪೀಠದ ಭಿನ್ನ ಮತದ ತೀರ್ಪು ಹೊರಬಿದ್ದಿದೆ. ಮತ್ತು ಅದನ್ನು ವಿಸ್ತ್ರತ ಪೀಠಕ್ಕೆ ಕೊಡಲು ಮುಖ್ಯ ನ್ಯಾಯಾಧೀಶರಿಗೆ ದ್ವಿಸದಸ್ಯ ಪೀಠ ಕೋರಿದೆ.

ಇದರಲ್ಲಿ ಮಹಿಳೆಯರ ಶಿಕ್ಷಣದ ಹಕ್ಕನ್ನು ಎತ್ತಿ ಹಿಡಿದ ಮಾನ್ಯ ನ್ಯಾಯಮೂರ್ತಿ ಸುಧಾಂಶು ಧುಲಿಯಾರವರ ಅಭಿಪ್ರಾಯವನ್ನು ಅಖಿಲ ಭಾರತ ಜನವಾದಿ ಮಹಿಳಾ ಸಂಘಟನೆ ಸ್ವಾಗತಿಸುತ್ತದೆ.

ಹೆಣ್ಣು ಮಗುವಿಗೆ ಮನೆಯೊಳಗೆ ಅಥವಾ ಮನೆಯ ಹೊರಗೆ ಹಿಜಾಬ್ ಧರಿಸಲು ಅಧಿಕಾರ ಇದೆ. ಆ ಹಕ್ಕು ಶಾಲೆಯ ದ್ವಾರದ ಬಳಿ ಮೊಟಕುಗೊಳ್ಳುವುದಿಲ್ಲ ಎಂದು ಸುಪ್ರೀಂ ಕೋರ್ಟ್ ನ ನ್ಯಾಯಮೂರ್ತಿ ಸುಧಾಂಶು ದುಲಿಯಾರವರು ಹೇಳಿದ ಮಾತು ಜನವಾದಿಯ ಅಭಿಪ್ರಾಯವನ್ನು ದೃಡೀಕರಿಸಿದಂತಾಗುತ್ತದೆ.

ನಮ್ಮ ರಾಜ್ಯದಲ್ಲಿ ಶಿಕ್ಷಣ ಸಂಸ್ಥೆಗಳಲ್ಲಿ ಶಿರವಸ್ತ್ರ ಮತ್ತು ಸಮವಸ್ತ್ರದ ಹೆಸರಿನಲ್ಲಿ ಎದ್ದ ವಿವಾದ ಸುಪ್ರೀಂ ಕೋರ್ಟ್ ನ ಮೆಟ್ಟಿಲೇರಿ ಹತ್ತು ತಿಂಗಳ ನಂತರ ಹೆಣ್ಣು ಮಕ್ಕಳು ಶಿಕ್ಷಣದ ಹಕ್ಕು ಮತ್ತು ಮೂಲಭೂತ ಹಕ್ಕುನ್ನು ಹೊಂದಿರುತ್ತಾರೆ ಎಂಬ ತೀರ್ಪು ನೀಡುವ ಮೂಲಕ ಆಯ್ಕೆಯ ಹಕ್ಕಿನ ಸ್ವಾತಂತ್ರ್ಯವನ್ನು ಎತ್ತಿ ಹಿಡಿದಂತಾಗಿದೆ. ಇದನ್ನು ಅಖಿಲ ಭಾರತ ಜನವಾದಿ ಮಹಿಳಾ ಸಂಘಟನೆ ಸ್ವಾಗತಿಸಿದೆ.

ಸರ್ಕಾರ ಮತ್ತು ಶಿಕ್ಷಣ ಸಂಸ್ಥೆಗಳು ಹಿಜಾಬ್ ವಿವಾದದ ಹಿನ್ನಲೆಯಲ್ಲಿ ಮುಸ್ಲಿಂ ವಿದ್ಯಾರ್ಥಿನಿಯರನ್ನು ಪರೀಕ್ಷೆಗೆ ಕೂರಿಸದೆ ನಿರಾಕರಿಸಿರುವುದನ್ನು ಸುಪ್ರೀಂ ಕೋರ್ಟ್ ನ ನ್ಯಾಯಮೂರ್ತಿಗಳು ಶಾಲೆಯ ಗೇಟ್ ಪ್ರವೇಶಿಸುವ ಮುನ್ನ ಶಿರವಸ್ತ್ರ ತೆಗೆಯುವಂತೆ ಹೇಳುವುದು ಆಕೆಯ ಘನತೆಯ ಹಕ್ಕಿನ ಮೇಲಿನ ದಾಳಿ ಮಾತ್ರವಲ್ಲ ಜಾತ್ಯತೀತ ಶಿಕ್ಷಣದಿಂದ ವಂಚಿತರನ್ನಾಗಿ ಮಾಡಲಾಗುತ್ತಿದೆ ಎಂದು ಅಭಿಪ್ರಾಯಪಟ್ಟಿದ್ದಾರೆ ಅಲ್ಲದೇ ಇದು ಸಂವಿಧಾನದ ಪರಿಚ್ಛೇದ 19 (1) (ಎ) ರ ಅಭಿವ್ಯಕ್ತಿ ಸ್ವಾತಂತ್ರ್ಯ, ಪರಿಚ್ಛೇದ 21 ರ ಜೀವಿಸುವ ಹಕ್ಕು ಮತ್ತು ಪರಿಚ್ಛೇದ 25(1) ರ ಧಾರ್ಮಿಕ ಆಚರಣೆ ಹಕ್ಕುಗಳ ಸ್ಪಷ್ಟ ಉಲ್ಲಂಘನೆ ಆಗಿದೆಯಂತಲೂ ಸ್ಪಷ್ಟ ಪಡಿಸಿರುತ್ತಾರೆ.

ಈ ಪ್ರಕರಣವನ್ನು ವಿಸ್ತೃತ ಪೀಠಕ್ಕೆ ವರ್ಗಾಯಿಸಲಾಗಿದೆ. ವಿಸ್ತ್ರತ ಪೀಠವು ಮಳೆಯರ ಶಿಕ್ಷಣದ ಮೂಲ ಭೂತ ಹಕ್ಕನ್ನು ಮತ್ತು ಆಯ್ಕೆಯ ಹಕ್ಕನ್ನು ರಕ್ಷಿಸುವ ನೆಲೆಯಲ್ಲಿ ಬರುತ್ತದೆ ಎಂಬ ಆಶಾದಾಯಕವಾದ ನಿರೀಕ್ಷೆಯನ್ನು ಅಖಿಲ ಭಾರತ ಜನವಾದಿ ಮಹಿಳಾ ಸಂಘಟನೆ ಹೊಂದಿರುತ್ತದೆ ಎಂದಿದೆ.

ಯುರೋಪಿನಲ್ಲಿ ಹಣದುಬ್ಬರದ ನಾಗಾಲೋಟ

ಪುಟ 13 ರಿಂದ

ವಿವರಣೆಯೇ ಇಲ್ಲ. ಆದರೂ, ಅದು ಹೇಗೋ ಏನೋ, ಬಡ್ಡಿ ದರ ಏರಿಕೆಯು ಹಣದುಬ್ಬರದ ಮೇಲೆ ನೇರ ಪರಿಣಾಮ ಬೀರುತ್ತದೆ ಎಂದು ಸೋಗು ಹಾಕುವ ಮೂಲಕ ಈ ಪ್ರಕ್ರಿಯೆಗೆ ಒಂದು ನಿಗೂಢತೆಯ ವೇಷವನ್ನು ತೊಡಿಸಲಾಗಿದೆ ಮತ್ತು ಹಣದುಬ್ಬರವನ್ನು ಎದುರಿಸಲು ಎಲ್ಲ ದೇಶಗಳೂ ಈ ವಿಧಾನವನ್ನೇ ಬಳಸಬೇಕಾಗುತ್ತದೆ ಎಂಬ ಸುಳ್ಳು ಹೇಳಿಕೆಯ ಮೂಲಕ ಈ ಪ್ರಕ್ರಿಯೆಯೊಂದಿಗೆ ಒಂದು ಅನಿವಾರ್ಯತೆಯನ್ನು ಜೋಡಿಸಲಾಗಿದೆ. ಅದೇನೇ ಇರಲಿ, ಈ ನಿಗೂಢತೆಯು ಬಹಿರಂಗವಾದ ಕೂಡಲೇ ಬಡ್ಡಿ ದರದ ಏರಿಕೆಯು ಹೊಂದಿರುವ ಸಾಮರ್ಥ್ಯವು ಅದರ ಕಾರ್ಯವಿಧಾನದಲ್ಲಿ ನಿರುದ್ಯೋಗ ಸೃಷ್ಟಿಯನ್ನು ಒಳಗೊಂಡಿದೆ ಎಂಬುದು ಕಂಡುಬರುತ್ತದೆ. ಒಂದು ಸಮಾಜವಾದಿ ಅರ್ಥವ್ಯವಸ್ಥೆಯಲ್ಲಿ, ಅಥವಾ ನಿರುದ್ಯೋಗದ ಏರಿಕೆಯನ್ನು ತಡೆಗಟ್ಟಲು ಉತ್ಸುಕವಾಗಿರುವ ಮೂರನೇ ವಿಶ್ವದ ನಿಯಂತ್ರಣ ನೀತಿಯ (dirigiste) ಅರ್ಥವ್ಯವಸ್ಥೆಯಲ್ಲಿಯೂ ಸಹ, ಬೆಲೆ-ನಿಯಂತ್ರಣ ಮತ್ತು ಸರಕುಗಳ ಪಡಿತರಗಳ ಸಂಯೋಜನೆಯೊಂದಿಗೆ ಹಣದುಬ್ಬರವನ್ನು ನಿಯಂತ್ರಿಸಬಹುದು ಎಂಬುದು ಸ್ಪಷ್ಟವಾಗುತ್ತದೆ.

ಯುರೋಪಿಯನ್ ಕಾರ್ಮಿಕ ವರ್ಗ –ಸಂಕಷ್ಟ ಮತ್ತು ಪ್ರತಿರೋಧ

ಒಂದು ಗಂಭೀರ ಹಣದುಬ್ಬರದೊಂದಿಗೆ ಹೆಣಗಾಡುತ್ತಿರುವ ಯೂರೋಪ್, ಒಂದು ಬಂಡವಾಳಶಾಹಿ ಅರ್ಥವ್ಯವಸ್ಥೆಯು ಹಣದುಬ್ಬರವನ್ನು ನಿಯಂತ್ರಿಸುವ ಏಕ ಮಾತ್ರ ರೀತಿಯಲ್ಲಿ, ಅಂದರೆ, ಕಾರ್ಮಿಕರನ್ನು ತೊಂದರೆಗಳಿಗೆ ದೂಡಿ, ದುಡಿಯುವ ವರ್ಗವನ್ನು ಹಿಂಡುವ ಮೂಲಕ ನಿಯಂತ್ರಿಸಲು ಪ್ರಯತ್ನಿಸುತ್ತಿದೆ. ಯುಕ್ರೇನ್ ಯುದ್ಧದ ಮುಂದುವರಿಕೆಯ ಭಾಗವಾಗಿ, ಅಮೆರಿಕದ ಅಪ್ಪಣೆಯ ಮೇರೆಗೆ ರಷ್ಯಾದ ಮೇಲೆ ಹೇರಿದ ನಿರ್ಬಂಧಗಳಿಂದಾಗಿ ಯುರೋಪಿನಲ್ಲಿ ಇತ್ತೀಚೆಗೆ ಹಣದುಬ್ಬರವು ವೇಗವರ್ಧನೆ ಪಡೆದಿರುವುದರಿಂದಾಗಿ, ಯುರೋಪಿಯನ್ ಕಾರ್ಮಿಕ ವರ್ಗವನ್ನು ಸಂಕಷ್ಟಗಳಿಗೆ ತಳ್ಳಿರುವ ಅಮೆರಿಕವೇ ರಷ್ಯಾದ ವಿರುದ್ಧ ಯುದ್ಧದಲ್ಲಿ ತೊಡಗಿದೆ ಎಂಬುದನ್ನು ಔಚಿತ್ಯಪೂರ್ಣವಾಗಿ ಹೇಳಬಹುದು. ಸಂಕ್ಷಿಪ್ತವಾಗಿ ಹೇಳುವುದಾದರೆ, ಅಮೆರಿಕದ ಬೃಹತ್-ಸಾಮ್ರಾಜ್ಯಶಾಹಿಯ ಪೋಷಣೆಯ ಉದ್ದೇಶ ಹೊಂದಿದ ಈ ಯುದ್ಧದಲ್ಲಿ ಯುರೋಪಿಯನ್ ಕಾರ್ಮಿಕರು ಬಲಿ ಪಶುಗಳಾಗುತ್ತಿದ್ದಾರೆ. ಲಾಭಕ್ಕಾಗಿ ಹಪಹಪಿಸುವ ಅಮೇರಿಕನ್ ಮಿಲಿಟರಿ-ಕೈಗಾರಿಕಾ ಸಮೂಹದ ದುರಾಸೆ ಮತ್ತು "ನವ-ಸಂಪ್ರದಾಯಶರಣ" ಸಿದ್ಧಾಂತವು ಈ ಯುದ್ಧಕ್ಕೆ ಹೆಚ್ಚು ಪ್ರೇರಣೆಯನ್ನು ಒದಗಿಸಿರುವುದು ಸಹಜವೇ. ಉಕ್ರೇನ್‌ಗೆ ನ್ಯಾಟೋ-ಸದಸ್ಯತ್ವ ನೀಡುವ ಅಮೆರಿಕದ ಪ್ರಸ್ತಾಪದ ಬಗ್ಗೆ ಹೆನ್ರಿ ಕಿಸಿಂಜರ್ ಅವರಂತಹ ಒಬ್ಬ ವ್ಯಕ್ತಿ ಕೂಡ "ಅದು ಬುದ್ಧಿವಂತಿಕೆಯಲ್ಲ" ಎಂದು ಹೇಳಿರುವುದು ಗಮನಾರ್ಹವಾಗಿದೆ.

ಈ ಎಲ್ಲ ಬೆಳವಣಿಗೆಗಳ ಬಗ್ಗೆ ಯೂರೋಪಿನ ಅನೇಕ ದೇಶಗಳಲ್ಲಿ ಕಾರ್ಮಿಕ ವರ್ಗವು ತನ್ನ ಪ್ರತಿರೋಧದ ಮಟ್ಟವನ್ನು ಎತ್ತರಿಸಿರುವುದರಲ್ಲಿ ಆಶ್ಚರ್ಯವೇನಿಲ್ಲ. ಪ್ರತಿರೋಧವು ಕಾರ್ಮಿಕರ ಮಟ್ಟಿಗೆ ಮಾತ್ರ ಸೀಮಿತಗೊಂಡಿಲ್ಲ. ರಷ್ಯಾದ ಸೈನಿಕರು ಉಕ್ರೇನ್ ಮೇಲೆ ದಾಳಿ ಆರಂಭಿಸಿದ ನಂತರ, ನಾರ್ಡ್ ಸ್ಟ್ರೀಮ್ 2 ಅನಿಲ ಕೊಳವೆ ಮಾರ್ಗವನ್ನು ತೆರೆಯಬೇಕು ಎಂದು ಅದನ್ನು ಕಾರ್ಯನಿರ್ವಹಿಸಲು ಅನುಮತಿಸದ ಜರ್ಮನಿಯನ್ನು ಒತ್ತಾಯಿಸಿ ಆ ದೇಶದ ಸಾವಿರಾರು ಜನರು ಮೆರವಣಿಗೆ ನಡೆಸಿದರು. ಜೆಕ್ ಗಣರಾಜ್ಯದ ರಾಜಧಾನಿ ಪ್ರಾಗ್‌ನಲ್ಲಿ ಸೆಪ್ಟೆಂಬರ್ ತಿಂಗಳೊಂದರಲ್ಲೇ ನ್ಯಾಟೋ ವಿರುದ್ಧ ಸಾವಿರಾರು ಜನರು ಎರಡು ಬಾರಿ ಮೆರವಣಿಗೆ ನಡೆಸಿ, ದೇಶವು "ಮಿಲಿಟರಿ ದೃಷ್ಟಿಯಲ್ಲಿ ತಟಸ್ಥ"ವಾಗಿ ಉಳಿಯಬೇಕೆಂದು ಒತ್ತಾಯಿಸಿದ್ದಾರೆ.

ಈ ಪ್ರತಿಭಟನೆಗಳು ಜರ್ಮನಿ ಮತ್ತು ಬ್ರಿಟನ್‌ನಂತಹ ಪ್ರಮುಖ ದೇಶಗಳ ಅಧಿಕೃತ ರಾಜಕೀಯ ಪಕ್ಷಗಳ ಮೇಲೆ ಅಷ್ಟಾಗಿ ಪರಿಣಾಮ ಬೀರಿಲ್ಲ. ಸಂಪ್ರದಾಯಶರಣ ಪಕ್ಷಗಳು ಮಾತ್ರವಲ್ಲ, ಸಾಮಾಜಿಕ ಪ್ರಜಾಪ್ರಭುತ್ವವಾದಿ ಪಕ್ಷಗಳು ಮತ್ತು ಹಿಂದಿನ ಕಮ್ಯುನಿಸ್ಟ್ ಪಕ್ಷಗಳ ಅನುಯಾಯಿಗಳು ಕೂಡ ತಮ್ಮ ದೇಶಗಳ ಸರ್ಕಾರಗಳು ಕೆಲವು ಸಂದರ್ಭಗಳಲ್ಲಿ ಅಮೆರಿಕದ ನೀತಿಗೆ ಬೆಂಬಲ ಕೊಡುವುದನ್ನು ಸಮರ್ಥಿಸುತ್ತಿದ್ದಾರೆ. ಬ್ರಿಟಿಷ್ ಲೇಬರ್ ಪಾರ್ಟಿಯ ಸಮ್ಮೇಳನದಲ್ಲಿ, ಉಕ್ರೇನ್ ಸರ್ಕಾರಕ್ಕೆ ಬ್ರಿಟನ್ ಕೊಡುತ್ತಿರುವ ವಿವೇಚನಾರಹಿತ ಬೆಂಬಲದ ವಿರುದ್ಧ ಮಾತನಾಡಿದ ಏಕೈಕ ಪ್ರತಿನಿಧಿಯನ್ನು ಇತರ ಪ್ರತಿನಿಧಿಗಳು ಬಾಯಿಮುಚ್ಚಿಸಿದ್ದೂ ಅಲ್ಲದೆ, ಪಕ್ಷದಿಂದಲೂ ಅಮಾನತಿನಲ್ಲಿ ಇಟ್ಟಿದ್ದಾರೆ. ದುಡಿಯುವ ಜನರ ಬಗ್ಗೆ ಅಧಿಕೃತ ರಾಜಕೀಯ ಪಕ್ಷಗಳು ಹೊಂದಿರುವ ಈ ಮಟ್ಟದ ನಿರಾಸಕ್ತಿಯ ಲಾಭವನ್ನು ಯುರೋಪಿನ ನವ-ಫ್ಯಾಸಿಸ್ಟರು ಪಡೆಯುತ್ತಿರುವುದರಲ್ಲಿ ಆಶ್ಚರ್ಯವೇನಿಲ್ಲ.

ಕೆನರಾ ಬ್ಯಾಂಕ್: 11 ವರ್ಷಗಳಲ್ಲಿ ದೊಡ ಸುಸ್ತಿದಾರರ 1.29 ಲಕ್ಷ ಕೋಟಿ ರೂ.ಗಳ ಸಾಲಮನ್ನಾ

ಪುಟ 12 ರಿಂದ

ಮಾಹಿತಿ ಹಕ್ಕು ಕಾಯ್ದೆ ಈಗ ಎಷ್ಟು ಪರಿಣಾಮಕಾರಿ?

ಸರಕಾರೀ ಮತ್ತು ಸಾರ್ವಜನಿಕ ಸಂಸ್ಥೆಗಳ ಸಂಪರ್ಕಾಧಿಕಾರಿಗಳು ಈ ರೀತಿ ಕಾಯ್ದೆಯಲ್ಲಿನ ವಿನಾಯ್ತಿಗಳ ತಪ್ಪು ನಿರೂಪಣೆಗಳ ಮೂಲಕ ಕಾಯ್ದೆಯ ಆಶಯವನ್ನು ಹುಸಿಗೊಳಿಸುತ್ತಿದ್ದರೆ, ಸ್ವತಃ ಸರಕಾರವೇ ಆ ಕೆಲಸದಲ್ಲಿ ಸಹಾಯ ಮಾಡುತ್ತಿರುವಂತೆ ಕಾಣುತ್ತದೆ.

ಇತ್ತೀಚೆಗೆ 17 ವರ್ಷಗಳನ್ನು ಪೂರ್ಣಗೊಳಿಸಿದ ಮಾಹಿತಿ ಹಕ್ಕು ಕಾಯ್ದೆ, ಯಾವ ಆಶಯದಿಂದ ಅದನ್ನು ತರಲಾಗಿತ್ತೋ, ಅದನ್ನು ಈಗ ಎಷ್ಟರ ಮಟ್ಟಿಗೆ ಪೂರೈಸುತ್ತಿದೆ ಎಂಬುದರ ಬಗ್ಗೆ 'ಸತರ್ಕ್ ನಾಗರಿಕ್ ಸಂಘಟನ್' ಎಂಬ ಸರಕಾರದ ಪಾರದರ್ಶಕತೆ ಮತ್ತು ಜವಾಬುದಾರಿಕೆಯನ್ನು ಪ್ರೋತ್ಸಾಹಿಸುವ ಸಂಘಟನೆ ಒಂದು ವರದಿಯನ್ನು ತಯಾರಿಸಿದೆ. ಅದರ ಪ್ರಕಾರ, ಜೂನ್ 30ರ ವೇಳೆಗೆ 3,14,323 ಅಪೀಲುಗಳು ಮತ್ತು ದೂರುಗಳು 26 ಮಾಹಿತಿ ಆಯೋಗಗಳ ಮುಂದೆ ಬಾಕಿ ಉಳಿದಿವೆ. ಇದು ಈ ಕಾಯ್ದೆಯನ್ನು ಪ್ರಶ್ನಾರ್ಹಗೊಳಿಸಬಹುದು ಎಂದು ವರದಿ ಆತಂಕ ವ್ಯಕ್ತಪಡಿಸಿದೆ.

ಈ ಕಾಯ್ದೆಯ ಜಾರಿಗೆ ಎಂದು ರಚಿಸಿರುವ 29 ರಾಜ್ಯ ಮಾಹಿತಿ ಆಯೋಗಗಳಲ್ಲಿ ಎರಡು– ಝಾರ್ಖಂಡ್ ಮತ್ತು ತ್ರಿಪುರಾ– ಸಂಪೂರ್ಣವಾಗಿ ಸ್ತಬ್ಧಗೊಂಡಿವೆ. ಏಕೆಂದರೆ ಈ ಆಯೋಗಗಳ ಮುಖ್ಯ ಆಯುಕ್ತರು ಸೇರಿದಂತೆ ಎಲ್ಲ ಹುದ್ದೆಗಳು ಖಾಲಿ ಇವೆ.

ಇವಲ್ಲದೆ ನಾಲ್ಕು ರಾಜ್ಯ ಮಾಹಿತಿ ಆಯೋಗಗಳು ಮುಖ್ಯ ಮಾಹಿತಿ ಆಯುಕ್ತರುಗಳಿಲ್ಲದೆಯೇ ಕೆಲಸ ಮಾಡುತ್ತಿವೆ. ಕರ್ನಾಟಕ ಸೇರಿದಂತೆ 4 ರಾಜ್ಯಗಳ ಮಾಹಿತಿ ಆಯೋಗಗಳಲ್ಲಿ ಸಾಕಷ್ಟು ಸಂಖ್ಯೆಯಲ್ಲಿ ಆಯುಕ್ತರ ಹುದ್ದೆಗಳು ಖಾಲಿ ಉಳಿದಿವೆ. ಕೇಂದ್ರೀಯ ಮಾಹಿತಿ ಆಯೋಗದಲ್ಲಿಯೂ ಮೂರು ಆಯುಕ್ತರ ಹುದ್ದೆಗಳನ್ನು ಬಹಳ ಸಮಯದಿಂದ ಭರ್ತಿ ಮಾಡಿಲ್ಲ.

ಜಗತ್ತಿನಾದ್ಯಂತ ಬಲಪಂಥೀಯ ಸರಕಾರಗಳ ಕಾರ್ಮಿಕ-ವಿರೋಧಿ ಧೋರಣೆಗಳು ಮತ್ತು ನವ-ಉದಾರವಾದಿ ನೀತಿಗಳ ಕಟ್ಟುನಿಟ್ಟಿನ ಜಾರಿಯ ವಿರುದ್ಧ ಕಾರ್ಮಿಕರು ಹೋರಾಡುತ್ತಾ ಬಂದಿದ್ದಾರೆ. ಕಾರ್ಪೊರೇಟ್ ಲಾಭದಾಹ ಕಾರ್ಮಿಕರ ಶೋಷಣೆ ತೀವ್ರವಾಗಲು ಬಡತನ, ನಿರುದ್ಯೋಗ ಹೆಚ್ಚಲು ಕಾರಣವಾಗಿದೆ. ಹಿಂದೆ ಕೊವಿದ್ ಪರಿಸ್ಥಿತಿ ಮತ್ತು ಈಗ ಉಕ್ರೇನ್ ಯುದ್ಧದ ನೆಪದಲ್ಲಿ ಶೋಷಣೆ, ದಮನಗಳನ್ನು ಇನ್ನಷ್ಟು ಕಟುವಾಗಿಸಿವೆ. ಇದರ ವಿರುದ್ಧ ಆಕ್ರೋಶ, ಪ್ರತಿಭಟನೆ ಹೆಚ್ಚುತ್ತಿದ್ದು ಕಾರ್ಮಿಕರ ಮುಷ್ಕರಗಳು ಹೆಚ್ಚುತ್ತಿವೆ. ಈ ಬೆಳವಣಿಗೆಯ ಉತ್ತಮ ಉದಾಹರಣೆಗಳಾದ ಗ್ರೀಕ್ ಕಾರ್ಮಿಕರ ಸಾರ್ವತ್ರಿಕ ಮುಷ್ಕರದ ಕರೆ ಮತ್ತು ಯು.ಎಸ್. ರೈಲು ಕಾರ್ಮಿಕರ ದೇಶವ್ಯಾಪಿ ಮುಷ್ಕರದ ಅಪಾಯದ ಕುರಿತು ವರದಿಗಳು.

ಗ್ರೀಸ್: ದಮನ, ಖಾಸಗೀಕರಣ, ಬೆಲೆಏರಿಕೆಗಳ ವಿರುದ್ಧ ಸಾರ್ವತ್ರಿಕ ಮುಷ್ಕರ



ಗ್ರೀಕ್ ಕಾರ್ಮಿಕರು ಕಾರ್ಪೊರೇಟ್ ಮತ್ತು ಸರಕಾರಗಳ ದಮನ ಕ್ರಮಗಳು, ಖಾಸಗೀಕರಣ ಮತ್ತು ಜೀವನಾಶ್ಯಕ ವಸ್ತುಗಳ ಬೆಲೆ ಏರಿಕೆ ಇವುಗಳನ್ನು ವಿರೋಧಿಸಿ ಹಲವು ಹೋರಾಟಗಳಲ್ಲಿ ತೊಡಗಿದ್ದಾರೆ. ಈ ಹೋರಾಟಗಳನ್ನು ತೀವ್ರಗೊಳಿಸುವ ಭಾಗವಾಗಿ ನವೆಂಬರ್ 9ರಂದು ಕಾರ್ಮಿಕ ಸಂಘಗಳ ಕೇಂದ್ರೀಯ ಸಂಘಟನೆ ಪಾಮೆ (All Workers Militant Front - PAME) ಸಾರ್ವತ್ರಿಕ ಮುಷ್ಕರಕ್ಕೆ ಕರೆ ನೀಡಿದೆ.

ಲಾರ್ಕೊ (General Mining and Metallurgical Company - LARCO) ಎಂಬ ಸರಕಾರಿ ಒಡೆತನದ ಗಣಿ ಮತ್ತು ಲೋಹ ಕಂಪನಿಯ ಕಾರ್ಮಿಕರು, ಅದನ್ನು ಮುಚ್ಚುವ ಮತ್ತು ಖಾಸಗೀಕರಿಸುವುದರ ವಿರುದ್ಧ ಕಳೆದ ಮೂರು ವರ್ಷಗಳಿಂದ ಹೋರಾಡುತ್ತಿದ್ದಾರೆ. ಅವರ ಹೋರಾಟಕ್ಕೆ ಸೌಹಾರ್ದ ಬೆಂಬಲ ವ್ಯಕ್ತಪಡಿಸಲು ಅಕ್ಟೋಬರ್ 9 ರಂದು ಲಾರಿಮ್ನಾ ಎಂಬ ಪಟ್ಟಣದ ಮುಖ್ಯಚೌಕದಲ್ಲಿ ಸಂಗೀತ ಕಚೇರಿ ಏರ್ಪಡಿಸಲಾಗಿತ್ತು. ಇದರಲ್ಲಿ ಭಾರೀ ಸಂಖ್ಯೆಯಲ್ಲಿ ಕಾರ್ಮಿಕರು ಮತ್ತು ಸಾರ್ವಜನಿಕರು ಭಾಗವಹಿಸಿದ್ದರು.

ಮಲಾಮತಿನಾ ವೈನರಿ ಮತ್ತು ಹೆಲ್ಲಾಸ್ ಚಿನ್ನದ ಗಣಿಯ ಕಾರ್ಮಿಕರು ಕಾರ್ಮಿಕರ ಜತೆ ಮ್ಯಾನೇಜ್ ಮೆಂಟ್ ಸಾಮೂಹಿಕ ಒಪ್ಪಂದಕ್ಕೆ ಬರಬೇಕೆಂದು ಸಮರಶೀಲ ಹೋರಾಟ ನಡೆಸಿದ್ದು, ಹಲವು ಕಾರ್ಮಿಕರನ್ನು ವಜಾ ಮಾಡಲಾಗಿದೆ. ಈ ಎರಡು ಕಂಪನಿಗಳ ಕಾರ್ಮಿಕರಿಗೆ ಸೌಹಾರ್ದ ಬೆಂಬಲ ಸೂಚಿಸಿ ಥೆಸ್ಸಾಲೊನಿಕಿ ನಗರದಲ್ಲಿ ಭಾರೀ ಪ್ರತಿಭಟನಾ ಪ್ರದರ್ಶನ ನಡೆಸಲಾಯಿತು. ಆರೋಗ್ಯ ಕ್ಷೇತ್ರದಲ್ಲಿ ಪ್ರತಿಭಟನಾ ಪ್ರದರ್ಶನವನ್ನು ಏರ್ಪಡಿಸಿದ್ದಕ್ಕಾಗಿ ಗ್ರೀಸ್ ಆಸ್ಪತ್ರೆ ಡಾಕ್ಟರುಗಳ ಸಂಘ (OENGE) ದ ಅಧ್ಯಕ್ಷರ ವಿರುದ್ಧ ಶಿಸ್ತು ಕ್ರಮ ಕೈಗೊಳ್ಳಲಾಗಿದೆ.

ಗ್ರೀಸ್ ನ ಬಲಪಂಥೀಯ ನ್ಯೂ ಡೆಮೊಕ್ರಸಿ ನಾಯಕತ್ವದ ಸರಕಾರ ತಂದಿರುವ ಕಾರ್ಮಿಕ-ವಿರೋಧಿ ಕಾರ್ಮಿಕ ಕಾನೂನುಗಳನ್ನು ಬಳಸಿ ಕಂಪನಿ ಮ್ಯಾನೇಜ್ ಮೆಂಟುಗಳು ಹೋರಾಟದಲ್ಲಿ ಮತ್ತು ಸಂಘ ಕಟ್ಟುವುದರಲ್ಲಿ ತೊಡಗಿರುವ ಕಾರ್ಮಿಕರ ವಿರುದ್ಧ ವಜಾ, ಶಿಸ್ತುಕ್ರಮ ಮುಂತಾದ ದಮನಕ್ರಮಗಳಲ್ಲಿ ತೊಡಗಿವೆ. ಸರಕಾರದ ಕಾರ್ಪೊರೇಟ್-ಪರ ಕಾರ್ಮಿಕ-ವಿರೋಧಿ ನೀತಿಗಳ ವಿರುದ್ಧ ಕಾರ್ಮಿಕರು ಎಲ್ಲೆಡೆ ಹೋರಾಡುತ್ತಿದ್ದಾರೆ. ಸರಕಾರಿ ಕಂಪನಿಗಳನ್ನು ಮುಚ್ಚುವ ಅಥವಾ ಖಾಸಗೀಕರಿಸುವ ನೀತಿಗಳ ವಿರುದ್ಧವೂ ಹೋರಾಡುತ್ತಿದ್ದಾರೆ. ಅದರ ಜತೆ ಉಕ್ರೇನ್ ಯುದ್ಧದ ನಂತರ ಇಂಧನ ಮತ್ತು ಎಲ್ಲ ಜೀವನಾವಶ್ಯಕ ಬೆಲೆಗಳ ವಿಪರೀತ ಏರಿಕೆ ಕಾರ್ಮಿಕರ ಜೀವನವನ್ನು ದುರ್ಭರಗೊಳಿಸಿದೆ.

ಇವೆಲ್ಲದರ ವಿರುದ್ಧ ಹಲವು ಕಾರ್ಮಿಕ ಸಂಘಗಳು ಆಕ್ರೋಶಗೊಂಡಿದ್ದು ಕಾರ್ಮಿಕ ಸಂಘಗಳ ಕೇಂದ್ರೀಯ ಸಂಘಟನೆ ಪಾಮೆ (PAME) ನವೆಂಬರ್ 9 ರಂದು ಸಾರ್ವತ್ರಿಕ ಮುಷ್ಕರಕ್ಕೆ ಕರೆ ಕೊಟ್ಟಿದೆ. ಬೆಲೆಏರಿಕೆ ಸರಿದೂಗಿಸುವ ವೇತನ ಏರಿಕೆ, ಸಾಮೂಹಿಕ ಒಪ್ಪಂದಗಳು, ಜೀವನ ವೆಚ್ಚ ನಿಯಂತ್ರಿಸುವ ನಿರ್ದಿಷ್ಟ ಕ್ರಮಗಳನ್ನು ಕೈಗೊಳ್ಳುವಂತೆ ಸರಕಾರದ ಮೇಲೆ ಈ ಸಾರ್ವತ್ರಿಕ ಮುಷ್ಕರ ಒತ್ತಡ ಹೇರಲಿದೆ.

“ಕಾರ್ಮಿಕರು ಎದುರಿಸುತ್ತಿರುವ ಪ್ರತಿಯೊಂದು ಸಮಸ್ಯೆ, ಬಿಕಟ್ಟು ಹಾಗೂ ಬಡತನ, ದಮನ, ಹರಾಜು, ಯುದ್ಧ-ಇವೆಲ್ಲವುಗಳ ಹಿಂದಿರುವ ಮೂಲ ಕಾರಣ ಹಿಂದೆಯೂ ಇಂದೂ ಒಂದೇ. ಉದ್ಯಮಗಳ ನೀಗಿಸಲಾಗದ ಲಾಭದ ದಾಹ! ಆದ್ದರಿಂದಾಗಿಯೇ ಇಂಧನಗಳ ಕಾಳಸಂತೆಕೋರರ ಲಾಭ ರಕ್ಷಿಸುತ್ತಾರೆ, ಅದೇ ಸಮಯದಲ್ಲಿ ಶೋಷಣೆ, ದಮನಗಳನ್ನು ತೀವ್ರಗೊಳಿಸಿ ಗಟ್ಟಿಗೊಳಿಸುತ್ತಾರೆ.” ಎಂದು ಪಾಮೆ ಸಾರ್ವತ್ರಿಕ ಮುಷ್ಕರಕ್ಕೆ ಕಾರಣವಾದ ಇಂದಿನ ಸನ್ನಿವೇಶವನ್ನು ವಿಶ್ಲೇಷಿಸಿದೆ. ಪಾಮೆ ಖಾಸಗಿ ಕ್ಷೇತ್ರದಲ್ಲಿ 825 ಯುರೋ (802 ಡಾಲರು) ಗಳ ಕನಿಷ್ಠ ವೇತನ, ಸಾರ್ವಜನಿಕ ಕ್ಷೇತ್ರದಲ್ಲಿ ಶೇ.20 ವೇತನ ಏರಿಕೆಯ ಹಕ್ಕೊತ್ತಾಯ ಮುಂದಿಟ್ಟಿದೆ.

ಜೀವನ ವೆಚ್ಚ ಸರಿದೂಗಿಸಿ ನಿಭಾಯಿಸಲು ಅನುವಾಗುವಂತೆ ಸರಕಾರ ಈ ಮುಂದಿನ ಕ್ರಮಗಳನ್ನು ತೆಗೆದುಕೊಳ್ಳಬೇಕೆಂದು ಒತ್ತಾಯಿಸಿದೆ: ವಿದ್ಯುತ್ ಮತ್ತು ಗ್ಯಾಸ್ ಬೆಲೆ ಬೆಲೆಗಳ ಮೇಲೆ ಮಿತಿ ಹೇರಬೇಕು ಮತ್ತು ಬೆಲೆ ಇಳಿಸಬೇಕು. ತೈಲ, ಗ್ಯಾಸ್ ಮತ್ತು ವಿದ್ಯುತ್ ಗಳ ಮೇಲಿನ ಎಕ್ಸೈಸ್ ಮತ್ತು ಮೌಲ್ಯವರ್ಧಿತ ತೆರಿಗೆಗಳನ್ನು ತೆಗೆದು ಹಾಕಬೇಕು. ಪ್ರಾಥಮಿಕ ಜೀವನಾವಶ್ಯಕ ಆಹಾರ, ಬಟ್ಟೆಗಳ ಬೆಲೆಗಳ ಮೇಲೆ ಮಿತಿ ಹೇರಬೇಕು ಮತ್ತು ಬೆಲೆ ಇಳಿಸಬೇಕು. ಕೃಷಿ ಉತ್ಪನ್ನಗಳಿಗೆ ಕನಿಷ್ಠ ಬೆಲೆ ಖಾತ್ರಿಪಡಿಸಬೇಕು ಮತ್ತು ಉತ್ಪಾದನಾ ವೆಚ್ಚ ಕಡಿಮೆ ಮಾಡಲು ಕ್ರಮ ಕೈಗೊಳ್ಳಬೇಕು. ಕಾರ್ಮಿಕರು ಮತ್ತು ಉದ್ಯೋಗಿಗಳ ಸಾಲ ಮನ್ನಾ ಮಾಡಬೇಕು. ಕಾರ್ಮಿಕರ ಮೊದಲ ಮತ್ತು ಕೊನೆಯ ಶಿಫ್ಟ್ ಸಮಯದಲ್ಲಿ ಉಚಿತ ರೂಟ್ ಗಳನ್ನು ಮತ್ತೆ ಆರಂಭಿಸಬೇಕು. ಸಾರ್ವಜನಿಕ ಸಾರಿಗೆಯ ಟಿಕೆಟ್ ಬೆಲೆಯಲ್ಲಿ ಶೇ.50 ಕಡಿತ ಮಾಡಬೇಕು. ವಿದ್ಯಾರ್ಥಿಗಳು, ನಿರುದ್ಯೋಗಿಗಳು, ವಿಕಲಾಂಗರು ಮತ್ತು ಪಿಂಚಣಿದಾರರಿಗೆ ಉಚಿತ ಸಾರಿಗೆ ಕೊಡಬೇಕು. ಕಾರ್ಮಿಕರು, ವಿದ್ಯಾರ್ಥಿಗಳು, ಸಣ್ಣ ಉದ್ಯಮಗಳಿಗೆ ಬಾಡಿಗೆ ಸಬ್ಸಿಡಿ ಕೊಡಬೇಕು. ಸಬ್ಸಿಡಿ ಗೆ ಅರ್ಹತೆಯ ಶರತ್ತುಗಳನ್ನು ಉದಾರಗೊಳಿಸಬೇಕು ಮತ್ತು ಸಬ್ಸಿಡಿ ದರ ಏರಿಸಬೇಕು.

ಜಗದ ಸುತ್ತ
ವಸಂತರಾಜ್ ಎನ್.ಕೆ.

ಯು.ಎಸ್. ರೈಲು ಕಾರ್ಮಿಕರ ದೇಶವ್ಯಾಪಿ ಮುಷ್ಕರ

ಯು.ಎಸ್ ರೈಲು ಕಾರ್ಮಿಕರು ರೈಲು ಕಂಪನಿಗಳು ಕೊಟ್ಟಿರುವ ಒಪ್ಪಂದವನ್ನು ತಿರಸ್ಕರಿಸಿದ್ದು, ದೇಶವ್ಯಾಪಿ ರೈಲು ಮುಷ್ಕರದ ಅಪಾಯವನ್ನು ಹೆಚ್ಚಿಸಿದೆ. ಅನಾರೋಗ್ಯ ರಜಾದ ಅಭಾವ, ಹಿಂಡಿ ಹಿಪ್ಪೆ ಮಾಡುವ ಕೆಲಸದ ಅವಧಿ ಮುಂತಾದ ಕೆಟ್ಟ ಕೆಲಸದ ಪರಿಸ್ಥಿತಿಗಳನ್ನು ಬದಲಾಯಿಸಲು ಒಪ್ಪಂದ ನಿರಾಕರಿಸಿದೆ ಎಂಬುದು ಈ ತಿರಸ್ಕಾರಕ್ಕೆ ಕಾರಣವೆನ್ನಲಾಗಿದೆ.

ರೈಲು ಕಾರ್ಮಿಕರು ಯು.ಎಸ್ ಆರ್ಥಿಕದ ಮೇಲೆ ಭಾರೀ ಪ್ರಭಾವ ಹೊಂದಿದ್ದಾರೆ. ಸುಮಾರು 1.15 ಲಕ್ಷದಷ್ಟು ಕಾರ್ಮಿಕರ ಸಂಖ್ಯಾಬಲವನ್ನು ಹೊಂದಿರುವ ರೈಲು ಉದ್ಯಮದ ಸರಕು ಸಾಗಾಣಿಕೆ ವಹಿವಾಟು 8 ಸಾವಿರ ಕೋಟಿ ಡಾಲರಿನಷ್ಟು ಮೌಲ್ಯವಿರುವಂಥದ್ದು.

ಅಕ್ಟೋಬರ್ 10ರಂದು ರೈಲು ಕಾರ್ಮಿಕರ ಮೂರನೇಯ ಅತಿ ದೊಡ್ಡ ಯೂನಿಯನ್ ಆದ BMWED (Brotherhood of Maintenance of Way Employees) ರೈಲು ಕಂಪನಿಗಳ ಒಪ್ಪಂದದ ಪ್ರಸ್ತಾವವನ್ನು ತಿರಸ್ಕರಿಸಿದೆ. ಆ ಮೂಲಕ ಯು.ಎಸ್ ಆರ್ಥಿಕತೆಯನ್ನು ಸ್ಥಗಿತಗೊಳಿಸಬಲ್ಲ ರಾಷ್ಟ್ರವ್ಯಾಪಿ ರೈಲು ಮುಷ್ಕರದ ಅಪಾಯವನ್ನು ಮತ್ತೆ ಮುನ್ನೆಲೆಗೆ ತಂದಿದೆ. ರೈಲು ಕಂಪನಿಗಳು ಮತ್ತು ಯೂನಿಯನುಗಳ ನಡುವೆ ಮಾತುಕತೆಗಳು ಮುರಿದು ಬಿದ್ದಾಗ, ಸೆಪ್ಟೆಂಬರ್ 15ರಂದು ಬಿಡೆನ್ ಆಡಳಿತ ಮಧ್ಯಪ್ರವೇಶ ಮಾಡಿತ್ತು. ಆಗ ಅಧ್ಯಕ್ಷೀಯ ತುರ್ತು ಬೋರ್ಡು ಕೊಟ್ಟ ಶಿಫಾರಸುಗಳ ಮೇಲೆ ರೈಲು ಕಂಪನಿಗಳ ಪ್ರಸ್ತಾವ ಆಧಾರಿತವಾಗಿತ್ತು ಎಂಬುದನ್ನು ಇಲ್ಲಿ ನೆನಪಿಸಿಕೊಳ್ಳಬಹುದು.

ಜುಲೈ ನಲ್ಲಿ ಮೊದಲ ಬಾರಿಗೆ ರಾಷ್ಟ್ರವ್ಯಾಪಿ ರೈಲು ಮುಷ್ಕರದ ಅಪಾಯ ತಲೆದೋರಿದಾಗ ಈ ಅಧ್ಯಕ್ಷೀಯ ತುರ್ತು ಬೋರ್ಡನ್ನು ರಚಿಸಲಾಗಿತ್ತು. ಬೋರ್ಡು ಕೊಟ್ಟ ಶಿಫಾರಸುಗಳು ವೇತನ ಏರಿಕೆಯ ಕಾರ್ಮಿಕರ ಹಕ್ಕೊತ್ತಾಯಗಳನ್ನು ಒಳಗೊಂಡಿದ್ದವು. ಆದರೆ ಕೆಲಸದ ಪರಿಸ್ಥಿತಿಯ ಕುರಿತು ಕಾರ್ಮಿಕ ಸಂಘಗಳು ತಮ್ಮ ರೈಲು ಕಂಪನಿಗಳೊಂದಿಗೆ ಮಾತುಕತೆ ಮೂಲಕ ಬಗೆಹರಿಸಬೇಕೆಂದು ಬೋರ್ಡು ಶಿಫಾರಸು ಮಾಡಿತ್ತು. ಇದು ಬಹಳ ಸಮಯ ತೆಗೆದುಕೊಳ್ಳುವಂಥದ್ದು ಮತ್ತು ಹೆಚ್ಚು ಕಡಿಮೆ ಅಸಾಧ್ಯವಾದದ್ದು ಎಂಬುದು ಕಾರ್ಮಿಕರಿಗೆ ಗೊತ್ತಿರುವುದರಿಂದ ಅವರು ಈ ಕುರಿತು ಪಟ್ಟು ಹಿಡಿದಿದ್ದಾರೆ.

ಯು.ಎಸ್ ರೈಲು ಕಾರ್ಮಿಕರು ಮೂರು ಯೂನಿಯನುಗಳಲ್ಲಿ ಸಂಘಟಿತರಾಗಿದ್ದು BMWED ಒಪ್ಪಂದವನ್ನು ತಿರಸ್ಕರಿಸಿದ ಮೊದಲ ಯೂನಿಯನ್ ಆಗಿದೆ. ಈ ಯೂನಿಯನ್ ಒಪ್ಪಂದ ಒಪ್ಪಿಕೊಳ್ಳಬೇಕೆ ಬೇಡವೇ ಎಂಬುದರ ಕುರಿತು ಮತದಾನ ನಡೆಸಿದ್ದು ಶೇ.56 ರಷ್ಟು ಕಾರ್ಮಿಕರು ಒಪ್ಪಂದವನ್ನು ತಿರಸ್ಕರಿಸಿದ್ದಾರೆ. ಈ ತಿರಸ್ಕಾರದಿಂದಾಗಿ ಕಂಪನಿಗಳು ಹೊಸ ಒಪ್ಪಂದವನ್ನು ಕೊಡಬೇಕಾಗಿದೆ. ಇಲ್ಲದಿದ್ದರೆ ಯೂನಿಯನ್ ನವೆಂಬರ್ 19 ರಂದು ಮುಷ್ಕರ ಆರಂಭಿಸುವುದಾಗಿ ಯೂನಿಯನ್ ಹೇಳಿದೆ. ಈ ಒಪ್ಪಂದವನ್ನು 7 ಪ್ರಥಮ ದರ್ಜೆಯ ರೈಲು ಸರಕು ಸಾಗಾಣಿಕೆ ಕಂಪನಿಗಳು ಕೊಟ್ಟಿದ್ದವು. ಉಳಿದೆರಡು ದೊಡ್ಡ ಯೂನಿಯನುಗಳಾದ BLET and SMART-TD ಒಪ್ಪಂದದ ಕುರಿತು ನವೆಂಬರ್ ನಲ್ಲಿ ತಮ್ಮ ಕಾರ್ಮಿಕ ಸದಸ್ಯರ ಅಭಿಪ್ರಾಯ ಸಂಗ್ರಹಿಸಲಿವೆ.

ಪ್ರಸ್ತಾವಿತ ಒಪ್ಪಂದದಲ್ಲಿ ಶೇ.24ರಷ್ಟು ವೇತನ ಏರಿಕೆ ಮತ್ತು 5000 ಡಾಲರುಗಳ ಬೋನಸ್ ಸೇರಿದೆ. ಆದರೆ ಅನಾರೋಗ್ಯ ರಜಾದ ಅಭಾವ, ಹಿಂಡಿ ಹಿಪ್ಪೆ ಮಾಡುವ ಬಿಡುವಿಲ್ಲದ ದೀರ್ಘ ಕೆಲಸದ ಅವಧಿ ಮುಂತಾದ ಕೆಟ್ಟ ಕೆಲಸದ ಪರಿಸ್ಥಿತಿಗಳಿಂದ ಕಾರ್ಮಿಕರು ನರಳುತ್ತಿದ್ದಾರೆ. ರೈಲು ಕಂಪನಿಗಳು ತಮ್ಮ ಲಾಭಾಂಶ ಹೆಚ್ಚಿಕೊಳ್ಳಲು 2015-2021 ಅವಧಿಯಲ್ಲಿ ಕಾರ್ಮಿಕರ ಸಂಖ್ಯೆಯನ್ನು 1.61 ಲಕ್ಷದಿಂದ 1.15 ಲಕ್ಷಕ್ಕೆ ಕಡಿತಗೊಳಿಸಿದೆ. ಇದೇ ಅವಧಿಯಲ್ಲಿ ಸರಕು ಸಾಗಾಣಿಕೆ ಪ್ರಮಾಣ ಏರಿಕೆ ಕಂಡಿದೆ. ಕಾರ್ಮಿಕರ ಜೀವನದ ಗುಣಮಟ್ಟದ ಕುರಿತು ಕಂಪನಿಗಳಿಗೆ ಕಿಂಚಿತ್ತು ಕಾಳಜಿಯಿಲ್ಲವೆಂಬುದು ಸ್ಪಷ್ಟ. ಇದು ಕಾರ್ಮಿಕರನ್ನು ರೊಚ್ಚಿಗೆಬ್ಬಿಸಿದೆಯೆಂದು BMWED ಅಧ್ಯಕ್ಷ ಟೋನಿ ಕಾರ್ಡ್ ವೆಲ್ ಹೇಳಿದ್ದಾರೆ.



NEW No. MAG(3)/NPP/205/2021-2022
JANASHAKTHI KANNADA VARA PATRIKE OCTOBER 17-23, 2022 Price: Rs. 10/- Date of Publication: 14 October 2022 RNI No. KARKAN /2006/17926 Posted on 18-10-2022
"REGISTERD" Postal Reg. No. RNP/KA/BGS/2078/2019-21 Posted at BG PSO, BG - 560026 Licensed to Post without prepayment License No. PMG/BG/WPP-283/2019-21 **Posted at Periodical Rate -** Rs. 2

JANASHAKTHI KANNADA VARA PATRIKE: Printed, Published by **U. BASAVARAJ**, No. 37/a, 8th Cross, EMS Bhavan, Mahalakshmi Layout, Bangalore 560086, Karnataka on behalf of **COMMUNIST PARTY OF INDIA (MARXIST)** and **Printed at : Kriya Prakashana,** No. 12, 18th Cross, Sampangirama Nagar, Bangalore 560027 Editor : **NITYANANDASWAMI**